then is not good. I, therefore, think that there must be some order in which seats should be arranged. There are two methods. One is that I can do it myself. The other is that I may do it in consultation with members belonging to different groups. I intend consulting the members belonging to different groups and the party in power in this matter. After consulting them, I want to take action.

Sri M. C. NARSIMHAN (Kolar Gold Fields).—Sir, I want the Government to furnish us a statement indicating the extent to which the promises made in the previous sessions have been implemented as also a copy of the memorandum submitted to the Finance Commission about which a mention has been made in the Governor's Address. Yesterday, the Chief Minister was pleased to state that he would give the details of the various schemes included in the Second Five-Year Plan. That may also be furnished to us.

Mr. SPEAKER.—The question of implementation of promises made by Government is under my active consideration. I am just waiting for the new rules to be adopted by the House. As soon as they are adopted, we will form a committee to go into the whole question of assurances and promises made by the Government and to see to what extent they have been fulfilled or not. After going into the question, the Committee will suggest what action the House has to take in respect of them.

As regards the memorandum that was placed before the Finance Commission, I hope the Government will do something in this respect. They may kindly place on the table of the House a copy of the memorandum that was placed before the Finance Commission. There is no secret about it. For some time it may be kept as a secret, but it should not be kept as a secret so far as the House is concerned. I know it for certain that in Bombay the memoranda submitted to the Finance Commision and the Taxation Enquiry Commission were placed on the table of the House. I do not know what are the views of the Finance Minister in this respect. I would like to hear him before I give a final decision in the matter.

As regards the Second Five-Year Plan, a copy of it will be placed on the table of each member.

---

## Adjournment Motion.

Sri C.J. MUCKKANNAPPA (Gubbi)—May I know Sir, what happened to my adjournment motion ?

Mr. SPEAKER.—Nothing has happened. It is still under consideration.

---

## MOTION ON GOVERNOR'S ADDRESS

*(Debate continued.)*

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ವಂದನಾರ್ಪಣೆ ನಿರ್ಣಯದ ಮೇಲೆ ಮಾತನಾಡುವಾಗ ಕೆಲವೊಂದು ವಿಷಯಗಳನ್ನು ಮಾತ್ರ ನಾನು ಸ್ಪಷ್ಟ ಪಡಿಸಬೇಕೆಂದು ನಿರ್ಧಾರ ಮಾಡಿಕೊಂಡಿದ್ದೇನೆ. ಸ್ವಾಮಿ, ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ರಾಜ್ಯದಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನೂ ಮತ್ತು ದೊಡ್ಡ ನೀರಾವರಿ ಯೋಜನೆಗಳನ್ನೂ ಕೈಕೊಳ್ಳಬೇಕೆಂದಿದೆ, ಬಳ್ಳಾರಿ ಜಿಲ್ಲೆಯಲ್ಲಿ ರತಕ್ಕ ಹಗರಿಬೊಮ್ಮನಹಳ್ಳಿ ಯೋಜನೆಯನ್ನೂ ಸಹ ಯೋಜನಾ ಆಯೋಗದವರು ಒಪ್ಪಿಕೊಂಡಿದ್ದಾರೆ, ಆದನ್ನೂ ಆದರಲ್ಲಿ ಸೇರಿಸಿದ್ದೇವೆ ಎಂದು ರಾಜ್ಯಪಾಲರು ಅಪ್ಪಣೆ ಕೊಡಿಸಿದ್ದಾರೆ. ನಾವು ಆ ವಿಷಯವನ್ನು ಸ್ವಾಗತ ಮಾಡುತ್ತೇವೆ. ಈ ಯೋಜನೆಯಲ್ಲಿ ಇನ್ನೊಂದು ವಿಷಯ ಸೇರಿಸಬೇಕಾಗಿತ್ತು. ಹಿಂದೆ ಅನೇಕಸಲ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು ನಮ್ಮ ಜಿಲ್ಲೆಯಲ್ಲಿ ಪ್ರವಾಸಮಾಡಿದಾಗ ನನ್ನ ಕ್ಷೇತ್ರವಾದ ಹೊಸಪೇಟೆ ತಾಲ್ಲೂಕು ಡಣಾಯಕನಕೆರೆಗೆ ಮಲ್ಪೆ ಪ್ರಾಜೆಕ್ಟಿನಿಂದ ನೀರನ್ನೊದಗಿಸಬೇಕೆಂದು ಕೇಳಿದ್ದಕ್ಕೆ ಉತ್ತರವಾಗಿ ಅದನ್ನು ಪರಿಶೀಲಿಸುತ್ತೇವೆಂದು ಸೂಚನೆಮಾಡಿ ಅದನ್ನೂ ಇದರಲ್ಲಿ ಸೇರಿಸುವುದಕ್ಕೆ ಏರ್ಪಾಡುಮಾಡುತ್ತೇವೆಂದು ಹೇಳಿದ್ದರು. ದಯವಿಟ್ಟು ಅ ವಿಚಾರವನ್ನೂ ಕೂಡ ಸೇರಿಸಿದ್ದರೆ ಉತ್ತಮವಾಗುತ್ತಿತ್ತು. ಆದರೆ ಇನ್ನೂ ಅದು ಸರ್ಕಾರದ ಪರಿಶೀಲನೆಯಲ್ಲೇ ಇದೆ, ಡಣಾಯಕನಕೆರೆ ಅಚ್ಚುಕಟ್ಟು ಸುಮಾರು ಒಂದು ಸಾವಿರ ಎಕರೆಗಳಷ್ಟಿದ್ದು, ಆದರಲ್ಲಿ ಹೆಚ್ಚುಭಾಗ ತುಂಗಭದ್ರ ನೀರಾವರಿ ಯೋಜನೆಯಿಂದ ಮುಳುಗಿ ಹೋಗಿ ಮರುನೆಲಸಿದ ಜನರಿಗೆ ತೊಂದರೆಯಾಗಿ ಕಷ್ಟ ಜೀವನ ಸಾಗಿಸುತ್ತಿದ್ದಾರೆ. ಆದ್ದರಿಂದ ಹಗರಿಬೊಮ್ಮನಹಳ್ಳಿ ಯೋಜನೆಯಿಂದ ಒಂದು ಫೀಡರ್ ನಾಲೆ ತಂದು ಈ ಕೆರೆಗೆ ನೀರನ್ನೊದಗಿಸುವುದರಿಂದ ಸಮೀಪದಲ್ಲಿರುವವರಿಗೆ ನೀರಿನ ಸೌಕರ್ಯ ಮಾಡಿಕೊಟ್ಟಹಾಗಾಗುತ್ತದೆ. ಆದಕಾರಣ ಈ ಯೋಜನೆಯನ್ನೂ ಕೂಡ ಸರ್ಕಾರದವರು ಪರಿಶೀಲಿಸಬೇಕೆಂದು ಸೂಚನೆಮಾಡುತ್ತಿದ್ದೇನೆ.

(ಶ್ರೀ ಎಂ. ಎಂ. ಪಾಟೀಲ್.)

ಇನ್ನು ರಸ್ತೆಗಳ ವಿಚಾರದಲ್ಲಿ ಹೇಳಬೇಕೆಂದರೆ ಬಳ್ಳಾರಿ ಜಿಲ್ಲೆಯಲ್ಲಿ ಅದರಲ್ಲೂ ಹಡಗಲಿ ತಾಲ್ಲೂಕಿನಲ್ಲಿ ಮಳೆಗಾಲ ಬಂದಾಗ ಯಾವ ಗ್ರಾಮಗಳಿಗೂ ಹೋಗುವುದಕ್ಕೆ ಸಾಧ್ಯವೇ ಇಲ್ಲದಿರುವ ಪರಿಸ್ಥಿತಿಯಿದೆ, ವಿಶೇಷವಾಗಿ ದ್ವಿತೀಯ ಪಂಚವಾರ್ಷಿಕಯೋಜನೆಯಲ್ಲಿ ಇಂಟರ್ ವಿಲೇಜ್ ಕಮ್ಯೂನಿಕೇಷನ್ ಏರ್ಪಡಿಸುವುದು ಬಹಳ ಸೂಕ್ತ ಎಂದು ನಾನು ತಿಳಿಸಬಯಸುತ್ತೇನೆ. ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳೇ ಇಲ್ಲವಾಗಿವೆ. ಕೆರೆಗಳ ನೀರನ್ನೇ ಕುಡಿದು ಕುಡಿದು ಆ ಜನರು ನಾರು ರೋಗ, ಹಕ್ಕಿ ರೋಗ ಮುಂತಾದ ರೋಗಗಳಿಗೆ ತುತ್ತಾಗಿದ್ದಾರೆ. ಹೊಳವಂಜಿ, ಉತ್ತಂಗಿ ಮುಂತಾದ ಹಳ್ಳಿಗಳಲ್ಲಿ ಉಂಟಾದ ವಿಶೇಷ ತೊಂದರೆ ಈ ರೋಗದಿಂದಲೇ. ಆದ್ದರಿಂದ ಕುಡಿಯುವ ನೀರಿನ ವ್ಯವಸ್ಥೆಗೆ ಈ ಭಾಗಗಳಲ್ಲಿ ತೀವ್ರಗಮನ ಕೊಡಬೇಕೆಂದು ಹೇಳುತ್ತೇನೆ. ಹಳ್ಳಿಗಾಡುಗಳಲ್ಲಿರುವ ಹರಿಜನರಿಗಿರುವ ಇನ್ನೊಂದು ತೊಂದರೆಯನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅಲ್ಲಿರತಕ್ಕ ಸಾರ್ವಜನಿಕ ಬಾವಿಗಳಲ್ಲಿ ಸವರ್ಣ ಹಿಂದುಗಳು ಅವರನ್ನು ನೀರು ಸೇದಗೊಡಿಸುವುದಿಲ್ಲ. ಒಂದು ಮಡಿಕೆ ಅಥವಾ ಗಡಿಗೆ ನೀರು ತೆಗೆದುಕೊಳ್ಳಬೇಕೆಂದರೂ, ಘಂಟೆಕಟ್ಟಲೆ ಕಾದು ನಿಂತಿದ್ದು ಯಾರಾದರೂ ಪುಣ್ಯಾತ್ಮರು ಕನಿಕರವಿಟ್ಟು ನೀರು ಸೇದಿ ಅವರ ಪಾತ್ರೆಗೆ ಸುರಿದರೆ ಅವರಿಗೆ ನೀರು, ಇಲ್ಲದಿದ್ದರೆ ಅವರ ಪಾಡು ಹೇಳುವ ಹಾಗಿಲ್ಲ. ಇದನ್ನು ತಪ್ಪಿಸಲು ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಮತ್ತೊಂದು ವಿಚಾರ ತುಂಗಭದ್ರಾ ಪ್ರಾಜೆಕ್ಟ್ ಪ್ರದೇಶದಲ್ಲಿ ಈಗಾಗಲೆ ದೊಡ್ಡ ರೀತಿಯಲ್ಲಿ ಒಂದು ವರ್ಕ್‌ಷಾಪ್ ನಡೆಯುತ್ತಿದೆ. ಪ್ರಾಜೆಕ್ಟ್ ಕೆಲಸಕಾರ್ಯಗಳು ಮುಗಿಯುತ್ತಾ ಬಂದಿರುವುದರಿಂದ ಅಲ್ಲಿ ನಾನಾ ಭಾಗಗಳವರಿಗೆ ಬೇಕಾದ ಷಟ್ಟರ್‌ಗಳನ್ನು ಕೂಡ ಮಾಡುವುದನ್ನು ಕೈಕೊಂಡಿದ್ದಾರೆ. ಅಲ್ಲಿನ ಸುತ್ತಮುತ್ತ 150 ಮೈಲಿಯ ವಿಸ್ತೀರ್ಣದಲ್ಲಿ ಯಾವ ಔದ್ಯೋಗಿಕ ಶಾಲೆಯೂ ಇಲ್ಲ. ಈ ಕಾರಣದಿಂದ ಹೊಸಪೇಟೆ ಪ್ರಾಜೆಕ್ಟ್ ಪ್ರದೇಶದಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪನೆ ಮಾಡುವುದು ಬಹಳ ಸೂಕ್ತವೆಂದು ನಾನು ಹೇಳುತ್ತೇನೆ. ನಮ್ಮ ದೇಶದಲ್ಲಿ ಈಗ ತಾಂತ್ರಿಕ ಶಿಕ್ಷಣಕ್ಕೆ ಎಲ್ಲ ಅನುಕೂಲತೆಗಳನ್ನು ಅಗತ್ಯವಾಗಿ ಮಾಡಬೇಕಾದ ಕಾಲ ಬಂದಿದೆ. ಕೇಂದ್ರ ಸರ್ಕಾರದವರೂ ಇದನ್ನೇ ಹೇಳುತ್ತಿದ್ದಾರೆ. ಈ ದೃಷ್ಟಿಯಿಂದ ಅನೇಕ ಜನಗಳನ್ನು ಬೇರೆಬೇರೆ ದೇಶಗಳಿಗೆ ಕಳಿಸಿ ಕೊಡುತ್ತಲಿದ್ದಾರೆ. ಇಂಥ ಸಂದರ್ಭದಲ್ಲಿ ಇಲ್ಲಿರುವ ಈ ಎಲ್ಲ ಅನುಕೂಲತೆಗಳನ್ನೂ ಉಪಯೋಗಿಸಿಕೊಂಡು ಈ ಭಾಗದಲ್ಲೊಂದು ಇಂಜಿನಿಯರಿಂಗ್ ಕಾಲೇಜನ್ನು ತೆರೆಯುವುದು ಸೂಕ್ತವೆಂದು ನಾನು ಹೇಳುತ್ತೇನೆ.

ಇನ್ನೊಂದು ನನ್ನ ಅರಿಕೆಯೆಂದರೆ, ಬಳ್ಳಾರಿ ಜಿಲ್ಲಾ ಹೆಡ್ ಕ್ವಾರ್ಟರಿನಲ್ಲಿಯೇ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸುವುದು ಅವಶ್ಯಕ. ಬಳ್ಳಾರಿ ಆಸ್ಪತ್ರೆಯಲ್ಲಿ 300 ಬೆಡ್ ಗಳಿವೆ. ಹೀಗೆ ಅವಶ್ಯಕವಾದ ನಾನಾ ಅನುಕೂಲತೆಗಳೂ ಇರುವಾಗ ಅಲ್ಲೊಂದು ಮೆಡಿಕಲ್ ಕಾಲೇಜನ್ನು ತೆರೆಯುವುದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ.

ಸಾಮಾನ್ಯ ಆಡಳಿತದ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳದೆ ಪೋಲೀಸ್ ಇಲಾಖೆಯ ವಿಚಾರದಲ್ಲಿ ಮಾತ್ರ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಇತ್ತೀಚಿನ ಕೆಲವು ಘಟನೆಗಳನ್ನು ನೋಡಿದರೆ ನಮ್ಮ ಜಿಲ್ಲೆಯಲ್ಲಿ ಪೋಲಿಸ್ ಇಲಾಖೆಯ ಆಡಳಿತವೇ ಕುಸಿದು ಬಿದ್ದಿದೆಯೆಂದು ಕಾಣುತ್ತದೆ. ಹಣಬೊಮ್ಮನಹಳ್ಳಿಯಲ್ಲಿ ನಡೆದ ದರೋಡೆಯು ರೀತಿನೀತಿ ಭಯಾನಕವಾಗಿದೆ. ಜನವರಿ 1ನೇ ತೇದಿ ವೆಂಕಟರಮಣಶೆಟ್ಟರೆಂಬವರ ಮನೆಗೆ ಹಾಕಿದ ಬೀಗ ಒಡೆದು ರಸ್ತೆಗೆ ಬೇಲಿ ಹಾಕಿ ಒಂದು ವ್ಯವಸ್ಥಿತ ರೀತಿಯಲ್ಲಿ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದನಂತರವೂ ಪುನಃ ಅದೇ ಊರಿನಲ್ಲಿ ಮೇ 8ನೇ ತಾರೀಖಿನ ರಾತ್ರಿ ಉತ್ತಂಗಿ ಕೊಟ್ರಬಸಪ್ಪನವರ ಮನೆಗೆ ಅವರಿಲ್ಲದ ಕಾಲದಲ್ಲಿ ಹೋಗಿ ಅವರ ಹೆಂಡತಿಯ ಕೈಯಲ್ಲಿ ಬಾಗಿಲು ತೆಗೆಯಿಸಿ ಅವಳ ಮೈಮೇಲಿದ್ದ ಆಭರಣವನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ಮತ್ತೆ 30ನೇ ತಾರೀಖು ಸಂಜೆ ಕಂಟ್ರಾಕ್ಟರ್ ಸಂಗೀರಪ್ಪನವರ ಮನೆಯನ್ನು ದೋಚುವುದಕ್ಕೆ ಬಂದರು. ಹೀಗೆಲ್ಲಾ ನಡೆಯುವುದಕ್ಕೆ ಅವಕಾಶ ಕೊಟ್ಟಿರುವುದನ್ನು ನೋಡಿದರೆ ನಮ್ಮ ಪೋಲಿಸ್ ಇಲಾಖೆಗೆ ದಕ್ಷತೆಯೇ ಇಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇದನ್ನು ಸರಿಪಡಿಸಲು ಅಲ್ಲಿನ ಪೋಲೀಸ್ ಪಡೆಯನ್ನು ಬಹಳಮಟ್ಟಿಗೆ ಸುಧಾರಿಸಬೇಕು. ಅಲ್ಲಿಗೊಂದು ಸಮರ್ಥ ಸಿ. ಐ. ಡಿ. ವಿಭಾಗವನ್ನು ಕಳಿಹಿಸಿಕೊಟ್ಟು ಒಂದು ವ್ಯವಸ್ಥಿತರೀತಿಯಿಂದ ಈ ದರೋಡೆಕಾರರ ಗುಂಪನ್ನು ಹಿಡಿಯಬೇಕು. ಆ ಭಾಗದಲ್ಲಿರುವ ಪೋಲಿಸ್ ಅಧಿಕಾರಿಗಳನ್ನು ವರ್ಗಾಯಿಸಿ ಎಷ್ಟು ವರ್ಷಗಳಾಯಿತೋ ಗೊತ್ತಿಲ್ಲ ಅವರನ್ನು ಆದಷ್ಟು ಬೇಗ ವರ್ಗಾಯಿಸಿ ಗುಪ್ತರೀತಿಯಿಂದ ಅಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ಪತ್ತೆ ಹಚ್ಚಬೇಕೆಂದು ನಾನು ಸೂಚಿಸುತ್ತೇನೆ.

ಅಧ್ಯಕ್ಷರೆ, ಇನ್ನು ಒಂದೆರಡು ವಿಷಯಗಳನ್ನು ನಾನು ಹೇಳಬೇಕೆಂದಿದ್ದೆ. ಆದರೆ ತಾವು ಕಾಲ ಮೀರಿತೆಂದು ಸೂಚನೆ ಕೊಟ್ಟದರಿಂದ ನನ್ನ ಭಾಷಣವನ್ನು ಅಧ್ಯಕ್ಷರ ಅಪ್ಪಣೆ ಪಡೆದು ನಾನು ಮುಕ್ತಾಯ ಮಾಡುತ್ತೇನೆ.

**Sri B. R. SUNTHANKAR** (Belgaum City).—Mr. Speaker, Sir, I thank you for giving me this opportunity to speak. It is one of the anomalies of the reorganisation of the States that I speak in this House in a foreign tongue. . . . .

**Mr. SPEAKER.**—It is not a foreign tongue. It is an Indian tongue.

**Sri B. R. SUNTHANKAR.**—I mean English, because I cannot speak in Kannada, the language of the people of the State. If I speak in Marathi, most of the Hon'ble Members of this House will not be able to follow me. This is the plight of a person like me. So, you can very well imagine what would be the plight of five lakhs of the Marathi speaking population in Belgaum and Karwar districts whom I and my colleagues from those Districts represent.

Turning to His Excellency the Governor's Address, I regret to say that even after carefully reading it again and again, I find it very much

disappointing. Disappointing because there is nothing inspiring or encouraging in the Address. Disappointing, Sir, because there is nothing in the Address that will enthuse this House or the people outside. The Address of His Excellency on the last two occasions held out high hopes about the new steps. Pardon me if I say that this Address has belied all those high hopes. Firstly, there are more omissions than commissions in this Address and these omissions are glaring and are of a serious nature. Secondly, Sir, it lacks in boldness and courage that are required to lead the State on the road to speedy progress. Sir, I will restrict my observations only to a few serious omissions in the Address. As I stand here to speak before you, Sir, my heart goes sorrowfully to my brethren who lost their lives in the Police firing in the disturbances in connection with the reorganisation of States. You are aware that five innocent souls . . . .

Sri R. G. KAMATH (Ankola).—The Hon'ble Member is reading his speech. I want to know whether it is allowed.

Mr. SPEAKER.—He is not reading. I have carefully observed. Unfortunately the eye-sight of the Hon'ble Member appears to be defective.

Sri B. R. SUNTHANKAR.—The Hon'ble Member should wear spectacles. You are aware, Sir, that five innocent souls four of whom were from Belgaum and a young lady from Nippani lost their lives in the Police firings in the disturbances in connection with the reorganisation of States on 17th and 19th January 1956. There is not a word of sympathy, Sir, in the Address for these poor souls. The Hon'ble Union Home Minister Sri G. B. Pant had a kind word of consolation to say about these sufferers in the cause of Samyukta Maharastra and Maha Gujarat, in his speech in Parliament. The Government of Bombay has gone a step further and adopted a broad and generous policy of paying compensation and giving relief and aid to the sufferers in those disturbances. Unfortunately, those who have suffered in my District, Sir, cannot approach the Bombay Government. It is the responsibility of this Government. But the Address fails to mention anything about that. I appeal to the Government, Sir, to adopt a generous policy of giving aid and relief to the sufferers in my District following the example set by the Bombay Government. I hope, Sir, my appeal in this respect would not go in vain. Then, Sir, there is no reference at all in the Address to the border adjustments and the Zonal Council. I do not know whether it is a purposeful omission. There are reasons to believe that it is purposeful. In his Address on 19th December 1956, His Excellency the Governor had declared in these words:

> "My Government will continue to press for these minor adjustments in boundaries and hopes that these genuine grievances will be redressed at an early date through the Zonal Councils."

This Address is meticulously silent on the point of Zonal Council. No attempt in this direction has yet been made by the Government. The Western Zonal Council has not yet met and nobody knows when the first meeting of that Council will be held. Our misapprehension is that the Government is trying to postpone and evade these border problems. Am I to understand, Sir, that the Government has conveniently forgotten the issues of these border areas of South Sholapur, Akkalkot and Jath?

Next Sir, the problem of Marathi-speaking border areas of Belgaum and Karwar districts is very acute and needs immediate solution. My people feel it a problem of life and death. There are nearly half a million Marathi-speaking people in Belgaum and Karwar Districts. These half a million people are in all respects Maharashtrians. They belong legitimately to Maharashtra and their rightful place is with their brethren in Maharashtra. They live in a compact and homogeneous area contiguous to the Maharashtrian districts, Kolhapur, Ratnagiri and South Satara. Their cultural and social affinities are with Maharashtra. They are bred and brought up and

(SRI B. R. SUNTHANKAR.)

imbued with the true traditions of Maharashtra. Economically these are people who, I submit, Sir, have intimate relations with Maharashtra. They have a large volume of trade with important marketing centres of Maharashtra areas like Bombay, Poona, Nasik, Sangli, Kolhapur, Barsi and particularly with the markets of the Southern parts of Ratnagiri District. Belgaum Town is the nerve centre not only of the Marathi area of Belgaum and Karwar but also of the southern parts of the Ratnagiri District. It is the marketing centre for the southern part of Ratnagiri District, being the only Railway Station for the whole of South Konkan area. The whole southern region of Ratnagiri depends on Belgaum for its supplies. The total volume of trade of Belgaum is estimated at about Rs. 6½ crores. Of these 6½ crores, Belgaum has a trade worth of Rs. 5½ crores with Marathi areas in Bombay and only a trade worth Rs. 80 to 90 lakhs with Kannada areas. Belgaum has trade worth Rs. 2 crores with southern parts of Ratnagiri District only. These trade relations, I submit, Sir, have been existing from ancient time. Now Belgaum City is predominantly a Maharashtrian City and as such it ought to be transferred to the Maharashtra region of the Bombay State.

1-30 P.M.

There is 54 per cent Marathi-speaking population in the Belgaum City while Kannada-speaking population is only 24 per cent in the City. Of the 28,000 students at Belgaum taking education from primary to the University stage, 65 per cent are Marathi, 24 per cent Kannada and the rest are 11 per cent. It may be pointed out here, Sir, that all the Primary Urdu schools at Belgaum Town are Urdu-Marathi and not Urdu-Kannada. There is not a single Urdu-Kannada school in the town. We do not know what is going to be the fate of these 20,000 Marathi students in the Belgaum town, because taking the best of intention on the part of the Mysore Government, it will not be possible for this Government to provide employments for all those students. The Bombay Government would not take the responsibility of providing employment for them as these students belong to a separate State. I remember here, Sir, a famous story of a Dravidian Brahmin at the time of Peshwas.

A Dravidian Brahmin went to the Court of Peshwas to receive dakshina. He was made to go up and down between Purandharghad and Sasvada and ultimately he was disappointed. When he went to Purandharghad, he was being sent to Sasvada; when he went to Sasvada, he was again asked to go back to Purandharghad. Ultimately, he got no dakshina. So, there is a sloka.

*Gadatch Saswadam Yami*
*Saswadatch Punargadam*
*Gadasaswadayormadhye*
*Dravido ludabudamyaham*

So, these 20,000 students of the Belgaum town will be ludabuding like the Dravidian Brahmin, between the State of Bombay and the State of Mysore. You can surely imagine, Sir, the plight of these poor students. I may submit a few more facts. The Belgaum Municipality which is in existence for the last 105 years, has maintained its record throughout in Marathi and all its administration is carried on in Marathi since the beginning. It is wrongly told and believed, Sir, that Belgaum is surrounded on all sides by Kannada villages. It is not true. Belgaum is surrounded on three sides by Marathi villages and the Kannada villages are on the Eastern side of the town. Even on the Eastern side, Marathi villages extend upto 10 miles to the East of the town.

The Marathi areas of Belgaum and Karwar have a total population of 6 lakhs of which nearly 70 per cent are Marathi speakers, while Kannada-speakers in this Marathi region amount only to 20 per cent. The Census Department has published language handbooks and these handbooks contain coloured maps giving villagewise linguistic statistics. Marathi areas are shown in these maps in red colour

and the Konkani areas in blue colour. We claim, Sir, only the red and blue coloured areas. We do not claim even a single inch of Kannada land. The attitude should be reasonable. Give us what is ours and take what is yours. The attitude should not be as in a saying in Marathi.

> "*Maze te Mazeani*"
> *Tuzrtehi Mazech*"
> (What is mine is mine indeed
> and what is yours is also mine)

That should not be the attitude, Sir. So, on behalf of half a million Marathi people of my district, Sir, I appeal, in the name of democracy and justice, to Hon'ble Members of this House to give due consideration to our cause and give us justice. We, Marathi people in Belgaum and Karwar districts, ask for justice, justice and nothing but justice. It is my appeal to this House to give these poor Marathi people the justice they want and I hope that my appeal would not go in vain. Thank you, Sir.

*ಶ್ರೀ ಎಚ್. ವಿ. ಕೌಜಲಗಿ (ಸಂಪಗಾಂವ್ I).—ಮಾನ್ಯ ಅಧ್ಯಕ್ಷರೆ, ಶ್ರೀ ಕೋತಾವಾಲೆಯವರು ಈ ಸಭೆಯ ಮುಂದೆ ಮಂಡಿಸಿರುವ ವಂದನಾನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಟ್ಟು ನನಗೆ ಕೊಟ್ಟಿರುವ ಹತ್ತು ನಿಮಿಷಗಳಲ್ಲಿ ನನ್ನ ಭಾಗಕ್ಕೆ ಸಂಬಂಧಪಟ್ಟ ನಾಲ್ಕು ವಿಷಯ ಹೇಳಬೇಕೆಂದು ಎದ್ದು ನಿಂತಿದ್ದೇನೆ. ಈ ಸಾರಿ ನಮ್ಮ ಜಿಲ್ಲೆಯಲ್ಲಿ ಅತಿವೃಷ್ಟಿಯಾಗಿ ಬಹಳ ನಷ್ಟವಾಗಿದೆ, ಜನರಿಗೆ ಸಾಕಷ್ಟು ಕಾಳು ಬಾರದೆ ದುಷ್ಕಾಲ ಪರಿಸ್ಥಿತಿಯುಂಟಾಗಿದೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ದಯೆಯಿಟ್ಟು ಅನೇಕ ಪರಿಹಾರ ಕಾಂಗಾರಿಗಳನ್ನು ಷುರು ಮಾಡಿದ್ದಾರೆ. ಇಲ್ಲಿ ಸರ್ಕಾರದವರಿಗೆ ಈಗ ವಿನಂತಿ ಮಾಡುವುದು ಇಷ್ಟು. ಈ ಸಾರಿ ದುಷ್ಕಾಲ ಪರಿಸ್ಥಿತಿ ಬಹಳವಾಗಿರುವುದರಿಂದ ಕಾಂಗಾರಿಗಳನ್ನು ಸೆಪ್ಟಂಬರ್ ಆಖ್ಯೆರ್‌ವರೆಗೂ ಮುಂದುವರಿಸಬೇಕೆಂಬ ವಿನಂತಿಯಿದೆ. ಎರಡನೆಯದು ಇದೇ ಸಂದರ್ಭದಲ್ಲಿ ಈಗ ಷುರುಮಾಡಿರುವ ಕಾಂಗಾರಿಗಳು ಸಾಕಷ್ಟು ಇಲ್ಲದಿರುವುದರಿಂದ ದುಷ್ಕಾಲ ಪರಿಸ್ಥಿತಿಯಿರುವ ಕಡೆ ಹೆಚ್ಚು ಕೆಲಸ ಷುರು ಮಾಡಬೇಕೆಂಬುದು. ಇನ್ನೂ ಇದೇ ವಿಷಯದಲ್ಲಿ ಹೇಳಬೇಕಾದರೆ ಈಗ ಅನೇಕ ದುಷ್ಕಾಲ ಕಾಂಗಾರಿ ಷುರು ಆಗಿದ್ದೂ ಹೊಸ ರಸ್ತೆ ವಗೈರೆ ಆಗುವುದಿದೆ. ಆದರೆ ಅದನ್ನೆಲ್ಲಾ ಹಾಗೆಯೇ ಬಿಟ್ಟರೆ ಮಳೆ ಬಂದು ನಷ್ಟವಾಗುವ ಪರಿಸ್ಥಿತಿಯಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ರಸ್ತೆ ಮಾಡಿದ್ದಾರೆ. ಅದರ ರಕ್ಷಣಾ ಕಾರ್ಯ ಕೈಗೊಳ್ಳದೆ ಇರುವ ಹಾಗೆಯೇ ಬಿಟ್ಟರೆ ಆ ಕೆಲಸಕ್ಕೆ ನಷ್ಟ ತಟ್ಟುತ್ತದೆ. ಆದಕಾರಣ ಈ ರಸ್ತೆಗೆ ಮೆಟಲ್ ಅಥವಾ ಫೀಲ್ಡ್ ಮೆಟಲ್ ಹಾಕಿ ಕೆಡದಂತೆ ರಕ್ಷಿಸಬೇಕೆಂದು ವಿನಂತಿ. ಈ ಪ್ರಸಂಗದಲ್ಲಿ ಸರ್ಕಾರದವರು ಈಗ ಹತ್ತು ಲಕ್ಷ ರೂಪಾಯಿಗಳನ್ನು ನಮಗೆ ಒದಗಿಸಿದ್ದಾರೆ, ಇನ್ನೂ ಹೆಚ್ಚು ಒದಗಿಸಬೇಕು ಎಂದು ಸರ್ಕಾರದ ಗಮನಕ್ಕೆ ತರುತ್ತೇನೆ. ಎರಡನೆಯದು ಈಗ ಹೇಳಿದ ಹಾಗೆ, ಹೆಚ್ಚು ಮಳೆಯಾಗಿ ಅಲ್ಲಿ ಆಹಾರದ ಪರಿಸ್ಥಿತಿ ಬಹಳ ಕಠಿಣವಾಗಿದೆ. ನಮ್ಮಲ್ಲಿ ಸ್ವಾಭಾವಿಕವಾಗಿ ಏನು ಬೆಳೆಯಾಗುತ್ತಿತ್ತೋ ಅದಕ್ಕೆ ಅಡಚಣೆಯಾಗಿದೆ. ಸರ್ಕಾರದವರು ಗೋಡೌನುಗಳಲ್ಲಿ ಸಾಕಷ್ಟು ಧಾನ್ಯ ಶೇಖರಣೆ ಮಾಡಿಲ್ಲ. ಕೇಂದ್ರದ ಉಪಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಪ್ರವಾಸ ಬಂದಾಗ ನಮ್ಮ ಜಿಲ್ಲೆಯ ಕಠಿಣ ಪರಿಸ್ಥಿತಿಯನ್ನು ಅವಗಿಗೆ ತಿಳಿಸಿದ್ದೇವೆ. ಆದರೆ ಇನ್ನೂ ಬೆಳಗಾಂ ಸೆಂಟ್ರಲ್ ಗೋಡೌನಿಗೆ ಬರಬೇಕಾದ ಧಾನ್ಯ ಬಂದು ದಾಸ್ತಾನಾಗಿಲ್ಲ. ಮಳೆಗಾಲವಾದ ನಂತರ ರಸ್ತೆ ಸೌಕರ್ಯ ಚೆನ್ನಾಗಿಲ್ಲದಿರುವುದರಿಂದ ಹಳ್ಳಿಗಳಿಗೆ ಕಾಳನ್ನು ಸಾಗಿಸಲು ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಇದರ ಕಡೆ ಹೆಚ್ಚು ಗಮನ ಕೊಟ್ಟು ಬೆಳಗಾವಿ ಮತ್ತು ಇತರ ಕಡೆ ಇರುವ ಸರ್ಕಾರಿ ಗೋಡೌನುಗಳಲ್ಲಿ ಹೆಚ್ಚು ದಾಸ್ತಾನಿಡಬೇಕೆಂದು ವಿನಂತಿ ಮಾಡುತ್ತೇನೆ.

ಮೂರನೆಯದಾಗಿ ನಮ್ಮ ಜಿಲ್ಲೆಯಲ್ಲಿ ಇನ್ನೊಂದು ಪರಿಸ್ಥಿತಿಯುಂಟಾಗಿದೆ. ರಾಜ್ಯಪಾಲರೂ ತಮ್ಮ ಭಾಷಣದಲ್ಲಿ ಅದನ್ನು ಸೂಚನೆ ಮಾಡಿದ್ದಾರೆ. ಅದು ವಿಲೇಜ್ ಆಫೀಸರುಗಳ ವಿಷಯ. ನಮ್ಮಲ್ಲಿ ಇನಾಂ ರದ್ದಿಯಾತಿ ಮಸೂದೆ ಬಂದು ವಾಲಿಕಾರ್, ಸನ್ನಿಧಿ ಮುಂತಾದವರಿಗೆಂದು ಕೊಟ್ಟಿದ್ದ ಇನಾಂತಿಳಿಗೆಲ್ಲಾ ಈಗ ಕಂದಾಯ ವಿಧಿಸಿದ್ದಾರೆ. ಹಿಂದೆ ಇವಕ್ಕೆ ತೆರಿಗೆಯೇನೂ ಇರಲಿಲ್ಲ. ಇದರಿಂದಾಗಿ ಅನೇಕ ಹಳ್ಳಿಗಳಲ್ಲಿ ವಾಲಿಕಾರರು ಮತ್ತು ಸನ್ನಿಧಿಗಳು ಈಗ ಬಿಟ್ಟುಹೋಗಿ ಆ ಕೆಲಸ ಮಾಡುವವರೇ ಇಲ್ಲವಾಗಿದ್ದಾರೆ. ಕೆಲವು ಕಡೆಗಳಲ್ಲೇನೋ ಅಮಲ್ದಾರರುಗಳು ಮುಂದೆ ಏನಾದರೂ ರಿಯಾಯಿತಿ ಕೊಡಿಸುತ್ತೇವೆಂದು ಭರವಸೆ ಕೊಡುತ್ತಾ ಅವರಿಂದ ಕೆಲಸ ತೆಗೆದುಕೊಳ್ಳುತ್ತಾ ಬರುತ್ತಿದ್ದಾರೆ. ಹೀಗಾಗಿ ರೆವಿನ್ಯೂ ಕೆಲಸ ಬಹಳ ಸಾವಧಾನವಾಗಿದೆ. ಹಿಂದೆ ಮುಂಬೈ ಸರ್ಕಾರದ ಮುಂದೆಯೂ ಈ ಪ್ರಶ್ನೆ ಬಂದಿತ್ತು. ಆದರೆ ಆ ಪ್ರಶ್ನೆ ಇತ್ಯರ್ಥವಾಗುವುದರೊಳಗೆ ಈ ರೀತಿ ಬದಲಾವಣೆಗಳೆಲ್ಲಾ ಆಗಿಬಿಟ್ಟವು. ಒಬ್ಬೊಬ್ಬ ಗ್ರಾಮ ನೌಕರನಿಗೆ ನಾಲ್ಕು ರೂಪಾಯಿಯಂತೆ ಕೊಡಬೇಕೆಂದು ಮಾಡಿತ್ತು. ಆದರೆ ಅದು ಜಾರಿಗೆ ಬರಲಿಲ್ಲ. ಇದರಿಂದಾಗಿ ಕೆಲಸಗಳೆಲ್ಲಾ ಹಾಗೆಯೇ ನಿಂತಿವೆ. ಈಗ ಸರ್ಕಾರದವರು ಈ ನೌಕರುದಾರರಿಗೆಲ್ಲಾ ಸಂಬಳ ಗೊತ್ತುಪಡಿಸಿ ಅವರ ಕಷ್ಟ ತಪ್ಪಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ನಮ್ಮ, ಭಾಗದೊಳಗಾಗಿ ಒಂದು ಮೆಡಿಕಲ್ ಕಾಲೇಜು ಎಲ್ಲಿಯೂ ಇಲ್ಲ. ಇಂಥ ಸಂದರ್ಭವಿರುವಾಗ ಈ ಸಾರಿ ಸರ್ಕಾರದವರು ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆರೆಯುತ್ತೇವೆಂದು ಹೇಳಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದಷ್ಟು ಮಟ್ಟಿಗೆ ಪ್ರಯತ್ನಪಟ್ಟು ಇದೇ ಸಾರಿ ಏರ್ಪಾಡು ಮಾಡಿದರೆ ಬಹಳ ಒಳ್ಳೆಯದು.

ರಾಜ್ಯಪಾಲರ ಭಾಷಣದಲ್ಲಿ ಒಂದು ವೆಟರಿನರಿ ಕಾಲೇಜನ್ನು ತೆರೆಯಬೇಕೆಂದಿರುವ ವಿಷಯವನ್ನು ಸೂಚಿಸಿದ್ದಾರೆ. ಇದಕ್ಕೊಂದು ಸರಿಯಾದ ಸ್ಥಳವನ್ನು ತೀರ್ಮಾನಿಸುವ ಬಗ್ಗೆ ಯೋಚನೆ ಮಾಡಲಾಗುತ್ತಿದೆಯೆಂದು ಹೇಳಿದ್ದಾರೆ. ಧಾರವಾಡದಲ್ಲಿ ಈ ಶಾಲೆಯನ್ನು ತೆರೆಯುವುದು ಸೂಕ್ತವೆಂದು ಹೇಳುತ್ತೇನೆ. ಏಕೆಂದರೆ ಅಲ್ಲಿಯೇ ವ್ಯವಸಾಯದ ಕಾಲೇಜೂ ಇದೆ.

(~~Sri B. R. Sunthakar.~~)

ದನಗಳನ್ನು ಹೇರಳವಾಗಿ ಸಾಕುವುದಕ್ಕೆ ಅನುಕೂಲತೆಗಳಿವೆ. ಒಕ್ಕಲುತನದ ಸಂಪತ್ತಿಯಿರುವ ಪ್ರದೇಶ ಅದು. ನಮ್ಮ ಪ್ರಾಂತದ ಉತ್ತರಭಾಗದಲ್ಲಿ ಇಂಥ ಕಾಲೇಜನ್ನು ತೆರೆಯುವುದರಿಂದ ಹೆಚ್ಚಿನ ಅನುಕೂಲವಾಗುತ್ತದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ರಾಜ್ಯ ಪುನರ್ವಿಂಗಡಣೆಗೆ ಮುಂಚೆ ಮುಂಬೈ ಸರ್ಕಾರದವರು ಮೊದಲನೆಯ ಪಾಂಚವಾರ್ಷಿಕ ಯೋಜನೆಯ ಪ್ರಕಾರ cottage hospitalsಗಳನ್ನು ತೆರೆಯುತ್ತಿದ್ದರು. ಈ ಯೋಜನೆಯ ಪ್ರಕಾರ ಸವಲತ್ತಿ ಎಂಬ ಊರಿನಲ್ಲಿ ಒಂದು ತೆರೆದಿದ್ದರು. ಅಲ್ಲಿ ಕಟ್ಟಡ ಕೆಲಸ ಮುಗಿದು ಡಾಕ್ಟರನ್ನು ನೇಮಿಸುವುದು ಮಾತ್ರ ಉಳಿದಿತ್ತು. ಆದ್ದರಿಂದ ಸರ್ಕಾರದವರು ಅಲ್ಲಿಗೆ ಬೇಕಾದ equipment ಮತ್ತು ಸೌಕರ್ಯಗಳನ್ನು ಒದಗಿಸಲು ಈ ಬಡ್ಜೆಟ್ಟಿನಲ್ಲಿ ಏರ್ಪಾಡು ಮಾಡಿ ಈ ವರ್ಷವೇ ಆ ಆಸ್ಪತ್ರೆಯನ್ನು ತೆರೆಯುವಂತೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಆಮೇಲೆ ಶ್ರೀ ಸುಂಠಣಕರ್‌ರವರು ಬೆಳಗಾವಿನ ಸೇರ್ಪಡೆಯನ್ನು ಪ್ರಸ್ತಾಪಿಸಿ ತಮಗೆ ಇದರಿಂದ ಬಹಳ inconvenience ಆಗಿದೆ, ಆ ಪ್ರದೇಶ ಪೂರ್ಣವಾಗಿ ಮರಾಠಿ ಭಾಗ, ಅದರಿಂದಾಗಿ ಮಹರಾಷ್ಟ್ರಕ್ಕೆ ಆ ಜಾಗವನ್ನು ಸೇರಿಸಬೇಕು ಎಂದು ಅಂಕಿ ಸಂಕೆಗಳನ್ನು ಕೊಟ್ಟು ಹೇಳಿದರು. ಇನ್ನು ನನಗೆ ಕಾಲಾವಕಾಶ ಹೆಚ್ಚಿಗೆ ಇಲ್ಲದಿರುವುದರಿಂದ ನಾನೇನೂ ಹೆಚ್ಚಿಗೆ ಹೇಳಲು ಇಷ್ಟಪಡುವುದಿಲ್ಲ. ಎಸ್. ಆರ್. ಸಿ. ವರದಿಯು ಚರ್ಚೆಗೆ ಬಂದಿದ್ದಾಗ ಈಗ ಇವರು ಯಾವ ಯಾವ ರೀತಿಯ ವಾದವನ್ನು ನಮ್ಮ ಮುಂದಿಟ್ಟರೋ ಅವನ್ನೆಲ್ಲ ಅವರು ಹೇಳಿದ್ದಾಗಿದೆ. ಅದೇ hackneyed argumentಗಳನ್ನು ಈಗ ಮತ್ತೆ ಅವರು ಹೇಳುತ್ತಿದ್ದಾರೆ ಅಷ್ಟೆ. ಅವರು ಹೇಳುವುದು ಬರೀ ಬೆಳಗಾಂ ಮಾತ್ರಕ್ಕೆ ಅನ್ವಯಿಸಬಹುದು. ಆದರೆ ನಮ್ಮ ಮುಂದಿರುವ ಪ್ರಶ್ನೆ ಇಡೀ ಬೆಳಗಾಂ ಜಿಲ್ಲೆಯದು ಆ ಇಡೀ ಜಿಲ್ಲೆಯ ವರು ಮೈಸೂರಿಗೆ ಬೇರಬೇಕೆಂದು ಇಷ್ಟಪಡುತ್ತಾರೆಂದು ನಾನು ಹೇಳಬಲ್ಲೆ. ಆದ್ದರಿಂದ ಬರೀ ಬೆಳಗಾಂ ಮಾತ್ರವೊಂದರ ವಿಷಯವನ್ನು ನಾವಿಲ್ಲಿ ಗಮನಿಸಬೇಕಾಗಿಲ್ಲ. ಈ ಪ್ರಶ್ನೆಗಳನ್ನೆಲ್ಲಾ ಪೂರ್ಣವಾಗಿ ಪರಿಶೀಲನೆ ಮಾಡಿಯೇ ಆಖೈರು ತೀರ್ಮಾನವನ್ನು ಕೈಕೊಳ್ಳಲಾಗಿದೆ. ವಿದ್ಯಾಭ್ಯಾಸಕ್ಕಿರುವ ತೊಂದರೆಯನ್ನು ಮಾನ್ಯ ಮಿತ್ರರು ಸೂಚಿಸಿದರು. ಬೆಳಗಾಂನಲ್ಲಿ ಕಳೆದ ಮೂವತ್ತು ವರುಷಗಳಿಂದ ಆಂಧ್ರ ಸರ್ಕಾರದವರು ಕನ್ನಡದ ಶಿಕ್ಷಣವನ್ನು ಕೊಡುತ್ತಿದ್ದರು ; ಕನ್ನಡದ ಕಾಲೇಜನ್ನು ತೆಗೆಸಿದ್ದರು. ತಮಗೆ ಬೆಳಗಾಂ ಜಿಲ್ಲೆ ವ್ಯಾಪಾರದ ಕೇಂದ್ರವೆಂದು ಹೇಳಿ ದರು. ಅದು ವ್ಯಾಪಾರದ ಕೇಂದ್ರವಲ್ಲ. ಕೇವಲ ಒಂದು distri. buting centre ಮಾತ್ರ ಆದಾಗಿದೆ. ಅಲ್ಲಿನ ಮುನಿಸಿಪಾಲಿಟಿಯ ಲೆಕ್ಕ ಪತ್ರಗಳು ಐದಾರು ವರ್ಷದಿಂದ ಕನ್ನಡದಲ್ಲಿಯೆ ಇವೆ. ಅದಕ್ಕೆ ಬರುವ ಉತ್ಪತ್ತಿಯೂ ಕನ್ನಡದ ಭಾಗದಿಂದಲೇ ಬರುತ್ತಿದೆ. ಹೀಗೆ ಇದು ವಾದಗ್ರಸ್ತ ವಿಷಯವಾಗಿದೆ. ಅಂತೆಯೇ ಕಾರವಾರ ತೆಗೆದುಕೊಂಡರೆ, ಅದು ಪೂರ್ಣವಾಗಿ ಕನ್ನಡದ ಪ್ರದೇಶ. ಅಲ್ಲಿನ ಜನರು ಕೊಂಕಣಿಯನ್ನು ಮಾತನಾಡುವವರಾದರೂ ಆ ಭಾಷೆಗೂ ಕನ್ನಡಕ್ಕೂ ಬಹಳ ಸಂಬಂಧವಿದೆ. ಆದ್ದರಿಂದ ಕೇವಲ argumentಗೆ ಹೆಚ್ಚಿಗೆ ಲಕ್ಷ್ಯಕೊಡದೆ ಸರ್ಕಾರದವರು ಈ ವಿಷಯ ಮುಗಿದಿದೆಯೆಂದು ಪರಿಗಣಿಸಿ, ಸರ್ಕಾರದವರು ಆ ಭಾಗದವರಿಗೆ ಏನೇನು ಸೌಲಭ್ಯಗಳನ್ನು ಕೊಡಬೇಕೋ ಅದನ್ನು ಕೊಡುತ್ತಾರೆಂದು ನಂಬಿದ್ದೇನೆ. ಇದರಿಂದಾಗಿ ಅಲ್ಲಿನ ಜನರಿಗೇನೂ ತೊಂದರೆಯಾಗುವದಿಲ್ಲವೆಂದು ನಾನು ತಿಳಿಸುತ್ತಾ, ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಶ್ರೀ ಆರ್. ಜಿ. ಕಾಮತ್ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಈ ಹೊತ್ತಿನದಿವಸ ನಾನು ಶ್ರೀ ಕೋತಾವಾಲೆಯವರು ಮಂಡಿಸಿರುವ ವಂದನಾ ಸೂಚನಾ ನಿರ್ಣಯದಮೇಲೆ ಮಾತನಾಡಿ ಅನುಮೋದನೆಕೊಡುವುದಕ್ಕೆ ನಿಂತಿರುತ್ತೇನೆ. ರಾಜ್ಯಪಾಲರ ಭಾಷಣ ನನಗೆ ಸಂತೋಷದಾಯಕವಾಗಿದೆ. ನನ್ನ ತಾಲ್ಲೂಕಿನಲ್ಲಿ ಒಂದು ಔದ್ಯೋಗಿಕ ಶಾಲೆಯನ್ನು ಮಾಡುವುದಕ್ಕೆ ನಿಶ್ಚಯಿಸಿದ್ದಾರೆ. ಅದೇರೀತಿ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಅವರು ನಡೆಸಿರುವ ಪ್ರಯತ್ನಕ್ಕಾಗಿ ನಾನು ಸರ್ಕಾರಕ್ಕೆ ಉಪಕೃತನಾಗಿದ್ದೇನೆಂದು ಹೇಳ ಬಯಸುತ್ತೇನೆ.

ಆದರೆ ಈ ಭಾಷಣದಲ್ಲಿ ಎರಡು ವಿಷಯಗಳು ಕಂಡುಬಂದಿಲ್ಲ. ಅದು ಅರಣ್ಯದ ವಿಷಯ. ಮೈಸೂರು ಸರ್ಕಾರದವರು ನಮ್ಮ ಕಡೆ ಅರಣ್ಯದ ಕೂಲಿಗಾರರನ್ನು ಮುಂದುವರಿಸಿಕೊಂಡು ಬರುವುದಕ್ಕೆ ಯಾವ ಧೋರಣೆಯನ್ನು ಹಾಕಿಕೊಂಡಿದ್ದಾರೋ ಗೊತ್ತಿಲ್ಲ. ನಮ್ಮ ಕಡೆಯ ನಾಲ್ಕು ಜಿಲ್ಲೆಗಳ ಒಟ್ಟು ಲೆಕ್ಕವನ್ನು ನೋಡಿದರೆ, ಅಲ್ಲಿ 70,000 ಕ್ಕೂ ಮೇಲ್ಪಟ್ಟ ಸಂಖ್ಯೆಯಷ್ಟು ಅಡವಿ ಕೂಲಿಗಾರರ ತಂಡಗಳಿವೆ. ಅವುಗಳನ್ನು ಮುಂದುವರಿಸದಿದ್ದರೆ ಆ ಜನರ ಗತಿಯೇನು ಎಂದು ಯೋಚನೆಯಾಗಿದೆ. ಸರ್ಕಾರದವರು ಈ ವಿಚಾರದಲ್ಲಿ ಸೂಕ್ತ ಉತ್ತರವನ್ನು ಕೊಡಬೇಕೆಂದು ಬಯಸುತ್ತೇನೆ.

ಅದೇರೀತಿ ಈ ನಾಲ್ಕು ಜಿಲ್ಲೆಗಳಲ್ಲಿ ಸರ್ವೋದಯ ಕೇಂದ್ರಗಳೆಂದು ನಡೆಸುತ್ತಿದ್ದರು. ಆ ಭಾಗಗಳು ಮೈಸೂರಿಗೆ ಬಂದಮೇಲೆ ಅವನ್ನೀಗ ಮುಂದುವರಿಸಿಕೊಂಡು ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳು ಈ ವಿಷಯವನ್ನು ಸ್ಪಷ್ಟಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಏನನ್ನೂ ಹೇಳಿಲ್ಲ.

ಕೊನೆಯದಾಗಿ ನಾನು ಮುಖ್ಯವಾಗಿ ಹೇಳಬೇಕಾಗಿದ್ದ ಒಂದು ಅಂಶವನ್ನು ಹೇಳಿ ಮುಗಿಸುತ್ತೇನೆ. ನಾನು ಈ ಸಂದರ್ಭದಲ್ಲಿ ಮಾತನಾಡಬೇಕೆಂದೇ ಇರಲಿಲ್ಲ. ಆದರೆ ಶ್ರೀ ಸುಂಠಣಕರ್‌ಅವರು ಅನವಶ್ಯಕವಾಗಿ ಮುಗಿದುಹೋಗಿದ್ದ ಒಂದು ಪ್ರಶ್ನೆಯನ್ನು ಮರಳಿ ಎತ್ತಿ ನಮ್ಮ ಮನಸ್ಸನ್ನು ಕಲಕಿ ನನ್ನನ್ನೀಗ ಮಾತನಾಡಲೆಬ್ಬಿಸಿದರು. ಅವರು ಮರಾಠಿ ಭಾಗಕ್ಕೆ ತಾವು ಸೇರಬೇಕೆಂದು ಮಾಡಿದ ವಾದ ಅಷ್ಟಾಗಿ ಸರಿಯಲ್ಲ. ಈಗಾಗಲೇ ಮೂರು ವರ್ಷಗಳಿಂದ ಈ ಪ್ರಶ್ನೆಯ ಸಂಬಂಧದಲ್ಲಿ ಅವರಿಗೂ ನನಗೂ ಚರ್ಚೆ ನಡೆದಿದೆ. ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡುದು ಪೂರೈಸಿ, ಸಬ್-ಕಮಿಟಿಯ ಮುಂದೆ ಚರ್ಚೆಯಾಗಿ, ಕೊನೆಗೆ ಪಾರ್ಲಿಮೆಂಟ್ ಮುಂದೆ ದೀರ್ಘವಾಗಿ ಪರಿಶೀಲನೆಯಾಗಿ ತೀರ್ಮಾನವಾಗಿದೆ. ಪಾರ್ಲಿಮೆಂಟಿನವರು ಇತ್ಯರ್ಥಮಾಡಿರುವುದೇ, ಈ ಭಾಗ ಕನ್ನಡ ಭಾಗ, ಮೈಸೂರಿಗೆ ಸೇರತಕ್ಕದ್ದೆಂದು ಹೇಳುವುದಕ್ಕೆ ಆಖೈರು ಸಾಕ್ಷಿ.

Sri B. R. SUNTHANKAR.—Who says it is final ?

ಶ್ರೀ ಆರ್. ಜಿ. ಕಾಮತ್.—ಇಷ್ಟೆಲ್ಲಾ ಆಗಿ ತೀರ್ಮಾನವಾದಮೇಲೆ ಅದನ್ನೇ ತಿರುಗಿ ತಿರುಗಿ ಎತ್ತುವುದು ಸರಿಯಲ್ಲ. ಅವರ ಬೆಳಗಾಂ ಜಿಲ್ಲೆಯ

ವಿಷಯವಿರಲಿ, ಅವರು ಕಾರವಾರ ಜಿಲ್ಲೆಯ ಪರ ವಹಿಸಿ ಹೇಗೆ ಮಾತನಾಡಿದರೋ ನನಗೆ ಅರ್ಥವಾಗುವುದಿಲ್ಲ. ಏಕೆಂದರೆ, ಯಾರ ಸಹಕಾರ ಅವರೀಗ ಕೇಳುತ್ತಿದ್ದಾರೋ ಅವರ ಸಹಕಾರದಿಂದಲೇ ನಾನಿಲ್ಲಿಗೆ ಚುನಾಯಿತನಾಗಿ ಬಂದಿದ್ದೇನೆ. ಜೊತೆಗೆ ಅಲ್ಲಿನ ಜನರು ಆಡುವ ಭಾಷೆಯೇನೂ ಮರಾಠಿಯಲ್ಲ. ಕನ್ನಡ ಭಾಷೆಗೂ ಅವರ ಭಾಷೆಗೂ ಹೆಚ್ಚು ಸಂಬಂಧವಿದೆ. ಕಾರವಾರ ಮಹಾರಾಷ್ಟ್ರಕ್ಕೆ ಹೋಗಬೇಕೆಂದಿದ್ದರೆ ಇವರ ಪಕ್ಷದವರಿಗೆ ಸೋಲಾಗುತ್ತಿರಲಿಲ್ಲ. ಹಾಗೆಯೇ ಬೆಳಗಾವ್ ವಿಷಯ ತೆಗೆದುಕೊಂಡರೂ ಅಲ್ಲಿಯೂ 30,000 ಜನ ಮರಾಠಿ ಮಾತನಾಡಿದರೂ ಅವರ ವಿರುದ್ಧವಾಗಿ 19,000 ಜನರು ಬೇರೆ ಭಾಷೆಯವರಿದ್ದಾರೆ. ಅಂದ ಮೇಲೆ ಬಹುಭಾಗದ ಜನರು ಸಂಯುಕ್ತ ಮಹಾರಾಷ್ಟ್ರಕ್ಕೆ ವಿರುದ್ಧವಾಗಿರುವವರು. ಅಲ್ಲದೆ ಬೆಳಗಾಂ ಒಂದೂರಿರಲಿ, ಇಡೀ ಬೆಳಗಾವ್ ಜಿಲ್ಲೆಯನ್ನು ನೋಡುವುದಾದರೆ ಹೆಚ್ಚು ಜನರು ಕನ್ನಡಿಗರೇ ಆಗಿದ್ದಾರೆ. ಆದ್ದರಿಂದ ಈ ಜಿಲ್ಲೆಯನ್ನು ಇಲ್ಲಿಗೆ ಸೇರಿಸಿರುವುದು ನ್ಯಾಯವಾಗಿದೆ.

ಅಲ್ಲದೆ ಇಂಥ ಸಂದರ್ಭಗಳಲ್ಲಿ ಇನ್ನೊಂದು ಅಂಶವನ್ನೂ ನೋಡಬೇಕು. ಈ ವಿಷಯದ ಮೇಲೆ ಬೇಕಾದಷ್ಟು ಚರ್ಚೆ ನಡೆದು ವಿಷಯವೆಲ್ಲಾ ಪೂರ್ಣವಾಗಿ ತೀರ್ಮಾನವಾಗಿದೆ. ಈಗ ಮತ್ತೆ ಅದೇ ಪ್ರಶ್ನೆಗಳನ್ನು ಪರಿಶೀಲಿಸಬೇಕಾಗಿಲ್ಲ.

ಆದರೆ ಇಷ್ಟು ಅವರಿಗೆ ಭರವಸೆ ಕೊಡಬೇಕು. ಅವರು ಇಲ್ಲಿ ಅಲ್ಪಸಂಖ್ಯಾತರು. ಅವರ ಭಾಷೆಗೆ ನಮ್ಮ ಸರ್ಕಾರದವರು ಪುರಸ್ಕಾರಕೊಟ್ಟು ನಾನಾ ಸೌಕರ್ಯಗಳನ್ನು ಒದಗಿಸಿ ಕೊಡಬೇಕು. ರಾಜ್ಯ ಪುನರ್ವಿಂಗಡಣೆಯ ಕಾಯಿದೆಯಲ್ಲಿ ಹೇಳಿರುವಂತೆ ಅವರಿಗೆ ರಕ್ಷಣೆ ಕೊಡಬೇಕು. ಅವರ ಹಕ್ಕು ಬಾಧ್ಯತೆಗಳನ್ನು ನಾವು ಗೌರವಿಸಬೇಕು. ಅವರ ವಿಶ್ವಾಸವನ್ನು ಗಳಿಸಬೇಕಾದರೆ ಅವರನ್ನು ಪ್ರೀತಿಯಿಂದ ಒಲಿಸಿಕೊಳ್ಳಬೇಕು. ನಮ್ಮ ಸರ್ಕಾರದವರು ಆ ಧೋರಣೆ ಇಟ್ಟುಕೊಂಡರೆ ಈ ಪ್ರಶ್ನೆ ಸುಲಭವಾಗುತ್ತದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

2 P.M.

*ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರು ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾಡಿದ ಭಾಷಣಕ್ಕಾಗಿ ವಂದನೆಯನ್ನರ್ಪಿಸುವ ನಿರ್ಣಯಕ್ಕೆ ನಾನು ಸಂತೋಷದಿಂದ ನನ್ನ ಬೆಂಬಲವನ್ನು ಕೊಡಲಿಚ್ಛಿಸುತ್ತೇನೆ. ಈ ಭಾಷಣವು ಒಂದು ವಿಶೇಷ ಸನ್ನಿವೇಶದಲ್ಲಿ ನಮ್ಮ ಕರಗತವಾಗಿದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರಾಜ್ಯಗಳ ಪುನರ್ವಿಂಗಡಣೆಯ ನಂತರ ವಿಶಾಲ ಮೈಸೂರು ರಾಜ್ಯ ಸ್ಥಾಪನೆಯಾದಮೇಲೆ, ಮತ್ತು ಹೊಸದಾಗಿ ನವ ಮೈಸೂರು ರಾಜ್ಯದಲ್ಲಿ ಚುನಾವಣೆಯಾದನಂತರ ಇದೇ ಪ್ರಥಮತಃ ಸಾಧಾರಣವಾಗಿ ಜನಗಳ ಮುಂದೆ ಈ ಸಭೆ ಸೇರುತ್ತಿರುವುದು. ಈ ಸಭೆಯಲ್ಲಿ ಸದಸ್ಯರು ಒಮ್ಮತದಿಂದ ಸರ್ಕಾರದವರು ಕೈಕೊಳ್ಳುವ ಕೆಲಸ ಕಾರ್ಯಗಳಿಗೆ ತಮ್ಮ ಅಭಿಪ್ರಾಯಗಳನ್ನು ಕೊಡಬೇಕಾಗಿದೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇದುವರೆಗೂ ಸರ್ಕಾರದವರು ಕೈಕೊಂಡಿರುವ ಕಾರ್ಯಕ್ರಮಗಳ ಮತ್ತು ಮುಂದೆ ಸರ್ಕಾರದವರು ಕೈಕೊಳ್ಳಬೇಕೆಂದಿರುವ ಯೋಜನೆಗಳ ಬಗ್ಗೆ ಸದಸ್ಯರ ವಿವೇಚನೆಯಿಂದ ಆಲೋಚನೆ ಮಾಡಬೇಕಾದುದು ಮುಖ್ಯ ಕರ್ತವ್ಯವಾಗಿದೆ. ಎಂದು ತಿಳಿಸಿದಾರೆ. ಈ ಸಂಬಂಧದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ದೆಸೆಯಿಂದ ಸರ್ಕಾರದವರು ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಿದೆ. ನಿಶ್ಚಯ. ಅವುಗಳಲ್ಲಿ ಅತಿ ಮುಖ್ಯವಾದುದೂ ಮನುಷ್ಯನ ಜೀವನಕ್ಕೆ ಅತ್ಯಗತ್ಯವಾದುದೂ ಆಹಾರ. ಆಹಾರದ ಬಗ್ಗೆ ರಾಜಪಾಲರು ತಿಳಿಸಿರತಕ್ಕದ್ದನ್ನು ನಾವು ಗಮನಿಸಬೇಕಾಗಿದ್ಯೆ. ಉತ್ತರ ಕರ್ಣಾಟಕದ ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದಲೂ ಮತ್ತು ಅನಾವೃಷ್ಟಿಯಿಂದಲೂ ಆಹಾರಕ್ಕೆ ತೊಂದರೆ ಉಂಟಾಗಿ ಅಲ್ಲಿ ದಿನೇ ದಿನೇ ಆಹಾರದ ಬೆಲೆ ಏರುತ್ತಿರುವ ದೆಸೆಯಿಂದ ನಮ್ಮ ಸರ್ಕಾರದವರು ಸುಮಾರು 634 ಫೇರ್‌ಪ್ರೈಸ್ ಡಿಪೋಗಳನ್ನು ತೆರೆದು ಅವುಗಳ ಮುಖಾಂತರ 35 ಸಾವಿರ ಟನ್ನುಗಳಷ್ಟು ಅಕ್ಕಿಯನ್ನು ಮಾರಾಟಮಾಡಲೂ ಮತ್ತು ಇದೇ ರೀತಿ ಪ್ರತಿ ತಿಂಗಳು ಮೈಸೂರು ರಾಜ್ಯಕ್ಕೆಒಟ್ಟು 12,000 ಟನ್‌ಗಳಷ್ಟು ಅಕ್ಕಿಯನ್ನೂ ಮತ್ತು ಗೋಧಿಯನ್ನು ಜನಗಳಿಗೆ ಸಪ್ಲೈಮಾಡಲೂ ಆಲೋಚನೆಯನ್ನೂ ಮಾಡಿದ್ದಾರೆ. ಈ ದವಸಧಾನ್ಯಗಳನ್ನು ಆಯಾ ಜಿಲ್ಲೆಗಳಲ್ಲಿ ಸುಲಭವಾಗಿ ಮತ್ತು ಶೀಘ್ರವಾಗಿ ಪಡೆಯಲು ಅನುಕೂಲಿಸುವಂತೆ ಕೇಂದ್ರ ಸರ್ಕಾರದವರು, ಬೆಂಗಳೂರು, ಮೈಸೂರು, ಕೋಲಾರ ಚಿನ್ನದಗಣಿ ಪ್ರದೇಶ ಮತ್ತು ದಾವಣಗೆರೆ—ಈ ಸ್ಥಳಗಳಲ್ಲಿ ನಾಲ್ಕು ಆಹಾರ ಧಾನ್ಯಗಳ ಸರಬರಾಯಿ "ಮಳಿಗೆ"ಗಳನ್ನು ಈಗಾಗಲೇ ತೆರೆದಿದ್ದಾರೆ. ಕಲ್ಬುರ್ಗಿಯಲ್ಲಿ ಒಂದು ಮತ್ತು ಬಿಜಾಪುರದಲ್ಲಿ ಒಂದು—ಹೀಗೆ ಇನ್ನೂ ಎರಡು ಮಳಿಗೆಗಳನ್ನು ತೆರೆಯಬೇಕೆಂದು ಆಲೋಚನೆಮಾಡಲಾಗಿದೆ. ಅದೇರೀತಿ ಹುಬ್ಬಳ್ಳಿಯಲ್ಲೂ ಮತ್ತು ಮಂಗಳೂರಿನಲ್ಲಿಯೂ ಆಹಾರ ಧಾನ್ಯಗಳ ಸರಬರಾಯಿ ಮಳಿಗೆಗಳನ್ನು ಕೂಡಲೆ ತೆರೆಯಲು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆಯನ್ನು ಈಗಾಗಲೇ ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ. ಈ ರೀತಿಯಾಗಿ ಆಹಾರದ ಪರಿಸ್ಥಿತಿಯನ್ನು ಸುಧಾರಿಸಲು ತಕ್ಕ ಏರ್ಪಾಡುಗಳನ್ನು ನಮ್ಮ ಸರ್ಕಾರದವರು ಮಾಡುತ್ತಿರುವುದರಿಂದ ಹೆಚ್ಚು ಜನರಿಗೆ ಪ್ರಯೋಜನವಾಗಿದೆ. ಈಗ ಬೆಂಗಳೂರಿನಲ್ಲಿ ವಿಶೇಷವಾಗಿ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುತ್ತಿರುವುದರಿಂದ ಎಲ್ಲರಿಗೂ ಅನುಕೂಲವಾಗಿದೆ. ಆದರೆ ಬಡವರಿಗೆ ಉತ್ತಮವಾದ ಅಕ್ಕಿ ದೊರೆಯುವುದು ಕಷ್ಟವಾಗಿದೆ. ಏಕೆಂದರೆ ಧಾರಣೆಗಳು ಹೆಚ್ಚಾಗಿರುವುದರಿಂದ ಅವರಿಗೆ ಕೊಳ್ಳಲು ಶಕ್ತಿಯಿಲ್ಲ. ಅವರು ಒಂದೆರಡು ದಿವಸಗಳು ಅನ್ನವಿಲ್ಲದೆ ಕಾಲ ಕಳೆಯಬೇಕಾದ ಪ್ರಸಂಗಗಳು ಒದಗುತ್ತವೆ. ಈಗ ಒಂದು ಪಲ್ಲಾ ಅಕ್ಕಿಗೆ 80 ರೂಪಾಯಿನಂತೆ ಮಾರಾಟ ಮಾಡುತ್ತಿದ್ದರೆ, ಅಷ್ಟು ಹೆಚ್ಚಿನ ಬೆಲೆ ಕೊಟ್ಟು ಜೀವನ ನಡೆಸುವ ಸಾಮರ್ಥ್ಯ ನಮ್ಮ ಮಂತ್ರಿಗಳಿಗೂ, ಮತ್ತು ಐಶ್ವರ್ಯವಂತರಿಗೂ ಇದೆಯೇ ವಿನಾ ಬಡಜನರಿಗೆ ಎಲ್ಲಿಂದ ಬರಬೇಕು ? ಆದ್ದರಿಂದ ನಮ್ಮ ಸರ್ಕಾರದವರು ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಫೇರ್‌ಪ್ರೈಸ್ ಡಿಪೋಗಳನ್ನು ತೆರೆದು, ಆಹಾರದ ಬೆಲೆಯನ್ನು ಸ್ವಲ್ಪ ತಗ್ಗಿಸುವ ವ್ಯವಸ್ಥೆಯನ್ನು ಏರ್ಪಾಡು ಮಾಡಬೇಕು.

ಇನ್ನು ಉತ್ತರ ಕರ್ಣಾಟಕದ ಜಿಲ್ಲೆಗಳಲ್ಲಿರುವ ರೈತರು ಅತಿವೃಷ್ಟಿ, ಅನಾವೃಷ್ಟಿಯ ದೆಸೆಯಿಂದ ಬಹಳ ಕಷ್ಟಕ್ಕೀಡಾಗಿದ್ದಾರೆಂದು ತಿಳಿದು ನಮ್ಮ ಸರ್ಕಾರದವರು ಕ್ಷಾಮ ನಿವಾರಣೆಯ ಅನೇಕ ಕಾಮಗಾರಿಗಳನ್ನು ಕೈಗೊಂಡಿರುವುದಲ್ಲದೆ, ಕ್ಷಾಮ ಪರಿಸ್ಥಿತಿಗೊಳಗಾಗಿರುವ ಜಿಲ್ಲೆಗಳಲ್ಲಿ ಕಾನೂನಿಗನುಸಾರವಾಗಿ ವಸೂಲುಮಾಡುತ್ತಿದ್ದ ಜಮೀನು ಕಂದಾಯವನ್ನು ಮಾಫಿ ಮಾಡಿರುವುದನ್ನು ನೋಡಿ

(ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ)

ನನಗೆ ಬಹಳ ಸಂತೋಷವಾಯಿತು. ಇದೂ ಅಲ್ಲದೆ ಕ್ಷಾಮ ನಿವಾರಣೆಯ ಕಾಮಗಾರಿಗಳನ್ನು $12\frac{1}{2}$ ಲಕ್ಷ ರೂಪಾಯಿಗಳಲ್ಲಿ ಬೆಳಗಾಂ ಜಿಲ್ಲೆಯಲ್ಲಿಯೂ, ಕಲ್ಬುರ್ಗಿಯಲ್ಲಿ $6\frac{1}{4}$ ಲಕ್ಷ ರೂಪಾಯಿಗಳಲ್ಲಿಯೂ ಈಗಾಗಲೇ ನಮ್ಮ ಸರ್ಕಾರದವರು ಪ್ರಾರಂಭ ಮಾಡಿದ್ದಾರೆ, ಇದರ ಜೊತೆಗೆ ಈ ಡಿಸ್ಟ್ರಿಕ್ಟುಗಳಲ್ಲಿ ತಕಾವಿ ಸಾಲಗಳನ್ನು ಒದಗಿಸುವ ವ್ಯವಸ್ಥೆಯನ್ನೂ ಸಹ ಮಾಡಿದ್ದಾರೆ. ಆಗಾಗ್ಗೆ ಉಂಟಾಗತಕ್ಕ ಪ್ರವಾಹದ ಹಾವಳಿಯನ್ನು ತಡೆಗಟ್ಟಲು ಅದಕ್ಕೆ ಬೇಕಾದ ವ್ಯವಸ್ಥೆಗಳನ್ನು ಏರ್ಪಾಡುಮಾಡಲು ಒಂದು ಫ್ಲಡ್ ಕಂಟ್ರೋಲ್ ಬೋರ್ಡನ್ನೂ, ಆ ಬೋರ್ಡಿಗೆ ತಕ್ಕ ಸಹಾಯವನ್ನು ಸಕಾಲದಲ್ಲಿ ಒದಗಿಸುವ ಸಲುವಾಗಿ ಒಂದು ಟೆಕ್ನಿಕಲ್ ಅಡ್ವೈಸರಿ ಕಮಿಟಿಯನ್ನೂ ರಚಿಸಲಾಗಿದೆ. ಇದು ನನಗೆ ಬಹಳ ಸಂತೋಷ. ಏಕೆಂದರೆ ಈಚೆಗೆ ನಮ್ಮ ದೇಶದಲ್ಲಿ ಉಂಟಾದ ಪ್ರವಾಹಗಳ ಹಾವಳಿಯಿಂದ ಜನರಿಗೆ ಅಪಾರವಾದ ನಷ್ಟಗಳೊದಗಿವೆ. ಆದರೆ ಮುಖ್ಯವಾಗಿ ನಾನು ಒಂದು ಸೂಚನೆಯನ್ನು ಕೊಡಬೇಕಾಗಿದೆ. ಟೆಕ್ನಿಕಲ್ ಅಡ್ವೈಸರಿ ಕಮಿಟಿಯ ಸಲಹೆಗಳನ್ನು ಫ್ಲಡ್ ಕಂಟ್ರೋಲ್ ಬೋರ್ಡಿನವರು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರುವ ಪ್ರಯತ್ನಮಾಡಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ ಆಹಾರದ ಬೆಳೆಗಳನ್ನು ಹೆಚ್ಚಿಗೆ ಬೆಳೆಯಲು ನಾನಾ ಯೋಜನೆಗಳನ್ನು ನಮ್ಮ ಸರ್ಕಾರದವರು ಕೈಕೊಂಡಿದ್ದಾರೆ. ಧಾರವಾಡದಲ್ಲಿರುವ ಧರ್ಮಾ ಜಲಾಶಯ ಯೋಜನೆಯನ್ನೂ, ಕೊಡಗಿನ ಲಕ್ಷ್ಮಣತೀರ್ಥ ಯೋಜನೆಯನ್ನೂ, ಬಳ್ಳಾರಿಜಿಲ್ಲೆಯ ಹಗರಿ ಬೊಮ್ಮನಹಳ್ಳಿಯ ಯೋಜನೆಯನ್ನೂ ಪ್ಲಾನಿಂಗ್ ಕಮಿಷನ್ನಿನವರು, ಈಗಾಗಲೇ ಅನುಮೋದಿಸಿ ಅಂಗೀಕರಿಸಿರುತ್ತಾರೆ. ಇಷ್ಟೇ ಅಲ್ಲದೆ, ಪ್ರಸಕ್ತ ಸಾಲಿನಲ್ಲಿ 500 ಮೈನರ್ ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ರಾಜ್ಯಪಾಲರು ಈ ವರ್ಷದಲ್ಲಿ ತಮ್ಮ ಭಾಷಣದಲ್ಲಿ ರೈತರ ಏಳಿಗೆಗಾಗಿಯೂ ಮತ್ತು ರೈತರು ತಮ್ಮ ಕಷ್ಟಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕಾಗಿಯೂ ಸರ್ಕಾರದವರು ಇನ್ನುಮುಂದೆ ಕೈಗೊಳ್ಳಬೇಕಾದ ನಾನಾ ಯೋಜನೆಗಳನ್ನು ಅಳವಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ರೈತನಿಗೆ ಅಲ್ಪ ಕಾಲಾವಧಿ ಸಾಲ ಮತ್ತು ದೀರ್ಘ ಕಾಲಾವಧಿ ಸಾಲಗಳನ್ನು ನಾನಾ ಸಹಕಾರ ಸಂಘಗಳ ಮೂಲಕ ಕೊಡಲು ಈ ವರ್ಷದಲ್ಲಿ $8\frac{1}{2}$ ಕೋಟಿ ರೂಪಾಯಿಗಳನ್ನು ಒದಗಿಸಿರುವುದು ನಿಜವಾಗಿ ನಾನು ಬಹಳ ಸಂತೋಷಪಡಬೇಕಾದ ವಿಚಾರವಾಗಿದೆ. ರೈತನು ಬೆಳೆದ ಪದಾರ್ಥಗಳನ್ನು ಸರ್ಕಾರದವರು ಕೊಂಡು ಆ ದವಸಧಾನ್ಯಗಳನ್ನು ಗೋಡೌನ್ಸ್‌ಗಳಲ್ಲಿ ಶೇಖರಿಸಿ, ಸುಮಾರು ಐದು ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಆಹಾರ ಪದಾರ್ಥಗಳನ್ನೂ ಮತ್ತು ವ್ಯವಸಾಯೋತ್ಪನ್ನಗಳನ್ನು ಮಾರ್ಕೆಟಿಂಗ್ ಸಂಘಗಳ ಮೂಲಕ ಮಾರಾಟಮಾಡಲು ಏರ್ಪಾಡುಮಾಡಿರುವುದರಿಂದ ಇವೊತ್ತು ರೈತರಿಗೆ ಅನುಕೂಲವಾಗಿದೆ.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ಸ್ವಲ್ಪಮಟ್ಟಿಗೆ ಪ್ರಸ್ತಾಪಮಾಡುತ್ತೇನೆ. ಪ್ರೈಮರಿ ವಿದ್ಯಾಭ್ಯಾಸ ನಮ್ಮ ದೇಶದಲ್ಲಿ ಬಹುಮುಖ್ಯವಾದುದಾಗಿದೆ. 14 ವರ್ಷದ ವಯಸ್ಸಿನವರೆಗಿರುವ ಬಾಲಕ ಬಾಲಕಿಯರಿಗೆ ಕಡ್ಡಾಯವಾಗಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಫತ್ತಾಗಿ ಭಾರತ ರಾಜ್ಯಾಂಗಕ್ಕನುಗುಣವಾಗಿ ಕೊಡುವುದನ್ನು ಕಾರ್ಯರೂಪಕ್ಕೆ ತರಲು ಒಂದು ಸರ್ವೆ ಪರಿಶೀಲನೆಯನ್ನು ನಮ್ಮ ಸರ್ಕಾರದವರು ಈಗಾಗಲೇ ಕೈಕೊಂಡಿರುವುದು ನನಗಂತೂ ಬಹಳ ಸಂತೋಷವಾಗಿದೆ. ಈ ವರ್ಷ ರಾಜ್ಯದಲ್ಲಿ 400 ಹೊಸ ಶಾಲೆಗಳನ್ನು ತೆರೆಯುವವರಾಗಿದ್ದಾರೆ. ಆದರೆ ವಿಶಾಲ ಮೈಸೂರಿನಲ್ಲಿ ಯಾವ ಭಾಗಕ್ಕೂ ಸಾಕಷ್ಟು ಶಾಲೆಗಳು ಇಲ್ಲವೆಂದು ನಿರ್ದಾಕ್ಷಿಣ್ಯವಾಗಿ ನಾನು ಹೇಳಬಲ್ಲೆ. ಬೆಂಗಳೂರು ದಿನೇ ದಿನೇ ಬಡಾವಣೆಯಾಗುತ್ತಿರುವುದರಿಂದ ಶಾಲೆಗಳ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬೇಕು. ಈಗಿರತಕ್ಕಂಥ ಶಾಲೆಗಳಲ್ಲಿ ಸೀಟುಗಳು ದೊರೆಯಲಿಲ್ಲವೆಂದು ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ನನ್ನಲ್ಲಿ ಎಷ್ಟೋ ದೂರುಗಳನ್ನು ತಂದಾಗ್ಗೆ ಅನೇಕ ಶಿಫಾರ್ಸುಪತ್ರಗಳನ್ನು ಕಳಿಸಿ ಶಾಲೆಗಳಲ್ಲಿ ಸೀಟುಗಳು ಬಾಲಕ ಬಾಲಕಿಯರಿಗೆ ದೊರೆಯುವಹಾಗೆ ಮಾಡಿದ ನಿದರ್ಶನಗಳು ಬೇಕಾದಷ್ಟಿವೆ. ವಿದ್ಯಾಭ್ಯಾಸ ಸುಧಾರಣೆಯನ್ನು ಜಾರಿಗೆ ತಂದರೂ, ಇನ್ನೂ ಶಾಲಾಮಕ್ಕಳಿಗೆ ಶಾಲೆಗಳಲ್ಲಿ ಪ್ರವೇಶದೊರಕುವುದೇ ಕಷ್ಟವಾಗಿದೆ. ಇದರಿಂದ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ನಿರಾಶಾದಾಯಕವಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದವರು ಕೂಡಲೆ ಕಾರ್ಯಕ್ರಮ ತೆಗೆದುಕೊಂಡು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರವೇಶ ದೊರಕುವಂತೆ ಮಾಡತಕ್ಕದ್ದು ಬಹಳ ಅಗತ್ಯ.

ಇನ್ನು ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ಣಾಟಕ ವಿಶ್ವವಿದ್ಯಾನಿಲಯಗಳ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಈ ವರ್ಷದಲ್ಲಿ ಈ ಎರಡು ವಿಶ್ವವಿದ್ಯಾನಿಲಯಗಳಿಗಾಗಿ ಸುಮಾರು ಒಂದು ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರದವರು ಒದಗಿಸಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ವಿಲೀನವಾಗಿರುವ ಪ್ರದೇಶಗಳಿಗೆ ಸೇರಿದವರಾದ ವಿದ್ಯಾರ್ಥಿಗಳು ಹೈದರಾಬಾದ್, ಬೊಂಬಾಯಿ, ಮದ್ರಾಸ್ ಪ್ರಾಂತಗಳಲ್ಲಿರತಕ್ಕ ಇಂಜಿನಿಯರಿಂಗ್, ಮೆಡಿಕಲ್ ಮತ್ತು ವೆಟರಿನರಿ ಕಾಲೇಜುಗಳಲ್ಲಿಯೇ ಎಂದಿನಂತೆ ವ್ಯಾಸಂಗಮಾಡಲು ನಮ್ಮ ಸರ್ಕಾರದವರು ಅವಕಾಶವನ್ನು ಕಲ್ಪಿಸಿದ್ದಾರೆಂಬುದು ನನಗೆ ಸಂತೋಷದ ವಿಚಾರವಾಗಿದೆ. ಆ ಪ್ರದೇಶಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನವನ್ನು ಒದಗಿಸಬೇಕಾದುದು ಬಹಳ ಅಗತ್ಯವಾಗಿದೆ. ಇನ್ನು ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದೂ ಬಹಳ ಸಂತೋಷದ ವಿಚಾರ. ಅದಕ್ಕೆ ಈಗಾಗಲೇ ಒಂದೂವರೆ ಕೋಟಿ ರೂಪಾಯಿಗಳು ವೆಚ್ಚವಾಗಬಹುದು ಎಂದು ಹೇಳುತ್ತಿದ್ದಾರೆ. ಅದು ಎಷ್ಟರಮಟ್ಟಿಗೆ ನಿಜವೆಂಬುದು ನಾಳೆ ಬಜೆಟ್ ಮಂಡಿಸಿದಾಗ ತಿಳಿಯುತ್ತದೆ. ಏಕೆಂದರೆ ಈ ವಿಧಾನ ಸೌಧವನ್ನು ಕಟ್ಟಿ ಇದಕ್ಕಾಗಿ ಆಗಿರತಕ್ಕ ಪ್ರಚಾರ, ಅಪಪ್ರಚಾರ ಏನೆಂಬುದು ತಮಗೆಲ್ಲರಿಗೂ ಗೊತ್ತಿದೆ. ಇದರಿಂದ ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜನ್ನು ಸ್ಥಾಪಿಸಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಒಂದು ಒಳ್ಳೆಯ ಪ್ಲಾನಿಂಗ್ ಎಸ್ಟಿಮೇಟ್‌ಮಾಡಿ ಈ ಮಾನ್ಯ ಸಭೆಯ ಒಪ್ಪಿಗೆ ಪಡೆದು ಅದರಂತೆ ಕಟ್ಟಡವನ್ನು ಕಟ್ಟಿ ನಿರ್ಮಾಣ ಮಾಡುವುದು ಒಳ್ಳೆಯದು ಎಂದು ನನ್ನ ಭಾವನೆ. ಈ ಸಂದರ್ಭದಲ್ಲಿ ಮೈಸೂರು ಮೆಡಿಕಲ್ ಕಾಲೇಜಿಗೆ ಇನ್ನೂ ಅನೇಕ ಉಪಕರಣಗಳನ್ನು ಒದಗಿಸಲು ಅನಾಟೋಮಿಗೆ ಸಂಬಂಧಪಟ್ಟ ಒಂದು ವಿಧೇಯಕವನ್ನು ಈ ಸಭೆಯ ಪರ್ಯಾಲೋಚನೆಗಾಗಿ ಮಂಡಿಸುವುದು ನನಗೆ

ಸಂತೋಷಕರವಾಗಿದೆ. ಈಗಾಗಲೇ ಮೈಸೂರು ಮೆಡಿಕಲ್ ಕಾಲೇಜಿನಿಂದ ಅನೇಕ ಡಾಕ್ಟರುಗಳು ಇನ್ನೂ ಉನ್ನತ ವ್ಯಾಸಂಗದಲ್ಲಿ ತರಪೇತು ಹೊಂದಲು ವಿದೇಶೀ ಪ್ರವಾಸವನ್ನು ಕೈಕೊಂಡಿದ್ದಾರೆ. ನಮ್ಮ ಸರ್ಕಾರದವರೂ ಅವರನ್ನು ಪ್ರೋತ್ಸಾಹಿಸಿ ಕಳಿಸಿ ಕೊಟ್ಟಿದ್ದಾರೆ.

ಅದೇ ರೀತಿಯಾಗಿ ಮೆಡಿಕಲ್ ಕಾಲೇಜಿನಲ್ಲಿ ಮಹಿಳೆಯರಿಗೆ ಹಾಸ್ಟಲ್ ಇಲ್ಲದಿರುವುದು ಒಂದು ಕೊರತೆಯಾಗಿದೆ. ಮೈಸೂರು ಮೆಡಿಕಲ್ ಕಾಲೇಜದಲ್ಲಿ ಮಹಿಳೆಯರಿಗೆ ಹಾಸ್ಟಲ್ ಅನುಕೂಲತೆಯನ್ನು ಒದಗಿಸಿ ಕೊಡಬೇಕು.

ಬೆಳಗಾಂ, ಧಾರವಾಡ ಜಿಲ್ಲಾ ಬೋರ್ಡುಗಳ ಅವಧಿ ಮುಗಿದಿರುವುದರಿಂದ ಚುನಾವಣೆಗಳನ್ನು ಮುಂದಕ್ಕೆ ಹಾಕದೆ ಆದಷ್ಟು ಜಾಗ್ರತೆಯಿಂದ ಪ್ರಜಾಪ್ರಭುತ್ವದ ನೀತಿಗೆ ಅನುಗುಣವಾಗಿ ಜಿಲ್ಲಾ ಬೋರ್ಡುಗಳ ಚುನಾವಣೆಗಳನ್ನು ನಡೆಸಬೇಕು.

ಬೆಂಗಳೂರು ನಗರದಲ್ಲಿ ಸ್ಲಮ್ ಕ್ಲಿಯರೆನ್ಸ್ ಸಲುವಾಗಿ 75 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಬಡವರಿಗೆ ಯೋಗ್ಯವಾದ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಮಾಡಬೇಕು. ಬೆಂಗಳೂರು ನಗರದಲ್ಲಿ ನೀರಿನ ಸರಬರಾಯಿ ಏರ್ಪಾಡು ಸರಿಯಾಗಿಲ್ಲ. ಜನರಿಗೆ ಬಹಳ ತೊಂದರೆಯಾಗುತ್ತಿದೆ. ಜಾಗ್ರತೆಯಾಗಿ ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ತಕ್ಕ ಕ್ರಮಗಳನ್ನು ಕೈಕೊಳ್ಳಬೇಕು. ಉತ್ತರ ಕರ್ನಾಟಕದಲ್ಲಿ ರಸ್ತೆಗಳು ಚೆನ್ನಾಗಿಲ್ಲ. ರಸ್ತೆಗಳ ಸುಧಾರಣೆಯಾಗುವಂತೆ ಏರ್ಪಾಡು ಮಾಡಬೇಕು. ಹೆಲ್ತ್ ಯುನಿಟ್ಟು ಇರುವ ಕಡೆ ಆಸ್ಪತ್ರೆಯನ್ನು ಒದಗಿಸಬೇಕು. ಸರ್ಕಾರದವರು ಕುಷ್ಟರೋಗ ಆಸ್ಪತ್ರೆಯನ್ನು ಕಟ್ಟಿಸುವ ಏರ್ಪಾಡು ಆದಷ್ಟು ಜಾಗ್ರತೆ ಮಾಡಬೇಕು. ಮಹಿಳೆಯರ ಪ್ರಗತಿಗಾಗಿ Social Welfare Board ಇದೆ. ಇದರ ಬಗ್ಗೆ ಏನು ಕ್ರಮ ಕೈಕೊಳ್ಳುತ್ತಾರೆಂಬುದನ್ನು ಬಡ್ಜೆಟ್ಟಿನ ಭಾಷಣಗಳಿಗೆ ಉತ್ತರಕೊಡುವಾಗ ತಿಳಿಸಬೇಕೆಂದು ಈ ಸಭೆಯಮೂಲಕ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರ ಕೆಲಸವು ಇನ್ನುಮುಂದೆ ಮಹಿಳೆಯರಿಗೆ ದೊರಕುವಂತೆ ಮಾಡಬೇಕು ಎಂದು ಸೂಚಿಸುತ್ತೇನೆ. ರಾಜ್ಯಪಾಲರ ಭಾಷಣಕ್ಕೆ ನನ್ನ ಸಂಪೂರ್ಣ ಸಮ್ಮತಿಯಿದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀಮತಿ ಅನ್ನಪೂರ್ಣಬಾಯಿ (ಕಲ್ಯಾಣಿ).—ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ಶಬ್ದಗಳಲ್ಲಿಯೇ ಹೈದ್ರಾಬಾದ ಕರ್ನಾಟಕದ ಬೀದರ್ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಹೇಳುತ್ತೇನೆ. ಬೀದರ್ ಜಿಲ್ಲೆಯಲ್ಲಿ ಆಹಾರಧಾನ್ಯದ ಪರಿಸ್ಥಿತಿಯು ಬಹಳ ಬಿಕ್ಕಟ್ಟಿನದಾಗಿದೆ. ಆದಕಾರಣ ಈ ಭಾಗದಲ್ಲಿ ಜನರಿಗೆ ಕಡಮೆ ಬೆಲೆಗೆ ಆಹಾರ ಧಾನ್ಯಗಳನ್ನು ಒದಗಿಸಿ ಕೊಡುವದಕ್ಕೋಸ್ಕರ, ಈ ಮೊದಲೇ ಸರ್ಕಾರದವರು ಹೇಳಿದಂತೆ, ಫೇರ್ ಪ್ರೈಸ್ ಧಾನ್ಯದ ಅಂಗಡಿಗಳನ್ನು ಆದಷ್ಟು ಮಟ್ಟಿಗೆ ತೀವ್ರವಾಗಿ ತೆಗೆಯಬೇಕೆಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕಲ್ಯಾಣ ನಗರದಲ್ಲಿ 20 ಸಾವಿರ ಜನಸಂಖ್ಯೆಯು ಇದ್ದರೂ ಯಾವದೇ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕೆಂದು ಸರಕಾರದ ಗಮನಕ್ಕೆ ಬಂದಿಲ್ಲ. ಇದುವರೆಗೆ ಕಲ್ಯಾಣದಲ್ಲಿ ಯಾವ ಅಭಿವೃದ್ಧಿ ಕಾರ್ಯಕ್ಕಾಗಿಯೂ ಖರ್ಚುಮಾಡಿಲ್ಲ. ಈ ನಗರದಲ್ಲಿ ನಲ್ಲಿ ಲೈಯಿಟ್ ಒದಗಿಸುವ ಒಂದು ಯೋಜನೆಯು ತಯಾರಾಗಿ ಹತ್ತು ವರ್ಷಗಳಾದವು. ಆದರೆ ಪ್ರಗತಿ ಏನೂ ಆಗಿಲ್ಲ. ಆದಕಾರಣ ಆದಷ್ಟು ತೀವ್ರವಾಗಿ ಈ ಯೋಜನೆಯ ಕೆಲಸವನ್ನು ಪೂರೈಸುವಂತೆ ಮಾಡಬೇಕೆಂದೂ ಅದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ ಸರಕಾರಕ್ಕೆ ಸೂಚಿಸುತ್ತೇನೆ.

ಕಲ್ಯಾಣದಲ್ಲಿ ಹರಿಜನರಿಗೆ ನೀರಿನ ಸಲುವಾಗಿ ಮಳೆಗಾಲದಲ್ಲಿ ಬಹಳ ತೊಂದರೆಯಾಗುತ್ತಿದೆ. ದಾರಿಯು ಸರಿಯಾಗಿಲ್ಲ. ಹರಿಜನರು ನೀರು ತರಬೇಕಾದರೆ ದಾರಿಯಲ್ಲಿ ಮೊಳಕಾಲಿನವರೆಗೆ ಇರುವ ಕೆಸರಿನೊಳಗಿಂದ ದಾಟಿ ಆಚೆಗೆಹೋಗಿ ನೀರು ತರಬೇಕಾಗುತ್ತದೆ. ಅಲ್ಲಿಯ ರಸ್ತೆಯನ್ನು ದುರಸ್ತು ಮಾಡಬೇಕು. ಹರಿಜನರ ಸಲುವಾಗಿ ಒಂದು ಬಾವಿಯನ್ನು ಕಟ್ಟಿಸಿ ಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ.

ವಿದ್ಯಾಭ್ಯಾಸದ ವಿಷಯದಲ್ಲಿ ಹೇಳುವುದಾದರೆ, ಕಲ್ಯಾಣದಲ್ಲಿ 20 ಸಾವಿರ ಜನಸಂಖ್ಯೆಯಿದ್ದರೂ ಒಂದ ಹೈಸ್ಕೂಲಿಲ್ಲ. ಒಂದು ಶಾಲೆ ಇದ್ದರೂ ಅಲ್ಲಿ ಡ್ರಾಯಿಂಗ್ ಶಿಕ್ಷಕರು ಇಲ್ಲ. ಕಲ್ಯಾಣಿ ಕ್ಷೇತ್ರದ ನಾಲ್ಕು ಗ್ರಾಮಗಳಲ್ಲಿ ಮಿಡಲ್ ಸ್ಕೂಲಿನ ಅಗತ್ಯ ಬಹಳವಾಗಿದೆ. ಅಲ್ಲಿಯ ಜನರು ಸಹಕರಿಸಲು ಮತ್ತು ಸಹಾಯಮಾಡಲು ಆತುರರಾಗಿದ್ದಾರೆ. ಒಂದು ಕನ್ಯಾ ಪಾಠಶಾಲೆಯನ್ನು ನಾವೇ ಚಂದಾಹಣ ಕೂಡಿಸಿ ತೆರೆದು ಎರಡು ವರ್ಷಗಳಾದುವು. ಈ ಶಾಲೆಗೆ ಸರಕಾರದ ಸಹಾಯ ಇನ್ನೂ ದೊರೆತಿಲ್ಲ. ಈ ಶಾಲೆಗೆ ತೀವ್ರವಾಗಿ ಗ್ರಾಂಟು ಮಂಜೂರು ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಹಳ್ಳಿಗಳಲ್ಲಿ ವೈದ್ಯಕೀಯ ಸಹಾಯವನ್ನೊದಗಿಸಲು ಸರಕಾರಿ ದವಾಖಾನೆಗಳಿಲ್ಲ. ಹಳ್ಳಿಗಳಿಗೆ ವಿಲೇಜ್ ಬಾಕ್ಸ್‌ಗಳನ್ನು ಕಳಿಸಿಕೊಡುವ ಏರ್ಪಾಡು ಮಾಡಬೇಕೆಂದು ಸರಕಾರದ ಗಮನಕ್ಕೆ ತರುತ್ತೇನೆ. ಕಲ್ಯಾಣದಲ್ಲಿ ಒಂದು ಹೆರಿಗೆಯ ಆಸ್ಪತ್ರೆಯು ಆಗುವಂತೆ ಮಾಡಬೇಕೆಂದು ಸರ್ಕಾರಕ್ಕೆ ಬೇಡಿಕೊಳ್ಳುತ್ತೇನೆ. ಸುತ್ತಮುತ್ತಲಿನ ಹಳ್ಳಿಗಳಿಗೆಲ್ಲಾ ಈ ಹೆರಿಗೆಯ ಆಸ್ಪತ್ರೆಯಿಂದ ಬಹಳ ಅನುಕೂಲವಾಗುವುದು. ಹರಿಜನರಿಗೆ ಇರಲು ಮನೆಗಳನ್ನು ತೀವ್ರವಾಗಿ ಸರಕಾರದವರು ಕಟ್ಟಿಸಿಕೊಡುವರೆಂದು ನಂಬಿದ್ದೇನೆ. ಇಷ್ಟು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇನ್ನೂ ಕೆಲವು ವಿಷಯಗಳನ್ನು ಪ್ರಾಸ್ತಾಪಿಸಿ ಮಾತನಾಡಬೇಕಾಗಿತ್ತು. ಆದರೆ ಆ ವಿಷಯಗಳನ್ನು ರಾಜ್ಯಪಾಲರು ಪ್ರಸ್ತಾಪಿಸಿಲ್ಲ. ಸರಕಾರದಿಂದ ಬಂದಿರತಕ್ಕಂಥ ವರದಿಗೆ ಅನುಸಾರವಾಗಿ ಸಾಂಪ್ರದಾಯಿಕವಾಗಿ ರಾಜ್ಯಪಾಲರು ಭಾಷಣ ಮಾಡುತ್ತಾರೆಯೇ ವಿನಾ ತಮ್ಮ ಸ್ವಂತ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುವ ಭಾಷಣವಿದಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ವಿಷಯವನ್ನಾದರೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎತ್ತಿ ಹಿಡಿಯಬೇಕಾಗಿತ್ತು. ನಾವು ಈ ಸಭೆಯನ್ನು ನಡೆಸುತ್ತಿರುವ ಭವ್ಯಕಟ್ಟಡವಾದ ವಿಧಾನ ಸೌಧದ ಬಗ್ಗೆ ಪ್ರಸ್ತಾಪಿಸಬೇಕಾಗಿತ್ತು. ಈ ಸಂದರ್ಭದಲ್ಲಿ ಈ ಸಭೆಯಲ್ಲಿ ನಮ್ಮ ಮುಖ್ಯಮಂತ್ರಿಗಳು, ಮರಾಮತ್ ಇಲಾಖೆಯ ಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಹಾಜರಾಗಿದ್ದರೆ ಚೆನ್ನಾಗಿತ್ತು. ಈ ವಿಧಾನಸೌಧ ಕಟ್ಟಡದ ಬಗ್ಗೆ ಅನೇಕ ಆಕ್ಷೇಪಣೆಗಳನ್ನು ಎತ್ತಿತೋರಿಸಿ ಬಹಳ ವಿಷಾದಕರವಾಗಿ ಟೀಕಿಸಿದ್ದಾರೆ. ನಾನು ವಿರೋಧಪಕ್ಷದವನಾಗಿ ಮಾತನಾಡುತ್ತಿದ್ದರೂ ನಾನು ಹೇಳುವದೇನೆಂದರೆ ಮಂತ್ರಿಗಳು ಯಾವ ಪಕ್ಷಕ್ಕೇ ಸೇರಿರಲಿ ಅವರು ಒಳ್ಳೆಯ ಕೆಲಸ ಮಾಡಿದಾಗ ಅವರನ್ನು ಗೌರ

(ಶ್ರೀ ಎಚ್. ಜಿ. ನರಸಿಂಹೇಗೌಡ.)

ವಿಸಬೇಕು. ಶ್ರೀ ಹನುಮಂತಯ್ಯನವರೇ ಮಾಡಿರಲಿ, ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರೇ ಮಾಡಿರಲಿ ಒಳ್ಳೆಯ ಕೆಲಸ ಮಾಡಿದಾಗ ಅವರಿಗೆ ಗೌರವವನ್ನು ಸಲ್ಲಿಸಿ ದೇಶದ ಜನರು ಅವರಿಗೆ ತಲೆ ಬಾಗಿಸಲೇಬೇಕು. ಈ ಭವ್ಯವಾದ ವಿಧಾನ ಸೌಧದ ನಿರ್ಮಾಣದ ವಿಷಯದಲ್ಲಿ ಅನೇಕ ಆಕ್ಷೇಪಣೆಗಳನ್ನು ಮಾಡಿದ್ದಾರೆ. ಈ ಭವ್ಯ ಕಟ್ಟಡವಾದ ವಿಧಾನಸೌಧ ನಿರ್ಮಾಣ ಕಾರ್ಯದಲ್ಲಿ ಯಾವ ಲೋಪದೋಷಗಳೂ ನಡೆದಿಲ್ಲ.

ನಮ್ಮ ಮಿತ್ರರು ನಡೆದಿರುವ ಕೆಲಸವನ್ನು ಪರಿಶೀಲಿಸಿ ಲೆಕ್ಕ ಪತ್ರಗಳನ್ನು ನೋಡುವುದಾದರೆ ಅಂದಾಜ ಮಾಡಿದ್ದಕ್ಕಿಂತ ಕಡಮೆ ಖರ್ಚಿನಲ್ಲಿ ಕೆಲಸ ನಡೆದಿದೆ ಎಂದು ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ಜವಾಬ್ದಾರಿ ಶ್ರೀ ಹನುಮಂತಯ್ಯನವರ ಮೇಲೆ ಮಾತ್ರ ಇಲ್ಲ; ಹಿಂದಿನ ಮಂತ್ರಿಮಂಡಲ, ಈ ಸಭೆಯ ಮಾನ್ಯ ಸದಸ್ಯರು, ಸರ್ಕಾರದ ಸೆಕ್ರೆಟರಿಗಳು, ನೇಮಿಸಿದ ಸಮಿತಿ ಸದಸ್ಯರು ಇವರೆಲ್ಲರಮೇಲೂ ಇದೆ. ಇದನ್ನರಿಯದೆ ನಮ್ಮ ದೇಶದ ಮುಂದಿರುವ ಈ ದೊಡ್ಡ ಕಟ್ಟಡ ಕಟ್ಟಿರುವ ಇಂಜಿನಿಯರುಗಳ ಮೇಲೆ ಮಾತ್ರ ಆಕ್ಷೇಪಣೆ ಎತ್ತಿರುವುದು ಬಹಳ ವಿಷಾದಕರ. ಸರ್ ಎಂ. ವಿಶ್ವೇಶ್ವರಯ್ಯನವರು, ಶ್ರೀ ನೆಹ್ರೂರವರು ಮತ್ತು ಜರ್ಮನ್ ಇಂಜಿನಿಯರುಗಳು ಮೈಸೂರು ದೇಶದಲ್ಲಿ ಕಟ್ಟಿರುವ ಈ ಭವ್ಯ ಕಟ್ಟಡದ ಕೆಲಸವನ್ನು ಶ್ಲಾಘಿಸಿ ಮೈಸೂರಿನ ಇಂಜಿನಿಯರುಗಳ ಸಾಹಸವನ್ನು ಪ್ರಶಂಸೆ ಮಾಡಿದ್ದಾರೆ. ನಾನು ಈಗಾಗಲೆ ತಿಳಿದುಕೊಂಡಿರುವ ಹಾಗೆ ಇಂಜಿನಿಯರಿಂಗ್ ಇಲಾಖೆಯವರು ಯಾವ ಕಾರ್ಯಕಲಾಪಗಳನ್ನು ನಡೆಸಬೇಕಾದರೂ ಅಪ್ರೂವಲ್ ತೆಗೆದುಕೊಂಡು ಸರ್ಕಾರಿ ಆರ್ಡರಾದ ನಂತರ ನಡೆಸಿದ್ದಾರೆ. ಅನುಮತಿ ಪಡೆಯದೆ ಒಂದು ಹೆಜ್ಜೆಯೂ ಮುಂದೆ ಹೋಗಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಆದ್ದರಿಂದ ವೃಥಾ ದೋಷಾರೋಪಣೆಗಳಿಗೆ ಅವಕಾಶಕೊಡದೆ ನಮ್ಮ ಜನರ ಅಂತಸ್ತನ್ನು ಎತ್ತಿ ಹಿಡಿಯುವುದನ್ನು ನಾವು ಮೊದಲು ಕಲಿಯಬೇಕಾಗಿದೆ.

ಎರಡನೆಯದಾಗಿ ಭೂಸುಧಾರಣಾ ಸಮಿತಿಯ ವಿಷಯದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ಈಗತಾನೆ ನಮ್ಮ ಕಾಂಗ್ರೆಸ್ ಸರ್ಕಾರದವರು ರಚಿಸಿರತಕ್ಕ ಸಮಿತಿಯ ವಿಷಯದಲ್ಲಿ ನಾನು ಮಾತನಾಡುವುದಾದರೆ ವಿರೋಧ ಪಕ್ಷದ ಅಭಿಪ್ರಾಯ ತಿಳಿಯಲು ಆ ಸಮಿತಿಯಲ್ಲಿ ವಿರೋಧ ಪಕ್ಷದ ಸದಸ್ಯರಾರಿಗೂ ಅವಕಾಶ ಕೊಟ್ಟಿರುವುದಿಲ್ಲ. ಆ ಸಮಿತಿಯಲ್ಲಿ ದೊಡ್ಡ ಜಮೀನುದಾರರಿದ್ದಾರೆ. ಅವರಿಗೇನು ಈ ಸಮಸ್ಯೆ ಅರ್ಥವಾಗುತ್ತದೆ? ಪ್ರಜಾಪ್ರಭುತ್ವದ ಹಕ್ಕು ಎಲ್ಲರಿಗೂ ಇದೆಯೆಂಬುದನ್ನು ನಮ್ಮ ಕಾಂಗ್ರೆಸ್ ಮಂತ್ರಿಗಳು ಖಂಡಿತ ಮರೆತಿದ್ದಾರೆ. ದಯವಿಟ್ಟು ಇನ್ನುಮುಂದೆ ಯಾವ ಸಮಿತಿಗಳನ್ನು ನೇಮಕಮಾಡಬೇಕಾದರೂ ಕೂಡ ವಿರೋಧ ಪಕ್ಷಗಳ ಅಭಿಪ್ರಾಯ ಮತ್ತು ಹಿಂದುಳಿದ ಪಕ್ಷಗಳ ಅಭಿಪ್ರಾಯ ತಿಳಿದುಕೊಂಡು ಮಾಡುವುದು ಬಹಳ ಒಳ್ಳೆಯದು.

ರೈತರು ಬಹಳ ಅನೂಚಾನವಾಗಿ ಗಳಿಸಿರುವ ಜಮೀನುಗಳನ್ನು ವಿಲೆವಾಡುವ ವಿಷಯದಲ್ಲಿ ಮಾತ್ರ ಮಂತ್ರಿಗಳು ಬಹಳ ಆಸಕ್ತಿ ವಹಿಸಿದ್ದಾರೆ. ಆದರೆ ಸಿಟಿಯಲ್ಲಿ ಒಂದು ಸಾವಿರದಿಂದ ಹಿಡಿದು ಹನ್ನೆರಡು ಸಾವಿರ ರೂಪಾಯಿಗಳವರೆಗೂ ಬಾಡಿಗೆ ಬರುವ ಟೆನೆನ್ಸಿ ವಿಚಾರದಲ್ಲೇನು ಕ್ರಮ ತೆಗೆದುಕೊಂಡಿದ್ದಾರೆ? ಇವತ್ತು ಎಕರೆ ಜಮೀನಿಟ್ಟುಕೊಳ್ಳುವುದಕ್ಕೂ ಅವಕಾಶ ಕೊಡದಿರುವಾಗ ನೂರಾರು ಕಟ್ಟಡಗಳನ್ನಿಟ್ಟುಕೊಂಡು ಬಾಡಿಗೆ ಪಡೆಯುತ್ತಿರುವವರ ವಿಚಾರದಲ್ಲೂ ಏಕೆ ಪ್ರವೇಶಮಾಡಿ ರಾಷ್ಟ್ರೀಕರಣ ಮಾಡಬಾರದು? ಇದುವರೆಗೂ ಯಾವ ಮಂತ್ರಿಗಳೂ ಈ ವಿಚಾರ ಯೋಚನೆ ಮಾಡಿರುವುದಿಲ್ಲ. ಈಗಲಾದರೂ ಯೋಚನೆಮಾಡಿ ದೇಶದಲ್ಲಿ ಹೆಚ್ಚು ಮನೆಗಳನ್ನು ಪಡೆದಿರುವವರು ಯಾರೆಂಬುದನ್ನು ನೋಡಿ ರಾಷ್ಟ್ರೀಕರಣಮಾಡಿ ಬಡಬಗ್ಗರಿಗೆ ಮನೆಗಳನ್ನು ವಿಲೆ ಮಾಡಲು ಸೂಕ್ತಕ್ರಮ ಕೈಕೊಳ್ಳಬೇಕು.

ಮೂರನೆಯದಾಗಿ ಮಂತ್ರಿಗಳು ಶಾಸನ ಸಭೆ ನಡೆಯುತಕ್ಕ ಕಾಲದಲ್ಲಿ ಅನೂಚಾನವಾಗಿ ಹಿಂದಿನಿಂದ ಬಂದಿರತಕ್ಕ ಪದ್ಧತಿಯಂತೆ ಹಾಜರಿದ್ದು ಅವರವರ ಪೋರ್ಟ್‌ಫೋಲಿಯೋಗಳಿಗೆ ಸಂಬಂಧಪಟ್ಟ ವಿಷಯಗಳನ್ನು ನೋಟ್ ಹಾಕಿಕೊಂಡು ಅಧಿವೇಶನದ ನಂತರ ಅವನ್ನು ಕಾರ್ಯಗತ ಮಾಡುವುದನ್ನು ಬಿಟ್ಟು ತಮ್ಮ ಕರ್ತವ್ಯವನ್ನು ಮರೆತು ಪ್ರವಾಸ ಹೋಗುವುದು ಬಹಳ ಅನ್ಯಾಯ. ಈ ದಿವಸ ಮುಖ್ಯ ಮಂತ್ರಿಗಳು ಸಭೆಯಲ್ಲಿ ಹಾಜರಿದ್ದರೆ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರಬೇಕೆಂಬ ಆಶೆಯಿತ್ತು. ಆದರೆ ಅವರು ಹಿಂದಿನ ದಿವಸ, ಸಭೆಯಲ್ಲಿ ಹಾಜರಿಲ್ಲದೆ, ಬೇರೆ ಕಡೆಗೆ ಹೋಗಬೇಕಾದ ಪ್ರಮೇಯವೇನಿತ್ತು? ಸಭೆ ನಡೆಯುವಾಗ ಎಲ್ಲ ಸಚಿವರುಗಳೂ ಹಾಜರಿರುವುದು ಅಗತ್ಯ. ಈ ದಿನ ದೇಶ ಅಲ್ಲಕಲ್ಲೋಲವಾಗುವ ಪರಿಸ್ಥಿತಿ ಯಾದರೂ ಏನಿದೆ? ಎರಡು ಕೋಟಿ ಪ್ರಜೆಗಳ ಪ್ರತಿನಿಧಿಗಳಿರುವ ಈ ಸಭೆಯ ಸದಸ್ಯರಿಗಿರುವ ಜವಾಬ್ದಾರಿಗಿಂತ ಹೆಚ್ಚಾಗಿ ಏನಿದೆ? ಹೊರಗಡೆ ಹೋಗಿ ಅಡ್ರೆಸ್ ತೆಗೆದುಕೊಳ್ಳುವುದು, ಸಭೆ ನಡೆಯುವಾಗ ಪ್ರವಾಸ ಮಾಡುವುದು ಮುಂತಾದ್ದನ್ನು ಮಂತ್ರಿಗಳು ಕಡಮೆ ಮಾಡಿದರೆ ನಿಜವಾಗಿಯೂ ದೇಶಕ್ಕೆ ಎಷ್ಟೋ ಕ್ಷೇಮ. ಒಂದೇಸಲ ನಾಲ್ಕೈದು ಮಂತ್ರಿಗಳು ಏಕಕಾಲದಲ್ಲಿ ಪ್ರವಾಸ ಹೋಗುವ ಪದ್ಧತಿಯನ್ನು ತಪ್ಪಿಸಬೇಕು.

ನಾಲ್ಕನೆಯದಾಗಿ ಸಂಬಳ ಸಾರಿಗೆಗಳ ವಿಷಯದಲ್ಲಿ ಕೆಲವು ಮಾತುಗಳನ್ನು ನಿಜವಾಗಿಯೂ ಬಹಳ ವಿಷಾದದಿಂದ ಹೇಳಬೇಕಾಗಿದೆ. ದೇಶದಲ್ಲಿ ರಾಜಕೀಯ ಪುನರ್ವಿಂಗಡನೆಯಾಗುವ ಕಾಲದಲ್ಲಿ ಇಂಡಿಯಾ ಸರ್ಕಾರದವರ ಆಡಳಿತಕ್ಕೊಳಪಟ್ಟು ಅವರ ಮಾತುಗಳಿಗೆ ಕಿವಿಕೊಟ್ಟು ನಾವು ಹೊರಗಿನವರನ್ನು ಸೇರಿಸಿಕೊಳ್ಳುವಾಗ ಎಸ್. ಆರ್. ಸಿ. ಬಿಲ್ಲಿನಮೇಲೆ ಯಾವ ಅಭಿಪ್ರಾಯವನ್ನೂ ಸೂಚಿಸದೆ ಈ ದಿವಸ ಹೊರಗಡೆ ಪ್ರದೇಶದ ನೌಕರರು ನಮ್ಮ ಹಳೆಯ ಮೈಸೂರಿನ ನೌಕರರೊಂದಿಗೆ ಮಿಳಿತವಾಗಿ ಬಹಳ ಅನ್ಯಾಯ ನಡೆಯುತ್ತಿದೆ. ಅದೇನೆಂದರೆ ಹೊರಗಡೆ ವಿಶಾಲ ಮೈಸೂರಿಗೆ ಸೇರುವಾಗ ಕೆಲಸಕ್ಕೆ ಸೇರಿಕೊಂಡು ಎರಡು ವರ್ಷವಾಗಿದ್ದವರಿಗೂ ಕೂಡ ನಾಲ್ಕೈದು ಪ್ರಮೋಷನ್ ಏಕಕಾಲದಲ್ಲಿ ಕೊಟ್ಟು ಹೊಸ ಮೈಸೂರಿಗೆ ಒಂದು ಪಟ್ಟಿ ಕಳುಹಿಸಿದ್ದಾರೆ. ಅದರಿಂದನಮ್ಮ ಹಳೆಯ ಮೈಸೂರಿನಲ್ಲಿ 10-20 ವರ್ಷ ದುಡಿದು ಅನುಭವ ಪಡೆದಿರುವ ಸೀನಿಯರ್ ಆಫೀಸರ ಮೇಲೆ ಎರಡು ವರ್ಷ ಸರ್ವಿಸ್ ಮಾಡಿರುವ ಜೂನಿಯರ್ ಆಫೀಸರು ಬಂದು ಸೀನಿಯರ್ ಆಫೀಸರಾಗಿದ್ದಾರೆ. ಸಂಬಳದ ಸ್ಕೇಲು ಮಾರ್ಪಾಡಾಗಿರುವುದು ಅನೇಕ ನೌಕರರಿಗೆ ಬಹಳ ವ್ಯತ್ಯಾಸಮಾಡಿದೆ. ಕೆಲವರು ಆಫೀಸಿನಲ್ಲಿ ಕೆಲಸಮಾಡುವವರು ತಮ್ಮ ಕುಂದುಕೊರತೆಯನ್ನು ನನ್ನಮುಂದೆ ಹೇಳಿದ್ದಾರೆ. ನಮ್ಮ ಹಿಂದೆ ಈಗ ಎರಡು ವರ್ಷಗಳಲ್ಲಿ ಕೆಲಸಕ್ಕೆ ಸೇರಿಕೊಂಡವರು ನಮಗಿಂತ ಸೀನಿಯರ್ ಆಗಿ ಮೇಲೆ ಕುಳಿತು ನಮಗೆ ಆರ್ಡರು ಮಾಡುವವಂತಾಗಿರುವುದು ಒಂದು ಸಂಕೋಲೆಯಾಯಿತು. ಮನಸ್ಸಿಗೆ ತುಂಬ ನೋವ

ನ್ನುಂಟುಮಾಡಿದೆಎಂಬ ಅಭಿಪ್ರಾಯವನ್ನು ಹೊರಗೆಡವಿದರು. ಇದನ್ನು ಪರಿಶೀಲಿಸುವಾಗ ಪ್ರತಿಯೊಬ್ಬರ ಸಂಬಳ, ಕೆಲಸಕ್ಕೆ ಸೇರಿದ ತಾರೀಖು ವಗೈರೆ ಎಲ್ಲ ವಿಚಾರವನ್ನೂ ಗಣನೆಗೆ ತೆಗೆದುಕೊಂಡು ಯಾರಿಗೂ ತೊಂದರೆಯಾಗದಂತೆ ವ್ಯವಸ್ಥೆಮಾಡಬೇಕು. ವಿಶಾಲ ಮೈಸೂರಿಗೆ ಒಂದೇ ಕಾನೂನು ಅನ್ವಯವಾಗುವಂತೆ ಎಂ. ಎಸ್. ಆರ್. ರೂಲ್ಸಿಗೆ ತಿದ್ದುಪಡಿಮಾಡಿ ಜಾರಿಗೆ ತರಬೇಕು. ನಮ್ಮ ಹಳೆಯ ಮೈಸೂರಿಗೆ ಹೊಸಬರು ಬಂದುಸೇರುವಾಗ ನೌಕರರು ಯಾವ ತಾರೀಖಿನಲ್ಲಿ ಕೆಲಸಕ್ಕೆ ಸೇರಿದರು, ಯಾವಾಗ ಪ್ರಮೋಷನ್ ಕೊಟ್ಟಿದೆ ಎಂಬುದನ್ನು ಸರ್ವಿಸ್ ರಿಜಿಸ್ಟರಿನ ಆಧಾರದ ಮೇಲೆ ಮಾಡಿರುವುದು ನ್ಯಾಯವಾಗಿಲ್ಲ.

2-30 P.M.

ಮಾನ್ಯ ಮಂತ್ರಿಗಳು ಈಗಿನ ಸ್ಕೇಲುಗಳನ್ನು revise ಮಾಡುವ ಕಾಲದಲ್ಲಿ ಇದನ್ನೂ ಗಮನದಲ್ಲಿಟ್ಟುಕೊಂಡು ಮಾಡಿದ್ದರೆ ಚೆನ್ನಾಗಿತ್ತು ಎಂದು ಹೇಳಬಯಸುತ್ತೇನೆ.

ಶ್ರೀ ಟಿ. ಮರಿಯಪ್ಪ.—ಶ್ರೀ ನರಸಿಂಹೇಗೌಡರಿಗೆ ಈ ಒಂದು ವಿಷಯ ತಿಳಿದಿದ್ದರೆ ಚೆನ್ನಾಗಿತ್ತು. ಪ್ರತಿಯೊಬ್ಬ ನೌಕರರೂ ಯಾವತ್ತು ಕೆಲಸಕ್ಕೆ ಸೇರಿದರು, ಎಷ್ಟು ಸರ್ವಿಸ್‌ಆಗಿದೆ ಎಂಬದೆಲ್ಲಾ ರಿಕಾರ್ಡಿನಲ್ಲಿರುತ್ತದೆ. ಈ ಸಂಬಳಗಳನ್ನು ನಿಗದಿಮಾಡುವಾಗ್ಗೆ ಮತ್ತು ಸೀನಿಯಾರಿಟಿ ಗೊತ್ತುಮಾಡುವಾಗ್ಗೆ ಅವುಗಳನ್ನೆಲ್ಲಾ ನೋಡುತ್ತೇವೆ. ಈ ಎಲ್ಲಾ ಆಧಾರಗಳಮೇಲೆ Inter-State seniority listನ್ನು prepare ಮಾಡಿ ಗೆಜೆಟೆಡ್ ಆಫೀಸರುಗಳದಾಗಿದ್ದರೆ ಗೆಜೆಟ್ಟಿನಲ್ಲಿ ಛಾಯಿಷ್ ಮಾಡಿಸುತ್ತೇವೆ. ನಾನ್-ಗೆಜೆಟೆಡ್ ಆಫೀಸರುಗಳಾಗಿದ್ದರೆ ಎಲ್ಲರಿಗೂ ಸರ್ಕ್ಯುಲೇಷನ್ನಿಗೆ ಕಳಿಸಿ ಯಾರಿಗೂ ಅನ್ಯಾಯವಾಗದಿರುವ ಹಾಗೆ ಮಾಡಿದ್ದೇವೆ. ಯಾರಿಗಾದರೂ ನ್ಯಾಯ ದೊರಕಿರದಿದ್ದರೆ ಇಲಾಖಾ ಮುಖ್ಯಾಧಿಕಾರಿಯ ಮೂಲಕ ಅಪೀಲ್ ಮಾಡಿಕೊಳ್ಳಬಹುದು. ಆದ್ದರಿಂದ ತಾವು ತಪ್ಪು ಅಭಿಪ್ರಾಯದಮೇಲೆ ಹೇಳುತ್ತಿರುವಂತೆ ಕಾಣುತ್ತದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಆಮೇಲೆ ಈಗಿರತಕ್ಕ ವೈಸ್‌ಚಾನ್ಸಲರನ್ನು ಬದಲಾವಣೆಮಾಡಿ ಬೇರೆ ಯವರನ್ನು ಆ ಸ್ಥಾನಕ್ಕೆ ತರಬೇಕೆಂಬ ಪ್ರಯತ್ನಗಳು ನಡೆಯುತ್ತಿವೆಯೆಂದು ಕೇಳಿದ್ದೇನೆ. ಇಡೀ ಕರ್ಣಾಟಕದಲ್ಲಿ ಕನ್ನಡಕ್ಕಾಗಿ ದುಡಿದಿರುವ ಮಹಾ ವ್ಯಕ್ತಿಯೆಂದರೆ ಈಗಿರತಕ್ಕ ವೈಸ್‌ಚಾನ್ಸಲರ್‌ಅವರು. ಅಂಥವರನ್ನು ಬದಲಾವಣೆ ಮಾಡುವ ಯೋಚನೆ ಯೇನಾದರೂ ಇದ್ದರೆ ಅದನ್ನು ತೊಡೆದು ಹಾಕಬೇಕೆಂದು ಹೇಳುತ್ತೇನೆ.

ಆಮೇಲೆ ವೆಟರಿನರಿ ಕಾಲೇಜಿನ ವಿಷಯ. ಮೊನ್ನೆ ತಾನೆ ರಾಜ್ಯಪಾಲರು ಮಾಡಿದ ಭಾಷಣದಲ್ಲಿ ಇದು ಬಹಳ ಅಗತ್ಯವಿದೆಯೆಂಬುದನ್ನು ತಿಳಿಸಿದ್ದಾರೆ. ಆದಷ್ಟು ಬೇಗ ಇದನ್ನು ನಮ್ಮ ಪ್ರಾಂತ್ಯದಲ್ಲಿ ತೆರೆಯುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಲ್ಲದೆ ಹೊರಗಡೆ ಹೋಗತಕ್ಕ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ವಿಧ್ಯಾರ್ಥಿ ವೇತನವನ್ನೂ ಉಳಿತಾಯ ಮಾಡಿದಂತಾಗುತ್ತದೆ.

ಕೊನೆಯದಾಗಿ ಇನ್ನೊಂದು ವಿಷಯ ಹೇಳಬೇಕಾಗಿದೆ. ನಮ್ಮ ವಿಶಾಲ ಮೈಸೂರಿನ ಸದಸ್ಯರುಗಳು ತುಂಬ ಅನುಭವಸ್ಥರೇನೋ ಹೌದು. ಆದರೂ ಇನ್ನೂ ಹೆಚ್ಚಿನ ಅನುಭವ ಪಡೆಯಬೇಕೆಂಬ ಕಾಂಕ್ಷೆಯುಳ್ಳವರಾಗಿದ್ದಾರೆ. ಇದಕ್ಕಾಗಿ ನಮ್ಮ ಬಡ್ಜೆಟ್ಟಿನಲ್ಲಿ ಸಾಕಾದಷ್ಟು ಹಣವನ್ನು ಒದಗಿಸಿ ವರ್ಷವರ್ಷವೂ 50 ಜನ ಸದಸ್ಯರುಗಳಿಗೆ ಅಸೆಂಬ್ಲಿ ಮತ್ತು ಕೌನ್ಸಿಲ್ ಮೆಂಬರುಗಳು ಹೊರದೇಶಕ್ಕೆ ಹೋಗಿ ನೋಡಿಕೊಂಡು ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

---

*The House adjourned at Thirty-five Minutes past Two of the Clock and re-assembled at Five Minutes past Three of the Clock.*

---

[MR. SPEAKER in the Chair]

ಶ್ರೀಮತಿ ಬಸವರಾಜೇಶ್ವರಿ.—(ಮಾನ್ವಿ) ಮಾನ್ಯ ಅಧ್ಯಕ್ಷರೇ, ಶ್ರೀ ರಾಜ್ಯಪಾಲರು ಮಾಡಿರುವ ಭಾಷಣ ನಮ್ಮಗಳಿಗೆಲ್ಲರಿಗೂ ಬಹಳ ಸಂತೋಷವನ್ನುಂಟುಮಾಡಿದೆ. ಅವರು ನಮ್ಮ ಈ ಹೊಸ ಮೈಸೂರನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಅನೇಕ ತರದ ಯೋಜನೆಯನ್ನೂ ಮತ್ತು ಅದರ ರೀತಿ ನೀತಿಗಳನ್ನೂ ಚಾಚೂ ಬಿಡದಂತೆ ತಿಳಿಸಿದ್ದರೂ ನಮ್ಮ ಗುಲ್ಬರ್ಗಾ ಡಿವಿಜನ್ ವಿಷಯವಾಗಿ ಹೆಚ್ಚಿಗೆ ಏನೂ ಹೇಳದ್ದಕ್ಕಾಗಿ ಸ್ವಲ್ಪ ವಿಷಾದವಾಗಿದೆ. ಅಲ್ಲಿನ ಜನರು ಅಶಿಕ್ಷಿತರು ಮತ್ತು ಬಡವರು. ಆದರೂ ನಮ್ರ ಸ್ವಭಾವವುಳ್ಳವರು; ಪ್ರದೇಶವೇನೋ ದೊಡ್ಡದು. ಸರ್ವ ಧಾನ್ಯಗಳನ್ನು ಬೆಳೆಯುವಂಥಾದ್ದಿದ್ದರೂ ಉಚ್ಚತರದ ಶಿಕ್ಷಣದ ಅಡಚಣೆಯ ಮೂಲಕ ಒಕ್ಕಲಿಗರ ಪರಿಸ್ಥಿತಿಯು ಪೂರಾ ಕುಂಠಿತವಾಗಿದೆ. ಇಂಥ ಪ್ರಸಂಗದಲ್ಲಿ ಹೋದವರ್ಷ ಅತಿವೃಷ್ಟಿಯ ಮೂಲಕ ಬೆಳೆಬಾರದೆ ಬರಗಾಲ ಪರಿಸ್ಥಿತಿಯು ತಲೆದೋರಿದೆ. ಧಾನ್ಯದ ಕೊರತೆಯು ವಿಶೇಷವಾಗಿ ವಿಪರೀತಕ್ಕೀಡು ಮಾಡಿದೆ. ಇದನ್ನರಿತೇ ಆ ನಮ್ಮ ಭಾಗದಲ್ಲಿ ಶ್ರೀ ಕಮಿಷನರ್ ಸಾಹೇಬರು ತಮ್ಮ ಭಾಗದ ಜಿಲ್ಲಾ ಪ್ರಾಂತದ ಪ್ರತಿಯೊಂದು ತಾಲ್ಲೂಕಿನಲ್ಲೂ ಸಂಚರಿಸಿ ಅನೇಕತರದ ಬರಗಾಲ ಕಾಮಗಿರಿಗಳನ್ನು ಪ್ರಾರಂಭ ಮಾಡಿದ್ದಾರೆ. ಇದೂ ಅಲ್ಲದೆ ಎರಡು ಲಕ್ಷ ರೂಪಾಯಿಗಳ ತಕಾವೀ ಸಾಲವನ್ನು ಸಹ ಕೊಟ್ಟಿದ್ದಾರೆ. ಈ ತಕಾವೀ ರೂಪಾಯಿಗಳು ಆ ನಮ್ಮ ಭಾಗದಲ್ಲಿರುವ —23 ತಾಲ್ಲೂಕುಗಳಲ್ಲಿ ಹಂಚಿದರೂ ಏನೊಂದೂ ಪ್ರಯೋಜನವಾಗಲಾರದೆಂಬುದಕ್ಕೆ ಧಾನ್ಯ ರೂಪದಲ್ಲಿ ಸಹಾ ಸಹಾಯ ಮಾಡುವುದಾಗಿ ಭರವಸೆಯನ್ನಿತ್ತಿದ್ದಾರೆ. ಅಲ್ಲದೇ ಅಂಗಡಿಗಳನ್ನು ತೆಗೆದು ತಾಲೂಕಿನ ದೊಡ್ಡ ದೊಡ್ಡ ಗ್ರಾಮುಗಳಲ್ಲಿ ತೆರೆದು ಸಹಕಾರ ಪದ್ಧತಿಯಿಂದಲೂ ಪಂಚ ಕಮಿಟಿಯ ನೀತಿಯಿಂದಲೂ ಹಂಚುವುದಲ್ಲದೆ ಒಕ್ಕಲಿಗನಿಗೆ ಬೀಜ, ಗೊಬ್ಬರ ಪೂರೈಸುವುದಾಗಿ ಹೇಳಿದ್ದಾರೆ.

ಕಾರಣ ಮಾನ್ಯರು ಆದಷ್ಟು ತೀವ್ರಗತಿಯಿಂದ ಈ ಮೇಲಿನ ಕಾರ್ಯವನ್ನು ಪೂರೈಸಿ ದೀನಜನತೆಯ ಕೊರತೆಗಳನ್ನು ದೂರಮಾಡಬೇಕೆಂದು ನಮ್ರತೆಯಿಂದ ಕೇಳುತ್ತೇನೆ.

ಇನ್ನೂ ಆ ಪ್ರದೇಶದಲ್ಲಿನ ರಸ್ತೆಗಳ ವಿಷಯವಂತೂ ಹೇಳತೀರದಷ್ಟು ಹಿಂದೆ ಬಿದ್ದಿದೆ. ಒಂದೊಂದು ಪ್ರಸಂಗದಲ್ಲಿ ಕೆಲವೊಂದು ಹಳ್ಳಿಗಳಿಗೆ ಹೋಗಿ ಅಲ್ಲಿನ ಜನರ ಸ್ಥಿತಿಗತಿಗಳನ್ನು ವಿಚಾರಿಸಲು ಹೋಗಬೇಕಾದರೆ ಚಪ್ಪಡಿಯ ರಸ್ತೆಗಳು ಸಹಾ ಇಲ್ಲದಂಥ ಪರಿಸ್ಥಿತಿಯಿದೆ. ಇನ್ನು ಮಳೆಗಾಲದಲ್ಲಿಯಂತೂ ಹೇಳತೀರದಂಥ ಕಠಿಣ ಪರಿಸ್ಥಿತಿಯೊದಗುತ್ತದೆ. ಆದ

(ಶ್ರೀಮತಿ ಬಸವರಾಜೇಶ್ವರಿ.)

ಕಾರಣ ಪ್ರತಿಯೊಂದು ತಾಲೂಕಿಗೂ ತಾಲೂಕಿಗೆ ಸಂಬಂಧಪಟ್ಟ ದೊಡ್ಡ ದೊಡ್ಡ ಕೇಂದ್ರಸ್ಥಳಗಳಿಗೂ ಸರಿಯಾದ ರಸ್ತೆಗಳನ್ನು ನಿರ್ಮಿಸಬೇಕೆಂದು ನನ್ನ ಬೇಡಿಕೆ.

ತುಂಗಭದ್ರಾ ಅಣೆಕಟ್ಟಿನಿಂದ ರಾಯಿಚೂರಿನರೆಗೂ ಮೇನ್‌ರೋಡ್ ತಯಾರಿಸುವ ಯೋಜನೆಯಿದೆಯೆಂದು ತಿಳಿದುಬಂದಿದೆ. ಅದನ್ನೂ ಸಹ ಆದಷ್ಟು ಬೇಗನೆ ಕೈಗೊಳ್ಳಬೇಕೆಂದು ನನ್ನ ಮನೀಷೆ ಇದೆ.

ಮತ್ತು ಆ ನಮ್ಮ ಪ್ರದೇಶದಲ್ಲಿನ ಕ್ಷಾಮುಗಾಲದ ಮೂಲಕ ರೆವಿನ್ಯೂ ವಸೂಲಿಯನ್ನು ನಿಲ್ಲಿಸಿರುವುದರಿಂದ ಗೌಡ ಕುಲಕರ್ಣಿಯವರ ಸಂಬಳವು (ಪೋಟಗಿ) ದೊರೆತಿರುವುದಿಲ್ಲ. ಅವರವರ ಪೋಟಗಿಯನ್ನು ಕೊಡುವಂತೆ ಮಾಡಬೇಕೆಂದು ಕೇಳುತ್ತೇನೆ.

ಆ ಪ್ರದೇಶದಲ್ಲಿನ ಶಿಕ್ಷಣದ ವಿಷಯವಾಗಿ ಆಲೋಚಿಸಿದರೆ ಅಲ್ಲಿನ ಪ್ರತಿಯೊಂದು ಮಿಡಲ್ ಸ್ಕೂಲೂ 48 ಪ್ರಾಥಮಿಕ ಶಾಲೆಗಳನ್ನು ಸರತಿ ಮಾಡುತ್ತದೆ. ಕಾರಣ ಈಗ ಮಂಜೂರಿಮಾಡಿರುವದಕ್ಕಿಂತ ಹೆಚ್ಚಿಗೆ ಒಂದು ಸಾವಿರವರೆಗೂ ಸ್ಕೂಲುಗಳು ಏರ್ಪಾಡು ಆಗುವಂತೆ ಅನುಕೂಲಿಸಿದರೆ ಈಗಿನ ಹೊಸ ಮೈಸೂರಿನ ಜೊತೆಗೆ ಬರಬಹುದೆಂಬಂತೆ ತೋರುತ್ತದೆ.

ಮತ್ತು ನಮ್ಮ ಆ ಭಾಗದಲ್ಲಿ ಕೋಲಾರ ಚಿನ್ನದ ಗಣಿಯಂತೆಯೇ ಒಂದು ಚಿನ್ನದಗಣಿ ಇದೆ. ಹಟ್ಟಿ ಗೋಲ್ಡ್‌ಮೈನ್ಸ್ ಎಂಬುದು ಅನೇಕರಿಗೆ ಗೊತ್ತಿದ್ದ ವಿಷಯ. ಆದರ ನಮ್ಮ ಸರಕಾರದವರು ಇದುವರೆವಿಗೂ ಆಕಡೆ ಹೆಚ್ಚು ಗಮನ ಕೊಟ್ಟಿಲ್ಲವೆಂಬಂತೆ ತೋರುತ್ತದೆ. ಅಂಥಾ ದೊಡ್ಡ ಪ್ರಮಾಣದಲ್ಲಿ ಚಿನ್ನದಗಣಿ ಇದ್ದರೂ ಅಲ್ಲಿನ ಜನರಿಗೆ ಅದರ ಉಪಯೋಗವೇನೂ ಇಲ್ಲದಂತಾಗಿದೆ. ಆ ಕಂಪನಿಯ ಮಾಲೀಕರು ಅದನ್ನು ನಡೆಸಿಕೊಂಡು ಹೋಗುವವರು ಸರಿಯಾದ ಕೂಲಿಯನ್ನು ಕೊಡದೆ ಜನರಿಗೆ ಬಹಳ ತೊಂದರೆಗೊಳಿಸುತ್ತಿದ್ದಾರೆ.

ಕಾರಣ ದಯಾಳು ಸರಕಾರವು ಈ ಮೇಲಿನ ವಿಷಯವನ್ನು ಮನಗಂಡು ಮಾರ್ಗ ಪರಿಶೀಲಿಸಿ ಆದಷ್ಟು ತ್ವರಿತಗತಿಯಿಂದ ರಾಷ್ಟ್ರೀಕರಣ ಮಾಡಿಕೊಂಡು ತಾವೇ ಅದರ ಚಾಲಕರಾಗಿ, ಅಲ್ಲಿನ ಬಡರೈತ ಕೂಲಿಗಾರ ಜನರನ್ನು ಉದ್ಧಾರ ಮಾಡಬೇಕೆಂದು ನನ್ನ ನಮ್ರ ಸೂಚನೆ.

ಶ್ರೀಮತಿ ಲೀಲಾವತಿ ಮಾಗಡಿ ವೆಂಕಟೇಶ್ (ಶಿರಹಟ್ಟಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದಲ್ಲಿ ಮುಖ್ಯವಾಗಿ ಧಾರವಾಡ ಮತ್ತು ನಮ್ಮ ಉತ್ತರ ಕರ್ಣಾಟಕ ಜಿಲ್ಲೆಗಳಿಗೆ ಅತ್ಯವಶ್ಯಕವಾಗಿ ಬೇಕಾದ ರಸ್ತೆ, ಸಾರಿಗೆ ಸೌಕರ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಒಂದು ತೃಪ್ತಿಕರವಾದ ಯೋಜನೆಯನ್ನು ಮಾಡುತ್ತಿದ್ದೇವೆಂದು ಸರ್ಕಾರದವರು ಹೇಳಿರುವುದು ನನಗೆ ಬಹಳ ಸಂತೋಷವನ್ನುಂಟುಮಾಡಿದೆ. ಶಿಕ್ಷಣ ವಿಚಾರದಲ್ಲಿ ಮೈಸೂರು ರಾಜ್ಯದಲ್ಲಿ 400 ಹೊಸ ಶಾಲೆಗಳನ್ನು ತೆರೆಯಬೇಕೆಂದು ಏರ್ಪಡಿಸಿದ್ದಾರೆಂದು ಸೂಚಿಸಿದ್ದಾರೆ. ಈ ಬಗ್ಗೆ ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಅದೇನೆಂದರೆ, ಬೊಂಬಾಯಿ ಕರ್ಣಾಟಕದೊಳಗೆ 35 ಸ್ಕೂಲುಗಳಿದ್ದವು. ಅಲ್ಲಿ ವಿದ್ಯಾ ಇಲಾಖೆಯ ಒಂದು ಬ್ರಾಂಚ್ ಕೂಡ ಇತ್ತು. ಈಗ ನಮ್ಮ ಮೈಸೂರಿಗೆ ಬೊಂಬಾಯಿ ಕರ್ಣಾಟಕದಿಂದ ಅನೇಕ ಜಿಲ್ಲೆಗಳು ಬಂದಿವೆ. ಅಲ್ಲಿ ಬೊಂಬಾಯಿ ಚಿಲ್ಡ್ರನ್ ಆಕ್ಟ್ ಎಂಬ ಕಾಯಿದೆಯನ್ನು 1924ರಲ್ಲಿ ಮಾಡಿ, ಅದನ್ನು ನಮ್ಮ ಜಿಲ್ಲೆಗಳಾದ ಬಿಜಾಪುರ, ಬೆಳಗಾಂ, ಕಾರವಾರ ಮತ್ತು ಧಾರವಾಡ ಪ್ರಾಂತಗಳಲ್ಲಿ ಜಾರಿಗೆ ತಂದು, ಜುವಿನೈಲ್ ಕೋರ್ಟುಗಳನ್ನು ಸ್ಥಾಪನೆಮಾಡಿದರು. ಇದರ ಫಲವಾಗಿ 16 ವರ್ಷದ ಮಕ್ಕಳಲ್ಲಿ ಕ್ರಿಮಿನಲ್ ಆಟಿಟ್ಯೂಡ್ ತಿದ್ದಲು ಸಹಾಯಕವಾಗುವುದು. ಕೆಲ ಮಕ್ಕಳಿಗೆ ಇನ್‌ಸ್ಟಿಟ್ಯೂಷನಲ್ ಟ್ರೀಟ್‌ಮೆಂಟ್ ಬೇಕಾಗುತ್ತದೆ. ಅದಕ್ಕಾಗಿ ಸರ್ಟಿಫೈಡ್ ಸ್ಕೂಲುಗಳು ಅವಶ್ಯಕ. ಇಂತಹ ಶಾಲೆಗಳ ಅಭಾವ ರಿ-ಆರ್ಗನೈಜೇಷನ್ನಿನಿಂದ ಉಂಟಾಗಿದೆ. ಅದಕ್ಕಾಗಿ ಟೆಕ್ನಿಕಲ್ ಸ್ಕೂಲ್ಸ್ ಫಾರ್ ಗರ್ಲ್ಸ್ ಹಾಗೂ ಸರ್ಟಿಫೈಡ್ ಸ್ಕೂಲ್ಸ್ ಅತ್ಯವಶ್ಯಕ. ಹೊಸ ಶಾಲೆಗಳ ಯೋಜನೆಯಲ್ಲಿ ನಮ್ಮ ಭಾಗದ ಈ ಕೊರತೆಯನ್ನು ನೀಗಿಸಬೇಕಾಗಿ ನಾನು ಕೋರುತ್ತೇನೆ. ಹ್ಯಾಂಡಿಕ್ಯಾಪ್ಡ್ ಮಕ್ಕಳ ಉನ್ನತಿಯ ಹೊಣೆ ಸರಕಾರದ್ದು. ಇದನ್ನು ಲಕ್ಷಿಸಿ ಕಾರ್ಯಪ್ರವೃತ್ತರಾಗಬೇಕು.

ಮಕ್ಕಳ ನ್ಯಾಯಾಲಯ ಹಾಗೂ ಅವರಿಗೆ ಸಂಬಂಧಪಟ್ಟ ಸ್ಕೂಲುಗಳು ಜೈಲುಗಳ ಜೊತೆಗೆ ಸೇರಿಸಲ್ಪಡದೆ ಮುಂಬೈಯಲ್ಲಿ ವಿದ್ಯಾಖಾತೆಗೆ ಸಂಬಂಧ ಪಟ್ಟಿದ್ದವು ಇಲ್ಲಿಯಾದರೂ ಈ ಮಾರ್ಪಾಡು ಅಗತ್ಯ. 'ಬೊಂಬಾಯಿ ಚಿಲ್ಡ್ರನ್ ಆಕ್ಟ್' ಬ್ರಾಂಚು ಮುಂಬೈಯಲ್ಲಿ ಎಜುಕೇಷನ್ ಡಿಪಾರ್ಟ್‌ಮೆಂಟ್ ಕೈಯಲ್ಲಿತ್ತು. ಅದನ್ನು ಈಗ 'ಲೀಗಲ್ ಅಂಡ್ ಲೇಬರ್' ಹಾಗೂ ಜೈಲು ಶಾಖೆಗೆ ವರ್ಗಾಯಿಸಿರುವುದರಿಂದ ಅದರ ಉದ್ದೇಶ ಪೂರ್ಣವಾಗುವುದು ತೊಂದರೆ. ಮುಖ್ಯವಾಗಿ ಶಿಕ್ಷಣದ ಮಹತ್ವ ಇದರಲ್ಲುಂಟು. ಆದ್ದರಿಂದ ಈ ಶಾಖೆಯನ್ನು ಶಿಕ್ಷಣ ಶಾಖೆಗೆ ವರ್ಗಾಯಿಸುವುದು ಸೂಕ್ತ ಮತ್ತು ಅವಶ್ಯ.

ಇನ್ನೊಂದು ವಿಚಾರ. ನಮ್ಮ ಹೆಣ್ಣುಮಕ್ಕಳ ಸಲುವಾಗಿ reformatory schools with technical education—ಈ ಸಂಸ್ಥೆಗಳನ್ನು ವಿಶೇಷವಾಗಿ ಒದಗಿಸಿ ಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣವು ಎಲ್ಲಾ ದೃಷ್ಟಿಗಳಿಂದಲೂ ಸರಿಯಾಗಿದೆ. ಆ ಭಾಷಣದ ವಿಷಯಗಳಮೇಲೆ ನಮಗೆ ಹೆಚ್ಚಿನ ಮಮತೆ ಮತ್ತು ಆಶಾಕಾಂಕ್ಷೆಗಳಿವೆ. ತಾವು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನೊದಗಿಸಿ ಕೊಟ್ಟುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು).—ನಿಮ್ನ ಪಂಗಡ).—ಸ್ವಾಮಿ, ಮೈಸೂರು ರಾಜ್ಯದ ರಾಜ್ಯಪಾಲರು ಮೈಸೂರು ವಿಧಾನಸಭೆಯ ಮತ್ತು ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನದಲ್ಲಿ ಮಾಡಿದ ಭಾಷಣದ ವಂದನಾಪೂರ್ವಕವಾದ ನಿರ್ಣಯವನ್ನು ನಾನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ನಮ್ಮ ರಾಜ್ಯಪಾಲರು ಮಾಡಿರತಕ್ಕ ಭಾಷಣದಲ್ಲಿ ನಮ್ಮ ಮೈಸೂರು ದೇಶಕ್ಕೆ ಎಷ್ಟು ಉಪಯುಕ್ತವಾದ ಸಲಹೆಗಳನ್ನು ಹೇಳಿದ್ದಾರೋ ಅವೆಲ್ಲವನ್ನೂ ನಾನು ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತೇನೆ. ಆದರೆ ಹಿಂದುಳಿದ ಪಂಗಡದವರ ಅಭಿವೃದ್ಧಿ ವಿಚಾರದಲ್ಲಿ ಏನೇನೂ ಹೇಳಲಿಲ್ಲವಲ್ಲಾ ಎಂದು ನನಗಂತೂ ಮನಸ್ಸಿಗೆ ವ್ಯಸನವಾಯಿತು. ಅದಕ್ಕೋಸ್ಕರವೇ ನಾನು ನಿನ್ನೆಯಿಂದ ಎದ್ದೆದ್ದು ತಮ್ಮನ್ನು ಕೇಳಿದಮೇಲೆ ಏನೋ ದೈವವಶಾತ್ ಈಗ ನನಗೆ ಮಾತನಾಡಲು ಅವಕಾಶ ಸಿಕ್ಕಿತು. ಈಗ ವಿಶಾಲ ಮೈಸೂರಿನಲ್ಲಿ ಹಿಂದುಳಿದ ಪಂಗಡದವರ ಜೀವನಸ್ಥಿತಿ ಬಹಳ ಕಷ್ಟತರವಾದುದಾಗಿದೆ. ಅವರಿಗೆ ಸರಿಯಾಗಿ ವಾಸಮಾಡಲು ಮನೆಗಳಿಲ್ಲ. ಜೀವನಕ್ಕೆ ಬೇಕಾದ ಸೌಕರ್ಯಗಳಂತೂ

ಮೊದಲೇ ಇಲ್ಲ. ಈಗಾಗಲೇ ನಮ್ಮ ಸರ್ಕಾರದವರು ಎಷ್ಟೋ ಹಣವನ್ನು ಖರ್ಚುಮಾಡಿ ದೇಶದ ಜನತೆ ಗೋಸ್ಕರ ವಸತಿ ಸೌಕರ್ಯ, ಜಮೀನುಗಳ ಹಂಚಿಕೆ, ಕುಡಿಯುವ ನೀರಿನ ಭಾವಿಗಳು, ಮತ್ತೆ ವಿದ್ಯಾಭ್ಯಾಸ ಇತ್ಯಾದಿ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತಿದ್ದಾರೆ. ಆದರೆ ನಮ್ಮ ಹಿಂದುಳಿದ ಪಂಗಡದವರ ಅಭಿವೃದ್ಧಿ ವಿಚಾರದಲ್ಲಿ ಹೆಚ್ಚಿಗೆ ಆಸಕ್ತಿಯನ್ನು ನಮ್ಮ ಸರ್ಕಾರ ದವರು ತೋರಿಸುತ್ತಿಲ್ಲ. ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿರುವ ಕೆಲಸಕಾರ್ಯಗಳಿಗೆ ಈ ವರ್ಷದ ಬಡ್ಜೆಟ್ಟಿನಲ್ಲಿ ಯಾವರೀತಿ ಹಣವನ್ನೊದಗಿಸಿ ಖರ್ಚು ಮಾಡಬೇಕೆಂದಿದ್ದಾರೋ ಆದರಂತೆಯೇ ನಮ್ಮ ಹಿಂದುಳಿದ ಪಂಗಡದ ಜನಗಳ ಅಭಿವೃದ್ಧಿ ವಿಚಾರ ದಲ್ಲೂ ಹಣವನ್ನು ಹೆಚ್ಚಿಗೆ ಖರ್ಚುಮಾಡಬೇಕೆಂದು ನಾನು ಹೇಳುತ್ತೇನೆ. ಹಿಂದುಳಿದ ಪಂಗಡದವರನ್ನು ಹಿಂದೆಯೇ ಇರಿಸುತ್ತಾರೆಯೇ ವಿನಾ ಅವರನ್ನು ಮುಂದೆ ತರುವ ಏರ್ಪಾಡುಗಳನ್ನು ಹೆಚ್ಚಾಗಿ ಮಾಡಿಯೇ ಇಲ್ಲ. ಅವರ ಸಂಸಾರವೆಲ್ಲಾ ಒಂದು ಕುದುರೆಯಮೇಲೆ ಮತ್ತು ಒಂದು ಕತ್ತೆಯಮೇಲೆ. ಇಲ್ಲಿ ನೆರದಿರತಕ್ಕ ಸದಸ್ಯರಲ್ಲನೇಕರಿಗೆ ಅವರ ಕಣ್ಣಿಗೆ ಈ ವಿಷಯ ಬಿದ್ದಿರತಕ್ಕದ್ದಾಗಿದೆ. ಈ ವಿಚಾರದಬಗ್ಗೆ ನಾನು ಐದು ವರ್ಷಗಳಿಂದಲೂ ಈ ಸಭೆಯಲ್ಲಿ ಪ್ರಶ್ನೆ ಗಳನ್ನು ನಾನಾವಿಧವಾಗಿ ಕೇಳಿಕೊಂಡು ಬಂದಿದ್ದೇನೆ. ಸರ್ಕಾರದವರು ಏನೋ ಸುಮ್ಮನೆ ಒಂದು ಉತ್ತರ ವನ್ನು ಕೊಟ್ಟರೆ ಸಾಕು ಎಂದು ಉದಾಸೀನವಾಗಿ ಅವರನ್ನೆಲ್ಲಾ ಹಿಂದುಳಿದ ಪಂಗಡದಲ್ಲಿ ಸೇರಿಸಿದ್ದೇವೆ, ಅವರಿಗೂ ಕೂಡ ಸಹಾಯಮಾಡುತ್ತಿದ್ದೇವೆ, ಅವರ ಯೋಗಕ್ಷೇಮವನ್ನೂ ವಿಚಾರಿಸುತ್ತಿದ್ದೇವೆ ಎಂದು ಸುಮ್ಮನೆ ಬಾಯಿಮಾತಿನಲ್ಲಿ ಹೇಳುತ್ತಿದ್ದಾರೆಯೇ ಶಿವಾಯಿ ಕಾರ್ಯತಃ ಅಂತಹವರಿಗೆ ನಮ್ಮ ಸರ್ಕಾರ ದವರು ಸಹಾಯಮಾಡುತ್ತಿರುವುದು ನಮ್ಮ ಕಣ್ಣಿದು ರಿಗೆ ಕಾಣಬರುತ್ತಾ ಇಲ್ಲ. ಇನ್ನೊಂದು ಸಾರಿ ಈ ವರ್ಷವೂ ಅವರು ಯಾರುಯಾರು ಎಂಬುದನ್ನು ತಿಳಿ ಸುತ್ತೇನೆ. ಅವರು ಬುಡುಬುಡಿಕೆಯವರು, ಸುಡು ಗಾಡುಸಿದ್ದರು, ಗೋಸಾಯಿಗಳು, ಹಕ್ಕಿಪಿಕಾರಿಗಳು, ಮಾರಿ ಪೂಜಾರಿಗಳು, ಹಾವಾಡಿಗರು ಮತ್ತು ದೊಂಬಿ ದಾಸರು—ಇತ್ಯಾದಿ ಪಂಗಡಗಳವರು. ಇವರ ಜೀವನ ಹೇಗಿದೆ, ಅಂದರೆ ಒಂದು ಕತ್ತೆ ಅಥವಾ ಒಂದು ಕುದುರೆಯಮೇಲೆ ಒಂದು ಕುಕ್ಕೆಯಲ್ಲಿ ತನ್ನ ಸಂಸಾರ ವನ್ನೆಲ್ಲಾ ಇಟ್ಟುಕೊಂಡು ಎಲ್ಲಿಯೋ ಒಂದು ಜಗಲಿಯ ಮೇಲೆ ಬಿದ್ದುಕೊಂಡು ಹೊಟ್ಟೆ ಹೊರೆದುಕೊಳ್ಳುವುದು. ಇಂತಹ ಗುಂಪಿನವರು ನಮ್ಮ ದೇಶದಲ್ಲಿ ಲಕ್ಷೋಪಲಕ್ಷ ವಾಗಿ ಭಿಕಾರಿಗಳಾಗಿ ತಿರುಗಾಡುತ್ತಿದ್ದಾರೆ. ಅವರ ಜೀವನದ ಕಷ್ಟವಂತೂ ಹೇಳತೀರದು. ಈಗಾಗಲೇ ಸುಮಾರು 74 ಸಾವಿರ ಎಕರೆ ಜಮೀ ನನ್ನು ಅಮೃತ ಮಹಲ್ ಕಾವಲಿನಲ್ಲಿ ಸರ್ಕಾರದವರು ಬಡವರಿಗೆ ಹಂಚಿಕೆಮಾಡುವ ಒಂದು ಸ್ಕೀಮನ್ನು ಹಾಕಿಕೊಂಡಿದ್ದಾರೆ. ಅದಕ್ಕಾಗಿ ನಮ್ಮ ಸರ್ಕಾರ ದವರು ಒಂದು ಕಮಿಟಿಯನ್ನು ಮಾಡಿ ನಾನು ಮೇಲೆ ಹೇಳಿದ ಗುಂಪಿನ ಜನರು ನಮ್ಮ ದೇಶದ ಯಾವ ಯಾವ ಮೂಲೆಗಳಲ್ಲಿ ನೆಲಸಿದ್ದಾರೆ ಎಂಬುದನ್ನು ಲೆಖ್ಖಾಚಾರಮಾಡಿ ಈಗಿರತಕ್ಕ ಜಮೀನು ಹಂಚಿಕೆಯ ಪಟ್ಟಿಯಲ್ಲಿ ಅವರನ್ನು ಸೇರಿಸಿ ಕಾಲೋನಿಗಳನ್ನು ಏರ್ಪಾಡುಮಾಡಬೇಕು. ಅವರಲ್ಲಿ ಬಹಳ ಬುದ್ಧಿ ವಂತರು, ಮತ್ತು ಕಷ್ಟಜೀವಿಗಳು ಇದ್ದಾರೆ. ಅವರ ಜೀವನಸ್ಥಿತಿಯನ್ನು ಉನ್ನತಮಟ್ಟಕ್ಕೆ ತಂದು ಮುಂದು ವರಿಸುವುದೂ ಸರಕಾರದ ಜವಾಬ್ದಾರಿಯಾಗಿದೆ. ಅವರೂ ಸಹ ಜಮೀನುಗಳನ್ನು ಪಡೆದುಕೊಳ್ಳಲು ಸರ್ಕಾರದವರು ತಕ್ಕ ಹಣ ಸಹಾಯವನ್ನು ಒದಗಿಸ ಬೇಕು. ಅನ್ನವಿಲ್ಲದೆ, ವಾಸಕ್ಕೆ ಸರಿಯಾದ ಮನೆಗ ಳಿಲ್ಲದೆ, ಮತ್ತು ಇತರ ಪಂಗಡಗಳಿಗಿಂತಲೂ ಬಹಳ ಹೀನಸ್ಥಿತಿಯಲ್ಲಿರುವ ಮಾನವರಾಶಿಗೆ ಸೇರಿದ ಈ ಜನರಿಗೆ ಇತರರಿಗೆ ಒದಗಿಸುವ ಎಲ್ಲಾ ಸೌಕರ್ಯಗಳನ್ನೂ ಖಂಡಿತವಾಗಿ ನಮ್ಮ ಸರ್ಕಾರದವರು ಈ ವರ್ಷದಲ್ಲಿ ಒದಗಿಸಬೇಕೆಂದು ನಾನು ಹೇಳಬಯಸುತ್ತೇನೆ. ಈ ವಿಷಯದಬಗ್ಗೆ ಮುಂದೆ ಯೋಚನೆಮಾಡೋಣ, ಈಗ ಬೇಡ ಎನ್ನುವ ಉದಾಸೀನ ಭಾವನೆಯನ್ನು ನಮ್ಮ ಸರ್ಕಾರದವರು ಖಂಡಿತವಾಗಿ ಬಿಟ್ಟು, ಇದನ್ನು ತಮ್ಮ ಕೆಲಸಕಾರ್ಯಗಳಲ್ಲಿ ಒಂದು ಪವಿತ್ರ ಕಾರ್ಯವೆಂದು ಪ್ರಥಮವಾಗಿ ಭಾವಿಸುತ್ತಾರೆಂದು ನಾನು ನಂಬಿಕೆ ಯುಳ್ಳವನಾಗಿದ್ದೇನೆ. ನಮ್ಮ ಸರ್ಕಾರದವರು ವರ್ಷಕ್ಕೊಮ್ಮೆ ಲಕ್ಷಾಂತರ ರೂಪಾಯಿಗಳನ್ನು ಕೋಟ್ಯಾಂತರ ರೂಪಾಯಿಗಳನ್ನು ಅಮಿಲಿಯೋರೇಷ್ ಫಂಡ್ಸಿಗಾಗಿ ಕೊಡುತ್ತಿದ್ದಾರೆ. ಆಗ ಚುನಾವಣೆಯ ಕಾಲವಾದ್ದರಿಂದ ಹೆಚ್ಚು ಹಣವನ್ನು ಈ ಫಂಡಿಗೆ ಕೊಟ್ಟಿದ್ದರು. ಆದರೂ ಜನಗಳಿಗೆ ಸರಿಯಾದ ರೀತಿ ಯಲ್ಲಿ ಹಂಚಿಕೆಯಾಗಿಲ್ಲ. ಅನೇಕರಿಗೆ ಸಕಾಲದಲ್ಲಿ ಮನೆಕಟ್ಟಿಕೊಳ್ಳಲು ಹೆಂಚುಗಳು ಸಿಕ್ಕದೆ ತೊಂದರೆಯಾ ಗಿರುವುದು, ಹಣ ಖರ್ಚುಮಾಡದೆ ಲ್ಯಾಪ್ಸಾಗಿ ಹಿಂದಕ್ಕೆ ವಾಪಸ್ಸಾಗಿರುವುದು, ಸರ್ಕಾರಕ್ಕೆ ಗೊತ್ತಿದೆ. ಅದ ರಲ್ಲೂ ಹಾಸನ ಡಿಸ್ಟ್ರಿಕ್ಟಿನಲ್ಲಿರುವ ನಿಮ್ನ ವರ್ಗದವರಿಗೆ ಎಂಟು ಹತ್ತು ವರ್ಷಗಳಿಂದಲೂ ಮನೆಕಟ್ಟಿಕೊಳ್ಳಲು ಸಾಮಾನುಗಳು ಸಕಾಲಕ್ಕೆ ದೊರೆಯದೆ ಹಣ ಲ್ಯಾಪ್ಸ್ ಆಗಿರುವುದು ಬಹಳ ಶೋಚನೀಯವಾಗಿದೆ. ಆದ್ದರಿಂದ ಈ ವರ್ಷದ ಬಡ್ಜೆಟ್ಟಿನಲ್ಲಾದರೂ ಈ ಅಮಿಲಿಯೋರೇಷ್ ಫಂಡಿಗೆ ಹೆಚ್ಚು ಹಣವನ್ನು ಒದಗಿಸಿದರೂ, ಆ ಹಣವನ್ನು ಸಕಾಲದಲ್ಲಿ ಹಿಂದುಳಿದ ಪಂಗಡದವರೆಲ್ಲರಿಗೂ ಅನುಕೂಲವಾಗುವ ಹಾಗೆ ಖರ್ಚು ಮಾಡಲು ಸರ್ಕಾರ ಅದಕ್ಕೆ ತಕ್ಕ ಉಪಯುಕ್ತವಾದ ಸಲಹೆಗಳನ್ನು ಕೊಡಲು ಏರ್ಪಾಡುಮಾಡಬೇಕೆಂದು ನಾನು ಹೇಳುತ್ತೇನೆ. ಸ್ವಾಮಿ, ನಮ್ಮ ಸರ್ಕಾರದವರು ತಾಲ್ಲೂಕಿಗೆ ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರನ್ನು ನೇಮಿ ಸಿದ್ದಾರೆ. ಅವರಿಗೆ ವೇಳೆಗೆ ಸರಿಯಾಗಿ ಸಂಬಳ ದೊರೆಯುವದಿಲ್ಲ. ಅವರಿಗೆ ಎಲ್ಲ ಸಹಾಯವನ್ನೂ ಒದಗಿಸಿಕೊಟ್ಟು ನೌಕರಿ ಖಾಯಂ ಮಾಡಿ ಸರ್ವಿಸ್ ರೂಲ್ಸ್ ಪ್ರಕಾರ ಏನೇನು ಸೌಲಭ್ಯಗಳು ಇವೆಯೋ ಅವುಗಳನ್ನೆಲ್ಲಾ ಕಲ್ಪಿಸಿಕೊಡಬೇಕೆಂದು ಸೂಚಿ ಸುತ್ತೇನೆ.

ಸ್ವಾಮಿ, ಹಳ್ಳಿಗಾಡು ಜನರಿಗೆ ಕುಡಿಯುವ ನೀರಿನ ಸೌಕರ್ಯವು ಇಲ್ಲದೇ ಇರುವದರಿಂದ ಜನರಿಗೆ ಆಗು ತ್ತಿರುವ ಕಷ್ಟವು ಬಹಳವಾಗಿದೆ. ಕೋಲಾರ ಡಿಸ್ಟ್ರಿಕ್ಟು ಮತ್ತು ಮಲೆನಾಡಿನ ಭಾಗದಲ್ಲಿ ಮಳೆಯು ಹೆಚ್ಚಾಗಿ ಸುರಿಯುತ್ತಿದ್ದರೂ ಕುಡಿಯುವ ನೀರಿನ ಅಭಾವದಿಂದ ಬಹಳ ಕಷ್ಟವಾಗುತ್ತಿದೆ. ಬೇಸಿಗೆಯಕಾಲದಲ್ಲಂತೂ ಜನರು ಕಷ್ಟಪಟ್ಟು ಒದ್ದಾಡುತ್ತಾರೆ. ಮಲೆನಾಡು ಪ್ರದೇಶದಲ್ಲಿ ಗ್ರಾಮಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಲು ಬಡ್ಜೆಟ್‌ನಲ್ಲಿ ಹೆಚ್ಚು ಹಣವನ್ನು ಒದಗಿಸಬೇಕು. ಪ್ರತಿಯೊಂದು ಹಳ್ಳಿಗೆ ಒಂದು ಕುಡಿಯುವ ನೀರಿನ ಭಾವಿಯನ್ನು ಒದಗಿಸಿಕೊಡಬೇಕು.

ಚಿಕ್ಕಮಗಳೂರು, ಹಾಸನ, ಶಿವಮೊಗ್ಗಾ ಜಿಲ್ಲೆಗಳ ಮುಕ್ಕಾಲು ಭಾಗ ಮಲೆನಾಡು ಪ್ರದೇಶವಾಗಿದೆ. ಇಲ್ಲಿ ರಸ್ತೆಗಳು ಸರಿಯಾಗಿಲ್ಲ. ರಸ್ತೆಗಳು ಚನ್ನಾಗಿದ್ದರೆ ಹಳ್ಳಿಗಳಿಗೆ ಹೋಗಿಬರಲು ಅನುಕೂಲವಾಗುತ್ತದೆ. ಈ ಪ್ರದೇಶದಲ್ಲಿ ರಸ್ತೆಗಳು ಸರಿಯಾಗಿ ಇಲ್ಲದೇ ಇರುವ ಕಾರಣ ಮಂತ್ರಿಗಳಾಗಲಿ ಸರ್ಕಾರಿ ಅಧಿಕಾರಿಗಳಾಗಲಿ

(ಶ್ರೀ ಎಚ್. ಕೆ. ಸಿದ್ದಯ್ಯ.)

ಈ ಭಾಗದಲ್ಲಿ ಬರುವುದಿಲ್ಲ ಮತ್ತು ಅಲ್ಲಿಯ ಜನರ ಕಷ್ಟನಷ್ಟಗಳು ಅವರಿಗೆ ಗೊತ್ತಾಗುವುದಿಲ್ಲ. ಆದಕಾರಣ ಒಂದು ಸಮಿತಿಯನ್ನು ನೇಮಿಸಿ ಈ ಮಲೆನಾಡು ಪ್ರದೇಶದಲ್ಲಿಯ ರಸ್ತೆಗಳ ದುರಸ್ತಿಮಾಡುವ ವಿಷಯವಾಗಿ ವಿಚಾರಮಾಡಿ ಸೂಕ್ತಕ್ರಮವನ್ನು ತೆಗೆದುಕೊಳ್ಳಲು ವರದಿಯನ್ನು ತರಿಸಿಕೊಳ್ಳಬೇಕು. ಈ ಕೆಲಸಕ್ಕಾಗಿ ಬಡ್ಜೆಟ್ಟದಲ್ಲಿ ಹೆಚ್ಚು ಹಣವನ್ನು ಬದಗಿಸಬೇಕು.

ಹಾಸನ ಜಿಲ್ಲೆಯಲ್ಲಿ ನದಿಗಳು ಹರಿಯುತ್ತವೆ. ಭೂಮಿ ಬೇಕಾದಷ್ಟು ಇದೆ. ಆದರೆ ಯಾವ ಯೋಜನೆಯೂ ಕಾರ್ಯಗತವಾಗಿಲ್ಲ. ಆಲೂರ ತಾಲ್ಲೂಕು ಪಾಟಹೊಳೆ ಅಣಕಟ್ಟಿನ ಯೋಜನೆಯ ಎಸ್ಟಿಮೇಟು ತಯಾರಾಗಿ ಐದು ವರ್ಷವಾಯಿತು. ಆದರೆ ಕೆಲಸ ಪ್ರಾರಂಭವಾಗಿಲ್ಲ. ಹಾಸನ ಜಿಲ್ಲೆಯ ನದಿ ಯೋಜನೆಗಳ ಬಗ್ಗೆ ಒಂದು ಕಮಿಟಿಯನ್ನು ನೇಮಿಸಿ ಇದರಬಗ್ಗೆ ಪರಿಶೀಲನೆಮಾಡಬೇಕು.

ಅನೇಕ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡವಿಲ್ಲದೇ ಇರುವದರಿಂದ ದೇವಸ್ಥಾನಗಳಲ್ಲಿ ಶಾಲೆಗಳನ್ನು ಇಟ್ಟಿದ್ದಾರೆ. ಹರಿಜನ ಮಕ್ಕಳಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಪ್ರೈಮರಿ ಸ್ಕೂಲು ಸೌಕರ್ಯವನ್ನು ಹಳ್ಳಿಗಳಿಗೆ ಒದಗಿಸಿಕೊಡುವುದಕ್ಕೆ ಹೆಚ್ಚು ಹಣ ಖರ್ಚುಮಾಡಿ ಪ್ರತಿಯೊಂದು ಹಳ್ಳಿಗೆ ಒಂದು ಸ್ಕೂಲ್ ಇರುವಂತೆ ಮಾಡಬೇಕೆಂದು ಸೂಚಿಸುತ್ತೇನೆ.

ಮದ್ಯಪಾನ ನಿರೋಧವನ್ನು ಸಂಪೂರ್ಣವಾಗಿ ಜಾರಿಯಲ್ಲಿ ತರಬೇಕು. ಮದ್ಯಪಾನ ನಿರೋಧದಿಂದ ಸರ್ಕಾರಕ್ಕೆ ಎಷ್ಟೇ ನಷ್ಟವಾದರೂ ಸಹ ಜಾರಿಯಲ್ಲಿ ತರುವುದು ಒಳ್ಳೆಯದು ಎಂದು ಒತ್ತಾಯಪೂರ್ವಕವಾಗಿ ಸಲಹೆಮಾಡುತ್ತೇನೆ. ಸಭಾಪತಿಗಳು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೋಸ್ಕರ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

**Mr. SPEAKER.**—I am prepared to sit till 12 NOON today. But I am not going to give chance at the time of Budget discussion to those persons who have taken part now.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮಿ, ಬಡ್ಜೆಟ್ ಚರ್ಚೆ ನಡೆದ ಕಾಲದಲ್ಲಿ ನಮಗೆ ಮಾತನಾಡಲು ಅವಕಾಶ ದೊರೆಯದೆ ಇದ್ದರೆ ನಾವು ಆಗ್ಗೆ ಯಾಕೆ ಬರಬೇಕು ?

**Mr. SPEAKER.**—If all the 208 members insist, it will be impossible.

**Sri C. J. MUCKKANNAPPA** (Gubbi).—Is it not in the interest of the State that you have to give us time to speak? (*Interruptions*)

**Mr. SPEAKER.**—Hon'ble Member is not fair. You must realise what an amount of time it would take.

**Sri C. J. MUCKKANNAPPA.**—Is not the Speaker at least expected to know the feelings of the Members?

**Mr. SPEAKER.**—The feelings of the members are known to the Chair much better than anybody else. But, it is not fair for the Hon'ble Member to argue with the chair like that. I am also after all a human being and I must have some rest. Does the Hon'ble Member know that I am going without rest for the last two days?

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಮಾನ್ಯ ಸಭಾಪತಿಗಳೇ, ತಾವು ನನಗೆ ಈಗ ಮಾತನಾಡಲಿಕ್ಕೆ ಕೊಂಚ ಅವಧಿಯನ್ನು ಕೊಟ್ಟಿರುವುದಕ್ಕೆ ತಮ್ಮನ್ನು ಮೊದಲು ನಾನು ವಂದಿಸುತ್ತೇನೆ. ಪ್ರಜಾಪ್ರಭುತ್ವದ ಸಂಪ್ರದಾಯಕ್ಕೆ ಅನುಸಾರವಾಗಿ ಗವರ್ನರರಾಗಲಿ ಅಥವಾ ರಾಜ್ಯಪಾಲರಾಗಲಿ ಭಾಷಣಮಾಡುತ್ತಾರೆಂಬುದು ನಿಜ. ನಮ್ಮ ರಾಜ್ಯಪಾಲರವರಲ್ಲಿ ನಮಗೆಲ್ಲಾ ಪೂರ್ಣ ನಂಬಿಕೆ, ವಿಶ್ವಾಸ ಇದೆ. ಆದರೆ ಅವರು ಮಾಡಿದ ಭಾಷಣದಲ್ಲಿ ಅಷ್ಟು ನಂಬಿಕೆ ನಮಗಿಲ್ಲ. ರಾಜ್ಯಪಾಲರವರು ತಮ್ಮ ಸರಕಾರವನ್ನು ಯಾವರೀತಿಯಾಗಿಯೂ ಕಂಟ್ರೋಲ್‌ಮಾಡುತ್ತಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಸರಕಾರವನ್ನು ವೃಥಾ ಟೀಕಿಸಬೇಕೆಂಬುದು ನಮ್ಮ ಉದ್ದೇಶವಲ್ಲ. ಸರಕಾರದವರೇ ಈ ವಿಚಾರವನ್ನು ತಿಳಿದುಕೊಂಡು ಯೋಚನೆಮಾಡಿದರೆ ಅಗ ಅವರಿಗೂ ಒಳ್ಳೆಯದು ನಮಗೂ ಒಳ್ಳೆಯದು. ಈಗಿನ ಆಡಳಿತದ ಕಾಲದಲ್ಲಿ ರಾಜ್ಯಪಾಲರು ಒಂದು ಕೈಗೊಂಬೆಯಾಗಿದ್ದಾರೆ. ಇದು ಹೇಗೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಚುನಾವಣೆಗಳು ನಡೆಯುವದಕ್ಕೆ ಮುಂಚೆ ಶ್ರೀರಂಗಪಟ್ಟಣ ತಾಲ್ಲೂಕು ಒಂದು ಹಳ್ಳಿಯಲ್ಲಿ ಮಿಡಲ್ ಸ್ಕೂಲ್ ಪ್ರಾರಂಭೋತ್ಸವಕ್ಕೂ ಮತ್ತು ಹೈಸ್ಕೂಲ್ ಕಟ್ಟಡದ ಮತ್ತು ವಿದ್ಯಾರ್ಥಿನಿಲಯದ ಅಡಿಗಲ್ಲನ್ನು ಕುಡಿಸುವುದಕ್ಕೂ ಬರುವುದಾಗಿ ರಾಜ್ಯಪಾಲರವರು ಒಪ್ಪಿಕೊಂಡಿದ್ದರು. ಆ ರೀತಿಯಾಗಿ ಆಮಂತ್ರಣ ಪತ್ರಿಕೆಗಳನ್ನು ಸಹ ಮುದ್ರಿಸಿ ಎಲ್ಲರಿಗೂ ಕಳಿಸಿಕೊಡಲಾಗಿತ್ತು. ಆದರೆ ರಾಜ್ಯಪಾಲರವರು ಅನಂತರ ತಮಗೆ ಬರುವದಕ್ಕೆ ಆಗುವುದಿಲ್ಲವೆಂದು ತಿಳಿಸಿದರು. ಆ ರೀತಿ ರಾಜ್ಯಪಾಲರವರು ತಮಗೆ ಬರುವುದಕ್ಕೆ ಆಗುವುದಿಲ್ಲವೆಂದು ಹೇಳಬೇಕಾದರೆ, ಇದರ ಹಿಂದೆ ನಮ್ಮ ಸರ್ಕಾರದ ಕೈವಾಡವೇನಾದರೂ ಇದ್ದೇಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಕಾಂಗ್ರೆಸ್ಸಿನವರಿಗೆ ಚುನಾವಣೆಯಲ್ಲಿ ತೊಂದರೆಯಾಗಬಹುದೆಂದು ಹೀಗೆ ಮಾಡಿದ್ದಾರೆ. ಆದರೆ ರಾಜ್ಯಪಾಲರಿಗೆ ಈ ರೀತಿ ಮಾಡಿ ತೊಂದರೆ ಮಾಡಬಾರದು.

3-30 P.M.

ಎರಡನೆಯದು ನಮ್ಮ ಮೈಸೂರು ವಿಲೇಜು ಪಂಚಾಯಿತಿ ವಿಷಯದಲ್ಲಿ ಇಡೀ ಇಂಡಿಯಾದಲ್ಲಿ ಅಗ್ರಸ್ಥಾನಹೊಂದಿತ್ತು, ಇತರ ದೇಶಗಳು ನಮ್ಮ ದೇಶದಿಂದ ಕಾಪಿಮಾಡಬೇಕಾಗಿತ್ತು. ಹಿಂದೆ ಬೇಜವಾಬ್ದಾರಿ ಸರ್ಕಾರವಿದೆ, ಸರಿಯಾಗಿ ಕೆಲಸಮಾಡುತ್ತಿಲ್ಲ ಎಂದು ಟೀಕೆಮಾಡುತ್ತಿದ್ದ ಕಾಂಗ್ರೆಸ್ಸಿನವರು ಈಗ ಗ್ರಾಮ ಪಂಚಾಯಿತಿಗಳ ಆಡಳಿತ ವಿಷಯದಲ್ಲಿ ಕೇವಲ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಇದನ್ನು ನಾನು ಸಂಕಟದಿಂದ ಹೇಳುತ್ತಿದ್ದೇನೆ. ನಾನು ಹಳ್ಳಿಯಲ್ಲೇ ಹುಟ್ಟಿಬೆಳೆದವನು, ಟೀಕೆಮಾಡುವುದಕ್ಕಾಗಿ ಇದನ್ನು ಹೇಳುತ್ತಿಲ್ಲ. ಪಂಚಾಯಿತಿ ಆಕ್ಟ್ ಮಾಡಿದ್ದಾರೆ, ರೂಲ್ಸ್‌ಮಾಡಿಲ್ಲ. ಪಂಚಾಯಿತಿ ಆಕ್ಟಿದ್ದರೂ ಥೇರ್ಮನ್ 200 ರೂಪಾಯಿ ಡ್ರಾ ಮಾಡಬಹುದೆಂದಿದ್ದರೂ ಹೆಚ್ಚು ಖರ್ಚಾಗುತ್ತದೆ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್‌ಬೇಕು ಎಂದು ಅಮಲ್ದಾರರು ಹೇಳುತ್ತಾರೆ. ಹೀಗೆ ಪಂಚಾಯಿತಿ ಆಕ್ಟಿದ್ದರೂ

ಪುಸ್ತಕದ ಬದನೇಕಾಯಿಯಂತಾಗಿ ಸರಿಯಾಗಿ ಕೆಲಸ ನಡೆಯುತ್ತಿಲ್ಲ. ನಾನೂ ಕೂಡ ಅಮಲ್ದಾರನಾಗಿಯೂ ಅಸಿಸ್ಟೆಂಟ್ ಕಮೀಷನರಾಗಿಯೂ ಕೆಲಸಮಾಡಿದ್ದೇನೆ. ಇದರ ಅನುಭವ ನನಗಿದೆ. ಹಿಂದೆ ಒಂದುತಿಂಗಳ ಮುಂಚೆ ಟೂರ್ ಪ್ರೋಗ್ರಾಂ ಕಳಿಸಿ ಹಿಂದಿದ್ದ ದಿವಾನರು, ಕೌನ್ಸಿಲರುಗಳು ಪ್ರವಾಸಮಾಡುತ್ತಿದ್ದರು. ಹೋದಾಗ ಯಾವ ಕೆಲಸ ನಡೆದಿದೆ, ಯಾವುದು ನಡೆದಿಲ್ಲ, ಆಗಬೇಕಾದ ಕೆಲಸವೇನು ಎಂದು ಎಲ್ಲವನ್ನೂ ವಿಚಾರಮಾಡಿ ತಿಳಿದುಕೊಂಡು ಸೂಕ್ತಕ್ರಮ ಕೈಗೊಳ್ಳುತ್ತಿದ್ದರು. ಹಿಂದೆ ದಿವಾನರು, ಕೌನ್ಸಿಲರುಗಳ ಪ್ರವಾಸ ಎಂದರೆ ಅಧಿಕಾರಿಗಳ ಎದೆ ನಡುಗುತ್ತಿತ್ತು, ಭಯವಿತ್ತು. ಈಗ ಭಯವಿಲ್ಲ, ಆಫೀಸರ್ ಅಟೆಂಡೆನ್ಸ್ ಇದ್ದರೆ ಸಾಕು. ಹಿಂದೆ ದಿವಾನರು, ಕೌನ್ಸಿಲರು ತನಿಖೆ ಮಾಡುತ್ತಿದ್ದರು, ಈಗ ಏನೂ ಇಲ್ಲ. ಯಾವ ಆಫೀಸಿನಲ್ಲೂ ತನಿಖೆಯಿಲ್ಲ, 15 ವರ್ಷಗಳಿಂದ ಗ್ರಾಮ ಪಂಚಾಯಿತಿ ಲೆಕ್ಕಗಳ ಆಡಿಟ್ ಆಗಿಲ್ಲ, ವೃಥಾ ಪಂಚಾಯಿತಿ ಹಣ ಹಾಳಾಗುತ್ತಿದೆ, ಆಡಳಿತ ಹೊಲಸಾಗಿದೆ. ಈಗಲಾದರೂ ದಯವಿಟ್ಟು ಪಂಚಾಯಿತಿ ರೂಲ್ಸ್ ಮಾಡಲಿ. ಈಗ ಕೋರ್ಟುಗಳಲ್ಲಿ ಅನೇಕ ಹಣ ದುರುಪಯೋಗವಾಗಿರುವ ಕೇಸುಗಳು ನಡೆಯುತ್ತಿವೆ. ಇಡೀ ದೇಶದಲ್ಲಿ ಆ ರೀತಿ ನಡೆಯುತ್ತಿದೆ. ಹತ್ತು ವರ್ಷಗಳಿಂದ ಈ ಸರ್ಕಾರ ಈ ಕಡೆ ಗಮನಕೊಟ್ಟಿಲ್ಲ. ಇದನ್ನು ಕ್ರಮಪಡಿಸಬೇಕು.

ಭಿಕ್ಷುಕರ ವಿಚಾರ ಅನೇಕರು ಹೇಳಿದರು. ಅವರಲ್ಲಿ beggars in general and beggars in particular ಎಂದು ಎರಡು ವಿಧವಾದ ಭಿಕ್ಷುಕರಿದ್ದಾರೆ; ರೈಲ್ವೆ ಬೆಗ್ಗರ್ಸ್ ಒಂದು ತರಹ, ಬೆಗ್ಗರ್ಸ್ ಕಾಲೋನಿ ಏರ್ಪಾಡಾಗಿದ್ದರೂ ಅದರಿಂದ ಸಾಕಷ್ಟು ಪ್ರಯೋಜನವಾಗಿಲ್ಲ. ಅನೇಕ ಅವ್ಯವಸ್ಥೆಗಳಿವೆ. ಸರ್ಕಾರದವರು ಕೂಡಲೆ ಈ ಕಡೆ ಗಮನಕೊಟ್ಟು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸಂಕಟದಿಂದ ಹೇಳುತ್ತಿದ್ದೇನೆ.

ಇನ್ನೊಂದು ವಿಚಾರ, ಮಾನ್ಯ ಮಂತ್ರಿಗಳು ಯಾವುದಾದರೂ ಒಂದು ದೇವಸ್ಥಾನ, ಸ್ಕೂಲು ಅಥವಾ ಕಟ್ಟಡದ ಅಸ್ತಿಭಾರ ಶಿಲೆ ಹಾಕುವುದಕ್ಕೆ ಇಂಥ ಅಲ್ಪ ಕೆಲಸಗಳಿಗಾಗಿ ಪ್ರವಾಸಮಾಡುತ್ತಿದ್ದಾರೆ. ಇದರಿಂದ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಈ ದಿನ ಮುಖ್ಯ ಮಂತ್ರಿಗಳು ಒಂದು ಸರ್ಕ್ಯುಲರ್ ಹೊರಡಿಸಿ ಜಿಲ್ಲಾಧಿಕಾರಿಗಳನ್ನು ವಿಚಾರಮಾಡದೆ ಪ್ರವಾಸ ಹೋಗಬಾರದೆಂದು ಸೂಚಿಸಿದ್ದಾರೆಂದು ತಿಳಿಯಿತು. ಅದಕ್ಕಾಗಿ ವಂದಿಸುತ್ತೇನೆ. ಹಾಗಿಲ್ಲದೆ ಏಕ್‌ದಂ ಟೂರ್ ಹೋದರೆ ಕಷ್ಟ.

ಇನ್ನು ಪಟೇಲ ಶ್ಯಾನುಭೋಗರ ಕಷ್ಟವನ್ನು ಗಮನಕ್ಕೆ ತರಬೇಕಾಗಿದೆ. ಜಮಾಬಂದಿ ಕಾಲದಲ್ಲಿ ಆಫೀಸರ ಖರ್ಚು ವೆಚ್ಚವನ್ನು ಪಟೇಲ ಶ್ಯಾನುಭೋಗರೇ ಕೊಡಬೇಕು. ಹೀಗೆ ತಮ್ಮ ಕೈಯಿಂದ ಅವರು ಬರುವ ಪೋಟಿಗೆಯಲ್ಲಿ ಕೊಟ್ಟು ತಾಪತ್ರಯ ಪಡಬೇಕಾಗಿದೆ. ಇದು ಸರ್ಕಾರಕ್ಕೆ ಗೊತ್ತಿಲ್ಲ, ಈಗಲೂ ಕೂಡ ಹೀಗೆಯೇ ನಡೆಯುತ್ತಿದೆ. ಇದಕ್ಕೆ ಅವಕಾಶ ಕೊಡಬಾರದು.

ಇನ್ನೊಂದು ಪಾನನಿರೋಧದ ವಿಚಾರ. ಪಾನನಿರೋಧವು ಜಾಗ್ರತೆ ಯಶಸ್ವಿಯಾಗಿ ಜಾರಿಗೆ ಬರಬೇಕು. ಬಡಪಾಯಿ ಯಾರಾದರೂ ಕುಡಿದರೆ 50 ರೂಪಾಯಿ ಜುಲ್ಮಾನೆ ಹಾಕುತ್ತಾರೆ, ಅನುಕೂಲಸ್ತರು ಕುಡಿದರೆ ಪೋಲೀಸಿನವರು ಅವರನ್ನು ಮಾತನಾಡಿಸುವುದಿಲ್ಲ. ಈ ಸಂಬಂಧದಲ್ಲಿರುವ ಲೋಪದೋಷಗಳನ್ನು ಗೃಹ ಮಂತ್ರಿಗಳು ಸರಿಪಡಿಸಬೇಕು.

ಈಗ ಬ್ರಾತಲ್ ಆಕ್ಟ್ ಜಾರಿಯಲ್ಲಿದೆ, ಆದರೆ ಅದು ಸರಿಯಾಗಿ ಅನ್ವಯವಾಗುತ್ತಿಲ್ಲ. ಅಣ್ಣತಂಗಿ ಒಂದು ಕಡೆ ಕುಳಿತಿದ್ದರೆ ಪೋಲೀಸಿನವರು ಅವರನ್ನು ಹಿಡಿದುಕೊಂಡು ಹೋಗಿದ್ದಾರೆ, ಹೀಗೆ ಮನಸ್ಸಿಗೆ ಬಂದಹಾಗೆ ಮಾಡಿದರೆ ಬಡವರ ಗತಿಯೇನು ? ಗೃಹ ಮಂತ್ರಿಗಳಿಗೆ ಇದನ್ನು ಆಕ್ರೋಶದಿಂದ ಹೇಳುತ್ತಿಲ್ಲ. ಈ ರೀತಿ ನಡೆಯುತ್ತಿರುವುದನ್ನು ಗಮನಕ್ಕೆ ತಂದು ಸರಿಪಡಿಸಬೇಕೆಂಬ ಉದ್ದೇಶದಿಂದ ವಿಚಾರ ಹೇಳುತ್ತಿದ್ದೇನೆ. ಪಂಚಾಯಿತಿ ಆಕ್ಟ್, ಬ್ರಾತಲ್ ಆಕ್ಟ್ ಹೀಗೆ ಎಲ್ಲವೂ ಹೀನಸ್ಥಿತಿಯಲ್ಲಿವೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹೀಗಾಗಿದೆ.

ಲಂಚದ ವಿಚಾರ ಕೆಲವರು ಹೇಳಿದರು, ಅದು ನಿಜವಿರಬಹುದು. ಆದರೆ ಅದಕ್ಕೆ ಜವಾಬ್ದಾರರು ಯಾರು ? ಸರ್ಕಾರದವರೇ. ಬಿ.ಎ. ಪಾಸುಮಾಡಿ ಗುಮಾಸ್ತೆಯಾಗುವವರೆಲ್ಲರೂ ಐ.ಎ.ಎಸ್. ಅಧಿಕಾರಿಗಳಾಗುವುದಿಲ್ಲ. ದೊಡ್ಡ ಅಧಿಕಾರಿಗಳಿಗೆ ಹೆಚ್ಚು ಸಂಬಳ, ಮ್ಯಾರೀಡ್ ಅಲೋಯನ್ಸ್ ವಗೈರೆ ಕೊಡುವಾಗ ಬಡ ನೌಕರರಿಗೆ ಸಾಕಷ್ಟು ಕೊಡದೆ ಲಂಚಕ್ಕೆ ಕೈ ಹಾಕಲು ಪ್ರೇರೇಪಿಸುವುದು ಸೂಕ್ತವಲ್ಲ. ಇದಕ್ಕೆ ಸರಿಯಾದ ಕ್ರಮ ಕೈಕೊಳ್ಳಬೇಕು.

ಸರ್ವೆ ಸೆಟ್ಲ್‌ಮೆಂಟ್ ಆಫೀಸಿನಲ್ಲಿ 3 : 1 ಪ್ರಮೋಷನ್ ಕೊಡಬೇಕೆಂದು ಸ್ಟ್ಯಾಂಡಿಂಗ್ ಆರ್ಡರಿದೆ. ಅದನ್ನು ಬಿಟ್ಟು ಸರ್ವೆ ಸೆಟ್ಲ್‌ಮೆಂಟ್ ಆಫೀಸರು 19 ಜನರನ್ನು ಮೇಲೆ ಹಾಕಿದರು. ಅದಕ್ಕೆ ಡೆಪ್ಯುಟೇಷನ್ ಬಂತು, ವಿಚಾರಮಾಡಿ ಪಬ್ಲಿಕ್ ಸರ್ವಿಸ್ ಕಮಿಷನ್ ಅವರು ಮಾಡಿರುವುದು ತಪ್ಪು ಎಂದು ಹೇಳಿದರು. ಹಾಗೆ ಮಾಡಿದಾಗ ತಪ್ಪುಮಾಡಿದ ಆಫೀಸರಿಗೆ ಶಿಕ್ಷೆ ಕೊಡದಿದ್ದರೆ ಸರ್ಕಾರದಲ್ಲಿ ಬಿಗಿ ಇರುತ್ತದೆಯೇ ? ಹೀಗೆ ತಪ್ಪಿತಸ್ತರನ್ನು ಶಿಕ್ಷೆಗೆ ಗುರಿಮಾಡದೆ ಬಿಡುವುದು ಅನ್ಯಾಯ. ಯಾವ ಜಾತಿ ಅಥವಾ ಕುಲಕ್ಕೇ ಸೇರಿರಲಿ ಸರ್ವಿಸ್ಸಿಗೆ ಸೇರಿದಮೇಲೆ ಎಲ್ಲರೂ ಒಂದೇ ಜಾತಿಯ ಅಭಿಮಾನಕ್ಕೆಡೆಕೊಟ್ಟಿರುವುದರಿಂದ ಇಂಡಿಯಾದೇಶ ಇಂದು ಅಧೋಗತಿಗೆ ಬಂದಿದೆ. ಈಗ ಫಾರ್ವರ್ಡ್, ಬ್ಯಾಕ್‌ವರ್ಡ್, ಅನ್‌ಟಚೆಬಲ್, ಟಚೆಬಲ್, ಐ.ಎ.ಎಸ್., ಐ.ಪಿ.ಎಸ್. ಎಂದು ವಿಂಗಡಿಸಿ ತಾರತಮ್ಯ ಮಾಡುವುದು ಮಹಾ ಅಪರಾಧ.

ಡಿಸ್ಟ್ರಿಕ್ಟ್ ಬೋರ್ಡಿಗೆ ನಾಮಕರಣ ಸದಸ್ಯರನ್ನು ಹಾಕಿರುವ ವಿಚಾರ ನೋಡಿದರೆ ಅದರಲ್ಲಿ ಒಂದು ಟ್ರಿಕ್ ಮಾಡಿದ್ದಾರೆ. ಅದಕ್ಕೂ ಮುನಿಸಿಪಲ್ ಪ್ರೆಸಿಡೆಂಟ್, ಮುನಿಸಿಪಲ್ ಕೌನ್ಸಿಲರ್‌ಗಳಿಗೂ ಏನು ಸಂಬಂಧ ? ಟೌನುಗಳಲ್ಲಿರುವವರನ್ನು ಅಲ್ಲಿ ಸದಸ್ಯರನ್ನಾಗಿ ಮಾಡಲು ಕಾರಣವೇನು ? ಚುನಾವಣೆಗಳಲ್ಲಿ ಸೋತವರನ್ನು ಅಥವಾ ಮುನಿಸಿಪಾಲಟಿ ಮೆಂಬರುಗಳನ್ನು, ಜಿಲ್ಲಾಬೋರ್ಡಿಗೆ ಓಟುಮಾಡಲು ಅರ್ಹರಲ್ಲದವರನ್ನು ಜಿಲ್ಲಾಬೋರ್ಡಿನ ಸದಸ್ಯರನ್ನಾಗಿ ಹಾಕುವುದು ಯಾವ ನ್ಯಾಯ ? ಈ ರೀತಿ ಅನ್ಯಾಯ ನಡೆಯದಹಾಗೆ ನೋಡಿಕೊಂಡು ದೇಶಕ್ಕೂ ಸರ್ಕಾರಕ್ಕೂ ಕೀರ್ತಿ ತರಬೇಕೆಂಬುದೇ ನನ್ನ ಉದ್ದೇಶ. ಇದನ್ನು ವಿಚಾರಮಾಡಿ ತಕ್ಕ ವ್ಯವಸ್ಥೆಮಾಡಬೇಕು.

ಈಗ ಪೋಲೀಸು ಇಲಾಖೆಗೆ ಗೃಹ ಸಚಿವರು ಹೊಸಬರು; ಖಂಡಿತವಾಗಿಯೂ ಅವರ ಕಾಲದಲ್ಲಿ ನ್ಯಾಯ ದೊರೆಯುತ್ತದೆಂದು ಭಾವಿಸಿದ್ದೇನೆ. ದೇಶದಲ್ಲಿ ಪೋಲೀಸು ಇಲಾಖೆಯಿದ್ದರೂ ಜನತೆಗೆ ನೆಮ್ಮದಿಯಿಲ್ಲ; ನಿದರ್ಶನ ಕೊಡುತ್ತೇನೆ ; ಅನ್ಯಾಯ ನಡೆಯಬಾರದು. ಸರ್ಕಾರದ ಕೆಲಸ ದೇವರ ಕೆಲಸ ಎಂದು ವಿಧಾನ ಸೌಧದ ಸರ್ಕಾರಿ ಕಟ್ಟಡದಮೇಲೆ ಬರದಿರುವಂತೆ ಆ ಭಾವನೆಯಿಂದ ಕೆಲಸ ಜರುಗಿದ್ದರೆ ವಂದನೆ

(ಶ್ರೀ ಜಿ. ಎನ್. ಪುಟ್ಟಣ್ಣ.)

ಸಲ್ಲಿಸಬಹುದಾಗಿತ್ತು ರಾಜ್ಯಪಾಲರ ಭಾಷಣದಲ್ಲಿ ಖಂಡಿತ ತಿರುಳಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ) —ರಾಜ್ಯಪಾಲರ ಭಾಷಣದಮೇಲೆ ಮಾನ್ಯ ಸ್ನೇಹಿತರು ಅಭಿನಂದನಾ ನಿರ್ಣಯವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಈ ನಿರ್ಣಯದಮೇಲೆ ಮಾತನಾಡಿ ರಾಜ್ಯಪಾಲರ ಭಾಷಣ ತಮಗೆ ನಿರಾಶೆಯನ್ನುಂಟುಮಾಡಿದೆ, ಇದರಲ್ಲಿ ಏನೇನೂ ತಿರುಳಿಲ್ಲವೆಂದು ಹೇಳಿದ್ದಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ನಮ್ಮ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಮುಂದಿನ ಯೋಜನೆಯನ್ನು ಸಾಧಿಸಲನುಕೂಲವಾಗುವ ರೀತಿಯ ಮಾರ್ಗದಲ್ಲಿ ಅಪ್ಪಣೆ ಕೊಡಿಸಿದ್ದಾರೆಂದು ತಿಳಿದಿದ್ದೇನೆ. ಸರ್ಕಾರದವರು ತಮ್ಮ ಕಾರ್ಯಕ್ರಮಗಳನ್ನೂ, ಯೋಜನೆಗಳನ್ನೂ ಕಾರ್ಯರೂಪಕ್ಕೆ ತರುವುದರಲ್ಲಿ ಯಶಸ್ವಿಯಾಗಿ ಪ್ರಯತ್ನ ನಡೆಸುತ್ತಿಲ್ಲವೆಂದು ಅನೇಕರು ಆರೋಪಮಾಡುತ್ತಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣವನ್ನು ನಾನು ಸಭೆಯ ಮುಂದಿಡುವುದಾದರೆ, ಯಾರು ಈ ಯೋಜನೆಗಳನ್ನು ಕಾರ್ಯಗತಮಾಡಬೇಕಾಗಿದೆಯೋ, ಆ ಆಡಳಿತ ನಡೆಸತಕ್ಕವರಿಗೆ ಪೂರ್ಣ ಕಾಲಾವಕಾಶ ಕೊಟ್ಟಿಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಉದಾಹರಣೆಗೆ ಒಬ್ಬ ಅನುಭವಿಯಾದ ಹೆಣ್ಣು ಮಗಳು ತುಪ್ಪವನ್ನು ಕಾಯಿಸಿ ಹೊಸ ಕುಡಿಕೆಗೆ ಹಾಕಿದಾಗ ಮರು ದಿನಕ್ಕೆ ಅದರಲ್ಲಿ ಅರಕೆಯಾದುದನ್ನ ಕಂಡು, ಕುಡಿಕೆ ಚೆನ್ನಾಗಿಲ್ಲವೆಂದು ಇನ್ನೊಂದು ಹೊಸ ಕುಡಿಕೆಗೆ ಹಾಕಿ ನೋಡಿದಳಂತೆ. ಆಗಲೂ ತುಪ್ಪ ಅರಕೆಯಾಗಲು ಈ ಊರಿನ ಕುಂಬಾರರಿಗೆ ಸರಿಯಾಗಿ ಮಡಕೆ ಮಾಡಲು ಬರುವುದಿಲ್ಲವೆಂದು ಬೇರೊಂದು ಊರಿನಿಂದ ಮತ್ತೊಂದು ಹೊಸ ಕುಡಿಕೆ ತರಿಸಿ ಅದಕ್ಕೆ ಹಾಕಿದಳಂತೆ. ಕೊನೆಗೂ ಯಾವ ಕುಡಿಕೆಗೆ ಹಾಕಿದರೂ ಕುಡಿದುಕೊಳ್ಳುವುದನ್ನು ನೋಡಿ ಮಗ್ಗುಲು ಮನೆಗೆ ಹೋಗಿ ಒಬ್ಬ ಅನುಭವಿಯಾದ ಹೆಂಗಸಿನೊಡನೆ ಹೇಳಿಕೊಂಡಳಂತೆ. ಅವಳಿಂದ ಹೊಸ ಕುಡಿಕೆಯ ಪರಿಚಯವನ್ನು ತಿಳಿದಮೇಲೆ ಆಗ ಅವಳಿಗೆ ಅರಿವಾಯಿತು. ಹೊಸ ಕುಡಿಕೆ ಯಾವ ಮಣ್ಣಿನಲ್ಲಿ ಮಾಡಿದ್ದಾದರೂ ತುಪ್ಪವನ್ನು ಕುಡಿಯುತ್ತದೆಂದು ಆಗ ಗೋಚರವಾಯಿತು. ಅದೇ ರೀತಿ ನಾವು ಎಲ್ಲರೂ ಈ ಯೋಜನೆಗಳ ವಿಷಯದಲ್ಲಿ ಇವರು ಸರಿಯಾಗಿ ಕಾರ್ಯಗತ ಮಾಡಲಾರರು, ಬೇರೆಯವರನ್ನು ತರಬೇಕು ಎಂದು ವಾದ ಮಾಡುವುದು ಸ್ವಾಭಾವಿಕವಾಗಿದೆ. ಆದ್ದರಿಂದ ನಾವು ಮುಖ್ಯವಾಗಿ ಒಂದಂಶವನ್ನು ಮನಗಾಣಬೇಕು. ಯಾವ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕಾದರೂ ಅದಕ್ಕೆ ತಕ್ಕಷ್ಟು ಕಾಲಾವಕಾಶ ಕೊಟ್ಟು ಪರೀಕ್ಷೆಮಾಡಿ ನೋಡಬೇಕು. ಪೂರ್ಣ ಕಾಲಾವಕಾಶ ಕೊಟ್ಟರೂ ಆ ಅವಧಿಯಲ್ಲಿಯೂ ಆಡಳಿತ ನಡೆಸಿದವರು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರಲಾರದವರಾದರೆ ಇನ್ನವರು ಆ ಸ್ಥಾನದಲ್ಲಿರಲೇ ಕೂಡದೆಂದು ನಾನು ಕಟುವಾಗಿ ಹೇಳಿದರೆ ಯಾರೂ ನನ್ನನ್ನು ತಪ್ಪಾಗಿ ಭಾವಿಸುವಂತಿಲ್ಲ.

ಕೈಗಾರಿಕಾಭಿವೃದ್ಧಿಯ ವಿಚಾರದಲ್ಲಿ ಒಂದಂಶವನ್ನು ನಾನು ನಮ್ಮ ಸಚಿವರಿಗೆ ತಿಳಿಸಬಯಸುತ್ತೇನೆ. ನಮ್ಮ ಮಂಡ್ಯ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯೊಂದು ಸ್ಥಾಪನೆಯಾಗಿ 25 ವರ್ಷಗಳ ಮೇಲಾಯಿತು. ಅಲ್ಲಿ ಈ ಪ್ರದೇಶದಲ್ಲಿ ಸುಮಾರು 20,000 ಎಕರೆಗಳ ಪ್ರದೇಶದಲ್ಲಿ ಕಬ್ಬು ನೆಡುತ್ತಿದ್ದಾರೆ. ಆದರೂ ಕಾರ್ಖಾನೆಯವರು ಇಷ್ಟು ವರ್ಷಗಳಾದರೂ 8,000 ಎಕರೆಗಳನ್ನು ಮಾತ್ರ ಅರೆಯತಕ್ಕ ಅವಕಾಶಮಾಡಿಕೊಂಡಿದ್ದಾರೆ. ಅದರಲ್ಲೂ ಈ 8,000 ಎಕರೆಗಳನ್ನು ಸಕಾಲದಲ್ಲಿ ಅರೆಯಿಸುವ ಶಕ್ತಿ ಈ ಕಂಪನಿಗಿಲ್ಲ. ಹೀಗಾಗಿ ವರ್ಷಕ್ಕೆ ಸುಮಾರು 30 ಲಕ್ಷ ರೂಪಾಯಿಗಳಷ್ಟು ಆದಾಯ ಬರಬಹುದಾದುದು ಕಡಮೆಯಾಗುತ್ತಿದೆ. ಆದ್ದರಿಂದ ಈ ಕಂಪನಿಯ ಅರೆಯುವ ಶಕ್ತಿಯನ್ನು ದ್ವಿಗುಣಮಾಡದೆ ಇದ್ದರೆ ನಾವು ಸುಲಭವಾಗಿ ಏನು ಪ್ರಯೋಜನ ಹೊಂದಬಹುದೋ ಅದಕ್ಕೆ ಅವಕಾಶವಿಲ್ಲವಾಗಿದೆ. ಸರ್ಕಾರಕ್ಕೆ ಕೂಡ ಎಕ್ಸೈಸ್ ಮತ್ತು ಇತರ ಟ್ಯಾಕ್ಸ್ ರೀತಿಯಿಂದಾಗಿ ಕೋಟ್ಯಾಂತರ ರೂಪಾಯಿಗಳು ಬರುವ ಹಾಗಿರುವಾಗ ಸರ್ಕಾರದವರು ಅದಕ್ಕೆ ಏನೇನೂ ಗಮನ ಕೊಡುತ್ತಿಲ್ಲವಲ್ಲ ಎಂದು ವಿಷಾದಿಸುತ್ತೇನೆ.

ಸಮಾಜ ವ್ಯವಸ್ಥೆಯ ವಿಚಾರವನ್ನು ರಾಜ್ಯಪಾಲರು ಹೇಳಿದ್ದಾರೆ. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಸಮಾಜದ ವ್ಯವಸ್ಥೆಯನ್ನು ಸರಿಪಡಿಸಬೇಕನ್ನುವಂತೆಯೇ ಈಗ ಸಮಾಜದಲ್ಲಿ ಬೆಳೆಯುತ್ತಿರುವ ಕೋಮುವಾರು ಭಾವನೆಯನ್ನು ಮೊದಲು ತೊಡೆದು ಹಾಕಲು ಪ್ರಯತ್ನ ಮಾಡಬೇಕು. ಹಾಲಿ ಇರುವ ಜಾತಿ ಎಂದರೆ ಒಂದು ಕಡೆ ಐಶ್ವರ್ಯವಂತರಾಗಿ ಹುಟ್ಟಿ ಐಶ್ವರ್ಯವಂತರಾಗಿ ಬೆಳೆದು ಸುಖಲೋಲುಪರಾಗಿ ಓಲಾಡುವ ಜನರಿದ್ದಾರೆ. ಇನ್ನೊಂದು ಕಡೆ ಕಷ್ಟಪಟ್ಟು ದುಡಿದು ಸೌಖ್ಯದಿಂದ ಜೀವನ ನಡೆಸಿ ತೃಪ್ತಿಪಟ್ಟುಕೊಂಡಿರುವ ಜನರಿದ್ದಾರೆ. ಇವೆರಡನ್ನೂ ಬಿಟ್ಟು ಇನ್ನೊಂದು ವರ್ಗವಿದೆ. ಅಂದರೆ ತನ್ನ ಮನೆಯ ಹಾಲನ್ನು, ಮೊಸರನ್ನು ತನ್ನ ಮನೆಯ ಸುಖಪೋಷಣೆಗೆ ತನ್ನ ರಕ್ತ ಹಂಚಿ ಹುಟ್ಟಿರುವ ಮಗುವಿಗೆ ಕೊಡದೆ ಇತರರಿಗೆ ತನ್ನ ಹೊಟ್ಟೆಯ ಪಾಡಿಗಾಗಿ ಮಾರಿಬಂದ ಹಣದಿಂದ ಜೀವನವನ್ನು ಮಾಡುವ ಜನರಿದ್ದಾರೆ. ಆದ್ದರಿಂದ ಕೋಮುವಾರು ಭಾವನೆಯನ್ನು ಬೆಳೆಸುವುದಕ್ಕೆ ಹೋಗದೆ ಕಷ್ಟದಿಂದ ದುಡಿದು ಸುಖಜೀವನವನ್ನು ನಡೆಸುವಂತಹ ಸಮಾಜದ ರಚನೆಯ ಕಡೆ ಹೆಚ್ಚು ಗಮನ ಕೊಡಬೇಕಾದದ್ದು ಪ್ರತಿಯೊಬ್ಬನ ಕರ್ತವ್ಯವೆಂದು ಹೇಳುತ್ತೇನೆ. ಸರ್ಕಾರದವರು ಈಗ ಐಶ್ವರ್ಯವಂತರ ದಾಕ್ಷಿಣ್ಯಕ್ಕೆ ಒಳಪಟ್ಟಿದ್ದಾರೋ ಏನೋ, ದಿನದಿನಕ್ಕೂ ಅವರ ಐಶ್ವರ್ಯ ದ್ವಿಗುಣವಾಗುತ್ತಿದೆಯೇ ವಿನಾ ಬಡಜನರ ಬಡತನ ಹೋಗುವುದಕ್ಕೆ ಅವಕಾಶವಾಗಿಲ್ಲ. ಹೀಗೆ ಸಮಾಜದಲ್ಲಿರುವ ಏರುಪೇರುಗಳನ್ನು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಷಯದಲ್ಲಿ ನಾವು ಎಷ್ಟರಮಟ್ಟಿನ ಪ್ರಗತಿ ಸಾಧಿಸಿದ್ದೇವೆಂಬುದನ್ನು ನೋಡುವುದಾದರೆ, ನಮ್ಮ ರಾಜ್ಯಾಂಗದ ಪ್ರಕಾರ ದೇಶದಲ್ಲಿ ಹುಟ್ಟಿದ ಎಲ್ಲ ಮಕ್ಕಳಿಗೂ 14 ವರ್ಷ ವಯಸ್ಸಿನವರೆಗೂ ಎಲ್ಲರಿಗೂ ಉಚಿತ ಮತ್ತು ಕಡ್ಡಾಯ ವಿದ್ಯಾಭ್ಯಾಸ ಕೊಡಬೇಕೆಂದಿದೆ. ಹಳೆಯ ಮೈಸೂರಿನ ಲೆಕ್ಕವನ್ನು ನೋಡಿದರೆ ಆಗ್ಗೆ ನಮ್ಮ ದೇಶದಲ್ಲಿದ್ದ ಸುಮಾರು 14 ಲಕ್ಷ ಮಕ್ಕಳ ಪೈಕಿ ಸುಮಾರು ಏಳು ಲಕ್ಷ ಮಕ್ಕಳಿಗೆ ಮಾತ್ರ ವಿದ್ಯಾಭ್ಯಾಸ ದೊರೆಯುತ್ತಿತ್ತು. ಈಗ ವಿಶಾಲ ಮೈಸೂರನ್ನೂ ಸೇರಿಸಿಕೊಂಡರೆ ಎಲ್ಲಾ ಸೇರಿ ಸುಮಾರು 11 ಲಕ್ಷ ಮಕ್ಕಳಿಗೆ ಮಾತ್ರ ವಿದ್ಯಾಭ್ಯಾಸ ದೊರೆಯುತ್ತಿದೆಯೆಂದೂ ಸುಮಾರು 12 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ವಿದ್ಯಾಭ್ಯಾಸ ದೊರೆಯುತ್ತಿಲ್ಲವೆಂದೂ ಕಾಣಬರುತ್ತದೆ. ಆದ್ದರಿಂದ ಮುಖ್ಯವಾಗಿ ಹಳ್ಳಿಗಾಡಿನಲ್ಲಿ ಪ್ರತಿಯೊಂದು ಮಗುವಿಗೂ ವಿದ್ಯಾಭ್ಯಾಸ ದೊರೆಯುವುದಕ್ಕೆ ಅವಕಾಶಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಈ ಭಾಷಣದಲ್ಲಿ ಸಹಕಾರ ಸಂಘಗಳ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ನಮ್ಮಲ್ಲಿ ಜಮೀನು ಅಡಮಾನ ಬ್ಯಾಂಕುಗಳೆಂದು ಸಹಕಾರ ಸಂಘಗಳು ಸ್ಥಾಪನೆಯಾಗಿ 25 ವರ್ಷಗಳ ಮೇಲಾಯಿತು. ಹಿಂದೆ ಮೈಸೂರಿನಲ್ಲಿ ನಮ್ಮ ರೈತರಿಗೆ ಸುಮಾರು 40 ಕೋಟಿ ರೂಪಾಯಿಗಳಷ್ಟು ಸಾಲದ ಹೊರೆಯಿರುವಾಗ ಈ ಸಂಘದವರು ಕೇವಲ ಕೋಟಿ ರೂಪಾಯಿಗಳನ್ನು 25 ವರ್ಷದಿಂದ ಸಾಲ ತೀರ್ವೆಯ ಬಗ್ಗೆ ಕೊಟ್ಟಿದ್ದಾರೆಂದರೆ ದೇಶದ ಬೆನ್ನುಮೂಳೆಯೆನಿಸಿಕೊಳ್ಳುವ ರೈತನಿಗೆ ಏನು ಸಹಾಯ ಮಾಡಿದಂತಾಯಿತು? ರೈತನ ಸಾಲದ ಹೊರೆಯನ್ನು ಏನು ನೀಗಿದಂತಾಯಿತು? ರೈತನ ಸಾಲದ ಹೊರೆಯನ್ನು ಇಳಿಸದಿದ್ದರೆ ದೇಶದ ಭವಿಷ್ಯ ಆಶಾದಾಯಕವಾಗಿರಲಾರದು. ಈ ಬಗ್ಗೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಆರೋಗ್ಯದ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಹಿಂದೆ ನಾನೊಂದು ಪ್ರಶ್ನೆ ಕೇಳಿಸಿ ಕ್ಷಯ ರೋಗದ ಆಸ್ಪತ್ರೆಯಲ್ಲಿ ಸ್ಥಳವಿಲ್ಲದೆ ಅನೇಕ ರೋಗಿಗಳು ಹಿಂತಿರುಗಬೇಕಾದ ಪರಿಸ್ಥಿತಿಯನ್ನು ಸರ್ಕಾರದವರ ಗಮನಕ್ಕೆ ತಂದಿದ್ದೇನೆ. ತಾತ್ಕಾಲಿಕವಾಗಿ ಎಲ್ಲಾ ಜಿಲ್ಲಾ ಮುಖ್ಯ ಸ್ಥಳಗಳಲ್ಲೂ ಕೆಲವು ವಾರ್ಡುಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ, ಇನ್ನೊಂದು ವರ್ಷದಲ್ಲಿ ಆಗುತ್ತದೆಂದು ಹೇಳಿದ್ದರು. ಅದಷ್ಟು ಜಾಗ್ರತೆ ಇದನ್ನು ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕ್ಷಯ ರೋಗದ ವಾರ್ಡುಗಳ ವಿಷಯದಲ್ಲಿ ಆದಷ್ಟು ಜಾಗ್ರತೆ ಜಿಲ್ಲೆಯ ಮುಖ್ಯ ಮುಖ್ಯವಾದ ಸ್ಥಳಗಳಲ್ಲಿ ಸ್ಥಾಪಿಸಬೇಕೆಂದು ಹೇಳಿ ನನಗೆ ಸ್ವಲ್ಪಹೊತ್ತು ಮಾತನಾಡಲು ಇಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಂಥ ನಮ್ಮ ಅಧ್ಯಕ್ಷರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ ಮತ್ತು ಮಾನ್ಯ ಸದಸ್ಯರೇ, ನಮ್ಮ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಈ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗಳನ್ನು ಸರ್ಕಾರದವರು 10-12 ವರ್ಷಗಳಿಂದ ಇವೊತ್ತು ಮಾಡುತ್ತೇವೆ, ನಾಳೆ ಮಾಡುತ್ತೇವೆ ಎಂದುಕೊಂಡು ಇದುವರೆಗೂ ತಳ್ಳಿಕೊಂಡು ಬಂದು, ಈಗ ಆ ಚುನಾವಣೆಗಳ ವಿಷಯ ಏನಾಯಿತು ಎಂದು ನಾವು ಕೇಳಿದರೆ ಒಂದು ಕಮಿಟಿ ಮಾಡಿ ಅದನ್ನು ಪರಿಶೀಲಿಸುತ್ತೇವೆಂದು ಹೇಳುತ್ತಾರೆ. ಅದರಲ್ಲಿ ಒಬ್ಬ ಎಗ್ಜಿಕ್ಯುಟಿವ್ ಆಫೀಸರು ಎಂಬವರನ್ನು ನೇಮಕ ಮಾಡಿದ್ದಾರೆ. ಅವರಿಗೆ ಅಸಿಸ್ಟೆಂಟ್ ಕಮಿಷನರ್ ಗ್ರೇಡ್ ಸಂಬಳ ಏನು ಇದೆಯೋ ಅದನ್ನೂ ಕೊಡುತ್ತಾರೆ. ಕೆಲವು ಸ್ಕೀಮುಗಳನ್ನು ಮಾಡಲು ಸುಮ್ಮನೆ ಬೇಕಾದಷ್ಟು ಕಮಿಟಿಗಳನ್ನು ಮಾಡಿ, ದ್ರವ್ಯ ಸಹಾಯ ಸಾಕಷ್ಟು ಮಾಡದೆ ಅನೇಕ ಕೆಲಸ ಕಾರ್ಯಗಳು ನಡೆಯದೇ ಇವೆ. ಅದಕ್ಕೆ ಬದಲಾಗಿ ಈ ಬಡ್ಜೆಟ್ಟಿನಲ್ಲಿ ಜನಗಳ ಮೇಲೆ ತೆರಿಗೆಯ ಹೊರೆ ಹೆಚ್ಚಾಗುತ್ತಿದೆ. ಇದೇ ರೀತಿ ಈಗ ಬಿ. ಜಿ. ಡಿ. ಯೋಜನೆಯನ್ನು ತಯಾರುಮಾಡಿ ಈಗಾಗಲೇ ತಮ್ಮ ಹೆಸರನ್ನು ಕೆಡಿಸಿಕೊಂಡಿದ್ದಾರೆ. ಅದು ಬಹಳ ಅವ್ಯವಸ್ಥೆಯಲ್ಲಿದೆ. ಅಲ್ಲಿ ಅಸಿಸ್ಟೆಂಟ್ ಕಮಿಷನರ್ ಗ್ರೇಡಿನ ಸಂಬಳದವರೂ ಷೇರುಗಳನ್ನು ಪಡೆದಿರುತ್ತಾರೆ. ಹಳ್ಳಿಯ ಜನರಿಂದಲೂ ಷೇರುಗಳನ್ನು ಕಲೆಕ್ಟ್ ಮಾಡಿ ಅವರನ್ನು ಈ ಸ್ಕೀಮಿನೊಳಗೆ ಸೇರಿಸಿಕೊಂಡಿದ್ದಾರೆ. ಅವರೇನಾದರೂ ಸಾಲಕ್ಕೆ ಅರ್ಜಿ ಕೊಟ್ಟರೆ, ಆಗ ದುಡ್ಡಿಲ್ಲ ಎಂದು ಹೇಳುತ್ತಾರೆ. ಸಿಬ್ಬಂದಿಯವರಿಗೆ ಸಂಬಳ ಸಾರಿಗೆಗಳಿಗೂ ದುಡ್ಡು ಇಲ್ಲ ಎಂದು ಹೇಳಿ ಅನೇಕ ವಾದ ವಿವಾದಗಳು ಹುಟ್ಟಿವೆ. ಈ ರೀತಿ ಅವ್ಯವಸ್ಥೆ ಅನೇಕ ಸಹಕಾರ ಸಂಘಗಳಲ್ಲಿ ನಡೆದು ಕೊಟ್ಟಿರುವ ಹಣವನ್ನು ಅನೇಕರು ವಾಪಸ್ಸು ಪಡೆದಿರುತ್ತಾರೆ. ಹಳ್ಳಿಗಳಲ್ಲಿ ಸಹಕಾರ ಸಂಘಗಳ ಮೂಲಕ ಒಂದು ಸಮಾಜವಾದದ ತತ್ವದ ಮೇಲೆ ಯಾವ ಸ್ಕೀಮನ್ನಾದರೂ ಹಾಕಬಹುದು. ಹಳ್ಳಿಗಳಲ್ಲಿರುವ ಸಹಕಾರ ಸಂಘಗಳನ್ನು ಸರಿಯಾದ ವ್ಯವಸ್ಥೆಯಿಂದ ನೋಡಿ ಕೊಳ್ಳದ ಮೇಲೆ ಹಳ್ಳಿಯ ಜನರಲ್ಲಿ ಯಾವ ರೀತಿ ನಂಬಿಕೆ ಹುಟ್ಟುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿದುಕೊಳ್ಳಬೇಕು. ಹಳ್ಳಿಗಳಲ್ಲಿ ಸ್ಕೂಲುಗಳು ಯಥೇಚ್ಛವಾಗಿರಬೇಕು. ನಾವೇನಾದರೂ ಸ್ಕೂಲು ಬೇಕು ಎಂದರೆ ನೀವೂ ಸಹಾಯಮಾಡಿ, ನಾವು ಸುಮಾರು ತರಗತಿಯೊಂದಕ್ಕೆ 750 ರೂಪಾಯಿ ಗ್ರಾಂಟು ಕೊಡುತ್ತೇವೆ ಎಂದು ಹೇಳುತ್ತಾರೆ. ಈ ರೀತಿ ಆದರೆ ಬಡವರಿಗೆ ವಿದ್ಯಾಭ್ಯಾಸದ ಸೌಲಭ್ಯ ಯಾವ ರೀತಿ ಉಂಟಾಗಬೇಕು? ಹಾಗೂ ಒಂದುವೇಳೆ ರೈತರೇ ಹಣಕೂಡಿಸಿಕೊಂಡು ಸ್ಕೂಲುಗಳನ್ನು ಕಟ್ಟಿ ಕೊಳ್ಳುತ್ತೇವೆ ಎಂದು ಹೇಳಿದರೆ, ಸರ್ಕಾರದವರು ಇಂಜನಿಯರಿಂದ ಸರ್ವೆ ಆಗಬೇಕು, ಅದು ಇನ್ನೂ ಮಂಜೂರು ಆಗಿಲ್ಲ, ಗೋಡೆ ಲೆವಲ್ ಸರಿಯಾಗಿಲ್ಲ ಎಂದು ಏನೋ ಕೆಲವು ಕಾರಣಗಳನ್ನು ಹೇಳಿ ಬಡವರು ಮಾಡುವ ಕಾರ್ಯಗಳಿಗೆ ತಡೆಮಾಡುವ ಆರ್ಡರುಗಳನ್ನು ಮಾಡುತ್ತಿದ್ದಾರೆ. ಇದರಿಂದ ಏನು ಪ್ರಯೋಜನ? ಬಡವರಿಗೆ ನಮ್ಮ ಸರ್ಕಾರದವರು ಯಾವ ಯಾವ ಸೌಕರ್ಯಗಳನ್ನು ಯಾವ ಯಾವ ಕಾಲದಲ್ಲಿ ಒದಗಿಸಬೇಕೋ ಅಷ್ಟನ್ನು ಸರಿಯಾಗಿ ಒದಗಿಸುತ್ತಿಲ್ಲ.

ಮಂತ್ರಿಗಳು ಜನರ ಕಷ್ಟಗಳನ್ನು ತಿಳಿಯುವ ಉದ್ದೇಶದಿಂದಲೇ ಪ್ರವಾಸ ಮಾಡಬೇಕಾದದ್ದು ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಮಂತ್ರಿಗಳಿಗೆ ಇದರ ಅರಿವೇನೂ ಆಗಿಲ್ಲವೆಂದು ನಾನು ದೃಢವಾಗಿ ಹೇಳಬೇಕಾಗಿದೆ. ಪ್ರವಾಸ ಹೋದರೆ ಒಂದೊಂದು ಸಾರಿ 200-300 ಮೈಲುಗಳ ದೂರ ಹೋಗುತ್ತಾರೆ. ಏಕೆಂದರೆ ಟಿ.ಎ., ಬ್ಯಾಟ, ಇವೆಲ್ಲವೂ ಹೆಚ್ಚಾಗಿ ದೊರೆಯಬೇಕಾದರೆ ಅಷ್ಟಷ್ಟು ದೂರ ಪ್ರಯಾಣ ಮಾಡಿಯೇತೀರಬೇಕು. ದಾರಿಯುದ್ದಕ್ಕೂ ಹಾರಗಳನ್ನು ನಮ್ಮ ಬಡರೈತರಿಂದ ಹಾಕಿಸಿಕೊಂಡು ಬೇಕಾದಷ್ಟು ಉಪಚಾರಗಳನ್ನು ಅಲ್ಲಿಯೇ ಪಡೆದುಕೊಂಡು ಪುನಃ ವಾಪಸ್ಸು ಬರುವುದು—ಈರೀತಿ ಪ್ರವಾಸಗಳನ್ನು ನಮ್ಮ ಮಂತ್ರಿಗಳು ಕೈಗೊಳ್ಳುತ್ತಾ ಬಂದರೆ ಯಾವರೀತಿ ಜನರ ಕಷ್ಟಗಳು ಪರಿಹಾರವಾಗುವುದೋ ನನಗಂತೂ ಗೊತ್ತಾಗುವುದಿಲ್ಲ. ಆದ್ದರಿಂದ ಇನ್ನುಮುಂದೆ ವಿಶೇಷವಾಗಿ ನಮ್ಮ ಮಂತ್ರಿಗಳು ಪ್ರವಾಸ ಮಾಡುವುದನ್ನು ನಿಲ್ಲಿಸಿ, ಸಂಸ್ಥಾನದಲ್ಲಿರುವ ಪ್ರತಿಯೊಂದು ಹಳ್ಳಿ ಹಳ್ಳಿಗೂ ಹೋಗಿ, ಅಲ್ಲಿನ ಜನರ ಕಷ್ಟಗಳೇನು, ಅವುಗಳನ್ನು ಬಗೆ ಹರಿಸಲು ಮಾಡಬೇಕಾದ ತಮ್ಮ ಜವಾಬ್ದಾರಿಯ ಕರ್ತವ್ಯವೇನೆಂಬುದನ್ನು ತಿಳಿದು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಯಾವ ಯಾವ ಮಂತ್ರಿಗಳಿಗೆ ಎಷ್ಟೆಷ್ಟು ಬ್ಯಾಟ ಇದುವರೆಗೂ ಖರ್ಚಾಗಿದೆ ಎಂಬುದನ್ನು ಒಂದು ಪಟ್ಟಿಮಾಡಿ ನೋಡಿದರೆ, ರೈತನ ದುಡ್ಡು ಇದರಿಂದ ಎಷ್ಟು ಪೋಲಾಗುತ್ತದೆ ಎಂಬುದು ಗೊತ್ತಾಗುತ್ತದೆ. ನಾವೂ ಅವರೂ ರೈತರ ಪ್ರತಿನಿಧಿಗಳಾಗಿ ಬಂದು, ಅವರ ಕಷ್ಟಗಳನ್ನು ಪರಿಹರಿಸಲು ಅವರಿಗೆ ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡದೆ ಹೋದರೆ, ನಮ್ಮ ನಮ್ಮ ಕರ್ತವ್ಯಗಳಿಗೆ ಒಂದು ಲೋಪ ಮಾಡಿದಂತಾಗುತ್ತದೆ. ಒಂದುಸಾರಿ ನಮ್ಮ ಹಳ್ಳಿಗೆ ನಮ್ಮ ಮಂತ್ರಿಗಳು ಭೇಟಿಕೊಟ್ಟಾಗ, ಮಂತ್ರಿಗಳ ಕಾರೋ ಅಥವಾ ಬೇರೆಯವರ ಕಾರೋ 80 ಮೈಲಿ ಸ್ಪೀಡ್‌ನಲ್ಲಿ ಹೋಗುತ್ತಿತ್ತು. ಆಗ ನಾನು

(ಶ್ರೀ ಕೆ. ಪಿ. ರೇವಣಸಿದ್ದಪ್ಪ.)
ಪೋಲೀಸಿನವರಲ್ಲಿ ಕೇಸು ಕೊಡೋಣವೆಂದು ಹೋದರೆ, ಅಲ್ಲಿ ಅದಕ್ಕೆ ಸಾಕ್ಷಿ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿಬಿಟ್ಟರು. ಇದನ್ನು ಏತಕ್ಕೋಸ್ಕರ ಇಲ್ಲಿ ಹೇಳಿದೆ ನೆಂದರೆ, ನಮ್ಮ ಸರ್ಕಾರದ ಆಡಳಿತದಲ್ಲಿ ದಕ್ಷತೆ ಎಷ್ಟರ ಮಟ್ಟಿಗೆ ಇದೆ ಎಂಬುದು ತಿಳಿಯುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಿಜವಾಗಿ ಅತಿ ಮುಖ್ಯವಾದಂಥ ಪಾನನಿರೋಧವನ್ನು ಜಾರಿಗೆ ತನ್ನಿ. ಅದರಿಂದ ಜನಗಳಿಗೆ ವಿಶೇಷ ಪ್ರಯೋಜನವಾಗುತ್ತದೆ ಮತ್ತು ಜನಗಳ ಆರೋಗ್ಯಸ್ಥಿತಿ ಉತ್ತಮಗೊಳ್ಳುತ್ತದೆ ಎಂಬುದನ್ನು ಸಚಿವರು ಯೋಚನೆ ಮಾಡಬೇಕಾಗಿದೆ.

ಶ್ರೀ ವೆಂಕಟೇಗೌಡ.—On a point of order. ಸಾಮಾನ್ಯವಾಗಿ ಮಾನ್ಯಸದಸ್ಯರು ಮಾತನಾಡುವಾಗ, ಈ ಸಭೆಯ ಘನತೆಯನ್ನು ನಾವು ಉಳಿಸಿಕೊಳ್ಳಬೇಕಾ ದರೆ ಅವರು ಮಾತನಾಡುವವರೆಗೂ ಮೌನದಿಂದಿದ್ದು ನಮಗೆ ಕಾಲಾವಕಾಶ ದೊರೆತಾಗ ಮಾತನಾಡಬೇಕಾ ಗಿದೆ. ಇನ್ನೊಬ್ಬ ಸದಸ್ಯರ ಅಭಿಪ್ರಾಯಗಳ ಮೇಲೆ ಆಗ ಟೀಕೆ ಮಾಡಬೇಕು. ಅದು ಬಿಟ್ಟು ಈ ಸಭೆಯಲ್ಲಿ ಹಾಸ್ಯ ರೂಪವಾಗಿ ಮಾತನಾಡಬಾರದು. ಇದಕ್ಕೆ ತಾವು ಅವಕಾಶ ಕೊಡಕೂಡದೆಂದು ಹೇಳುತ್ತೇನೆ.

ಅಧ್ಯಕ್ಷರು.—ಅದು ಉಪದೇಶ. ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಮ್ಮ ಸರ್ಕಾರದ ವರು ಸುಮ್ಮನೆ ಪಾನನಿರೋಧವನ್ನು ಜಾರಿಗೆ ತರುತ್ತೇ ವೆಂದು ಬಾಯಲ್ಲಿ ಹೇಳುತ್ತಿದ್ದಾರೆಯೇ ಹೊರತು ಕಾರ್ಯದಲ್ಲೇನೋ ಪೂರ್ತಿಯಾಗಿಪಾನನಿರೋಧವನ್ನು ಸಂಸ್ಥಾನಾದ್ಯಂತ ಜಾರಿಗೆ ತಂದಿಲ್ಲ. ಮುಖ್ಯ ನಗರ ವಾದ ನಮ್ಮ ಬೆಂಗಳೂರಿನಲ್ಲಿ ಇದನ್ನು ಇನ್ನೂ ಮುಂದು ವರಿಸಿಕೊಂಡು ಬರುತ್ತಿರುವ ನಮ್ಮ ಮಂತ್ರಿಗಳ ಉದ್ದೇಶವೇನೋ ನನಗಂತೂ ಅರ್ಥವಾಗಲಿಲ್ಲ. ತಿಪ ಟೂರು ಟೌನಿನೊಳಗೆ ಪಾನನಿರೋಧವನ್ನು ಜಾರಿಗೆ ತರುತ್ತೇವೆ ಎಂದು ಬಾಯಿಯಲ್ಲಿ ಹೇಳಿ ಕೇವಲ ಆರು– ಏಳು ಮೈಲಿಗಳ ಆಚೆಯೂ ಈ ಪಾನನಿರೋಧವನ್ನು ಜಾರಿಗೆ ತರದೆ ಹೋದರೆ ಏನಾಗುತ್ತದೆ, ಎಂದರೆ ಟೌನಿನ ಆರು-ಏಳು ಮೈಲಿ ದೂರದಲ್ಲಿ ಮೈಲಿಕಲ್ಲು ಆಚೆಗೆ ಹೆಂಡದ ಅಂಗಡಿಗಳಿದ್ದರೆ ಜನರಿಗೆ ನರಕ, ಟೌನಿ ನೊಳಗೆ ಇದ್ದರೆ ಜನರಿಗೆ ಸ್ವರ್ಗ-ಈ ರೀತಿಯಾಗುತ್ತದೆ. ಒಂದು ಕಡೆ ಹೆಂಡವನ್ನು ನಮ್ಮ ಸರ್ಕಾರದವರೇ ಮಾರುವಹಾಗೆ ಆರ್ಡರ್ ಮಾಡುವುದು, ಮತ್ತೊಂದು ಕಡೆ ಗಾಂಧೀ ತತ್ವದ ಪ್ರಕಾರ ಹೆಂಡವನ್ನ ಮಾರಲೇ ಬಾರದು ಎಂದು ಪಾನನಿರೋಧವನ್ನು ಜಾರಿಗೆ ತರು ವುದು, ಇದರಿಂದ ದೊಡ್ಡ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಷ್ಟಜೀವಿಗಳ ಆರೋಗ್ಯ ಹಾಳಾಗಿಹೋಗು ತ್ತದೆ. ಇದಲ್ಲದೆ ಈಗ ಪೋಲೀಸಿನವರು ತಿಂಗಳಿಗೆ ಇಷ್ಟೇ ಕೇಸುಗಳನ್ನು ಹಾಕಬೇಕು ಎಂದು ನಮ್ಮ ಸರ್ಕಾ ರದವರು ಸೂಚನೆ ಕೊಟ್ಟಿರುವ ಪ್ರಕಾರ, ಆ ಪೋಲೀಸಿ ನವರು ಅವನು ಕುಡಿಯಲಿ, ಕುಡಿಯದಿರಲಿ ನಾವು ತಿಂಗಳಿಗೆ 15 ಕೇಸುಗಳನ್ನಾದರೂ ಹಾಕಬೇಕೆಂಬ ಒಂದು ನಿಯಮವಿದೆಯೆಂದು ಹೇಳಿ ಕೇಸುಗಳನ್ನು ದಾಖಲ್ಮಾಡುತ್ತಿದ್ದಾರೆ. ಉದಾಹರಣೆಗಾಗಿ ಹೇಳು ವುದಾದರೆ, ಯಾವನಾದರೂ ಒಬ್ಬನು ತನ್ನ ದಿನಕೂಲಿ 1-1½ ರೂಪಾಯಿಯನ್ನು ತೆಗೆದುಕೊಂಡು ಗಾಂಜಾ, ಸಾರಾಯಿ ಅಂಗಡಿ ಕಡೆ ಬರುತ್ತಿದ್ದರೆ ಸಾಕು ಅವ ನನ್ನು ಹಿಡಿದು ಆ ದುಡ್ಡನ್ನು ಕಸಿದು ಕೊಳ್ಳುವ ಸಲು ವಾಗಿ ಅವನಮೇಲೆ ಕೇಸುಮಾಡುತ್ತೇನೆಂದು ಹೇಳಿ ಅವನನ್ನು ಭಯಪಡಿಸಿ ದುಡ್ಡನ್ನು ಕಿತ್ತುಕೊಳ್ಳುವುದು, ಹಾಗೆ ಒಂದುವೇಳೆ ಅವನು ಆ ದುಡ್ಡನ್ನು ಕೊಡದೇ ಇದ್ದರೆ, ಅವನಮೇಲೆ ಕೇಸುಹಾಕಿ, ಸಜವನ್ನೋ ಇಲ್ಲ ದಿದ್ದರೆ 15ರೂಪಾಯಿಗಳ ಜುಲ್ಮಾನೆಯನ್ನೋ ಹಾಕಿಸು ವುದು–ಇಂತಹ ನ್ಯೂನತೆಗಳನ್ನು ತಪ್ಪಿಸುವುದು ಸರ್ಕಾ ರದ ಮೊದಲನೆಯ ಕರ್ತವ್ಯವಾಗಿದೆ. ತಿಪಟೂರು ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿದೆ. ಅಲ್ಲಿಗೆ ಸುಮಾರು 40—50 ಮೈಲಿಗಳ ಸುತ್ತಲೂ ಕಾಲೇಜು ಗಳೇ ಇಲ್ಲ. ಈಗಿರತಕ್ಕ ಹೈಸ್ಕೂಲಿನವರಿಗೆ ಕಾಲೇಜು ಎನ್‌ಟ್ರೆನ್ಸಿಗೆ ಕಷ್ಟವಾಗಿದೆ. ಅದಕ್ಕಾಗಿ ಅಲ್ಲಿ ಒಂದು ಕಾಲೇಜನ್ನು ಕೊಡಬೇಕಾದುದು ಅತ್ಯವಶ್ಯಕ.

ರಸ್ತೆಗಳು ಬಹಳ ದುಸ್ಥಿತಿಯಲ್ಲಿವೆ. ಆ ಬಗ್ಗೆ ಹೆಚ್ಚು ನಿಗಾಕೊಡಬೇಕು.

ಸುಮಾರು 25 ವರ್ಷಗಳಿಂದಲೂ ಇಲ್ಲಿ ಒಂದು ಜನರಲ್ ಆಸ್ಪತ್ರೆ ಬೇಕಾಗಿದೆ ಎಂದು ಕೇಳುತ್ತಲೇ ಬಂದಿದ್ದೇವೆ. ಇಲ್ಲಿಗೆ ನಾಲ್ಕೈದು ಮೈಲಿಗಳ ಸುತ್ತಲೂ ಜನರಲ್ ಆಸ್ಪತ್ರೆಯೇ ಇಲ್ಲ. ಆದ್ದರಿಂದ ಜನಗಳ ಆರೋಗ್ಯ ದೃಷ್ಟಿಯಿಂದ ಇಲ್ಲಿ ಒಂದು ಜನರಲ್ ಆಸ್ಪತ್ರೆಯನ್ನು ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ.

ತಾವು ನನಗೆ ಮಾತನಾಡಲು ಕೊಟ್ಟಕಾಲದಲ್ಲಿ ಇನ್ನೂ ಐದು ನಿಮಿಷಗಳ ಮುಂಚೆಯೇ ನನ್ನ ಭಾಷಣ ವನ್ನು ನಾನು ಮುಗಿಸಿರಬಹುದು. ಆದರೆ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟುದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಇ. ರಾಮಯ್ಯ (ಸಿರುಗುಪ್ಪ).—ನಾನು ನಿನ್ನೆ ರಾಜ್ಯಪಾಲರು ಮಾಡಿದ ಭಾಷಣಕ್ಕಾಗಿ ಅವರನ್ನು ವಂದಿಸುತ್ತೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನೂ ಮತ್ತು ಈಗ ದೇಶದ ಮುಂದಿರುವ ಭಾರೀ ಸಮಸ್ಯೆಗಳು ಬಿಡುಗಡೆಯಾಗಲು ಏನು ಮಾಡಬೇಕು ಎಂಬ ಬಗ್ಗೆ ಅನೇಕ ಸೂಚನೆಗಳನ್ನೂ ಮಾಡಿದ್ದಾರೆ. ಆದರೆ ಈಗ ಕೇಂದ್ರ ಸರ್ಕಾರ ಮತ್ತು ನಮ್ಮ ಸಂಸ್ಥಾನದ ಸರ್ಕಾರ-ಎರಡೂ ಸೇರಿಕೊಂಡು ಒಮ್ಮತ ವಾದ ಅಭಿಪ್ರಾಯದಿಂದ ಕೆಲವು ಕೆಲಸಗಳನ್ನು ಮಾಡಬೇಕಾದ ಪ್ರಸಂಗವಾಗಿದೆ. ಇದರಲ್ಲಿ ನಮ್ಮ ಸರ್ಕಾರದವರು ಅನೇಕ ಜವಾಬ್ದಾರೀ ಕೆಲಸಗಳನ್ನು ನಿರ್ವಹಿಸಬೇಕಾಗಿದೆ. ಏಕೆಂದರೆ, ಈಗ ನಮ್ಮಲ್ಲಿ ನಾಲ್ಕು ಪ್ರಾಂತಗಳು ಒಟ್ಟುಗೂಡಿರುವುದರಿಂದ ಇವೊತ್ತಿನ ದಿವಸ ನಮಗೆ ನಾನಾ ಸಮಸ್ಯೆಗಳು ಎದ್ದು ಕಾಣುತ್ತಿವೆ.

4 P.M.

ಬಿಜಾಪುರ, ಗುಲ್ಬರ್ಗಾ, ರಾಯಚೂರು ಮುಂತಾದ ಬೈಲು ಪ್ರದೇಶಗಳಲ್ಲಿ ಪದೇ ಪದೇ ಕ್ಷಾಮ ಬೀಳುತ್ತದೆ. ಇದಕ್ಕೆ ತೀವ್ರ ಗಮನ ಕೊಡಬೇಕೆಂದು ಸೂಚಿಸು ತ್ತೇನೆ. ಆಹಾರ ಧಾನ್ಯಗಳ ಬೆಲೆಗಳು ಏರುತ್ತಿರುವು ದರಿಂದ ಈ ಸಮಸ್ಯೆ ಬಿಕ್ಕಟ್ಟಿನದಾಗ ಹತ್ತಿದೆ. ಒಂದು ಕೆರೆ ಒಂದು ಬಾವಿ ತೆಗೆಯಿಸಿದರೆ ಆಹಾರದ ಸಮಸ್ಯೆ ಬಿಡಿಸಿದಂತಾಗುವುದಿಲ್ಲ. ರೈತರಿಗೆ ಅಲ್ಪಾವಧಿ ಸಾಲ ಕೊಟ್ಟಮಾತ್ರಕ್ಕೆ ಅವರ ಸಮಸ್ಯೆಯು ಪರಿಹಾರವಾ ದಂತಾಗುವುದಿಲ್ಲ. ಹಳ್ಳಿಗಳಲ್ಲಿ ನಾನಾ ಸಮಸ್ಯೆಗಳು ಇವೆ. ಒಂದು ಕೆಲಸವನ್ನು ಕಾರ್ಯರೂಪಕ್ಕೆ ತರಬೇಕಾ ದರೆ ಮೊದಲು ಎಸ್ಟಿಮೇಟು ಆಗಬೇಕು. ಜನರಿಂದ ಮೊದಲು ಬೇಡಿಕೆ ಬರಬೇಕು. ಹೀಗೆ ಕಾಲ ವಿಳಂಬ ವಾಗುವುದು. ನಮ್ಮ ಭಾಗದಲ್ಲಿ 15-20 ಸಾವಿರ ಜನ ಸಂಖ್ಯೆಗೂ ಒಂದು ಆಸ್ಪತ್ರೆಯಾಗಿಲ್ಲ. ಬೆಂಗಳೂರು ಮೈಸೂರಂಥ ದೊಡ್ಡ ನಗರಗಳಲ್ಲಿ ಬೇಕಾದಷ್ಟು ಅನುಕೂಲತೆಗಳನ್ನು ಒದಗಿಸಲಾಗುತ್ತಿದೆ. ಆದರೆ

ಹಳ್ಳಿಗಳಲ್ಲಿ ಒಂದು ಶಾಲೆ ಒಂದು ಆಸ್ಪತ್ರೆ ಆಗುವುದಕ್ಕೆ ಕಷ್ಟವಾಗುತ್ತದೆ.

ಇತ್ತೀಚೆಗೆ ನಮ್ಮ ದೇಶದಲ್ಲಿಯ ಅರಣ್ಯ ಸಂಪತ್ತು ಕಡಿಮೆಯಾಗುತ್ತಾ ಬರುತ್ತಿದೆ. ಅರಣ್ಯ ಸಂಪತ್ತು ಕಡಿಮೆಯಾಗುತ್ತಾ ಹೋದಂತೆ ಮಳೆ ಕಡಿಮೆಯಾಗುತ್ತಾ ಹೋಗುತ್ತದೆ. ಇದರ ಪರಿಣಾಮವಾಗಿ ಕೆರೆಗಳು ಬತ್ತಿ ಹೋಗುವುವು. ಹೀಗಾಗುವದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಅರಣ್ಯ ಸಂಪತ್ತನ್ನು ವೃದ್ಧಿಗೊಳಿಸಲು ಸರ್ಕಾರ ತೀವ್ರಗಮನ ಕೊಡಬೇಕೆಂದು ಹೇಳಲಿಚ್ಛಿಸುತ್ತೇನೆ.

ಹಳ್ಳಿಗಳಲ್ಲಿ ಒಂದು ಕೆರೆ ಭಾವಿ ಆಗಬೇಕಾದರೆ ಬಹಳ ಕಷ್ಟವಾಗುತ್ತದೆ. ಜನರು ತಮ್ಮ ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಇಂಥ ಕೆಲಸಕ್ಕಾಗಿ ಒಂದು ಎಸ್ಟಿಮೇಟು ತಯಾರಾಗಿ ಬರಬೇಕಾದರೆ ಮೂರು ನಾಲ್ಕು ವರ್ಷಗಳು ಹಿಡಿಯುತ್ತವೆ. ಆಮೇಲೆ ಎಸ್ಟಿಮೇಟು ರಿವೈಜು ಆಗಬೇಕಾಗುತ್ತದೆ. ಹೀಗಾಗಿ ಕೆರೆಗಳ ಕೆಲಸವು ತೀವ್ರವಾಗಿ ಆಗುವುದಿಲ್ಲ. ಆದಕಾರಣ ಇಂಥ ಹಳ್ಳಿಗಳಲ್ಲಿಯ ಜನೋಪಯೋಗಿ ಕೆಲಸಗಳನ್ನು ಸರ್ಕಾರದವರೇ ಮಾಡಿಸಬೇಕೆಂದು ಸೂಚಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್ (ಭದ್ರಾವತಿ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರವರು ಉಭಯ ಸದನಗಳ ಸದಸ್ಯರನ್ನು ಕುರಿತು ಮಾಡಿದ ಭಾಷಣವನ್ನು ಸ್ವಾಗತಿಸುತ್ತಾ ರಾಜ್ಯಪಾಲರವರನ್ನು ಅಭಿನಂದಿಸುತ್ತೇನೆ. ರಾಜ್ಯಪಾಲರವರ ಭಾಷಣದಿಂದ ಮುಖ್ಯವಾಗಿ ಸರ್ಕಾರದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲವೆಂದು ಕಂಡು ಬಂದರೂ, ಉತ್ತಮವಾದಂಥ ಸಮಾಜವಾದೀ ಸಮಾಜ ರಚನೆ ಮಾಡುವ ದೃಷ್ಟಿಯಿಂದ ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳ ಎಲ್ಲ ಪಕ್ಷಗಳವರೂ ದ್ವಿತೀಯ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಿ ನೆರವೇರುವಂತೆ ಮಾಡಲು ತ್ಯಾಗ ಮಾಡಬೇಕೆಂದು ಅಪ್ಪಣೆ ಕೊಡಿಸಿರುವದು ಮತ್ತು ಯಾವ ಕಾರಣದಿಂದಲೂ ಯೋಜನೆಯನ್ನು ಮುಂದುವರಿಸಬಾರದೆಂದು ತಿಳಿಸಿದ್ದೂ ಸಂತೋಷಕರವಾದದ್ದು.

ಇನ್ನು ಕೆಲವು ವಿರೋಧಿ ಪಕ್ಷದ ಸದಸ್ಯರು ಪ್ರೊಹಿಬಿಷನ್ ವಿಷಯದಲ್ಲಿ ಸರ್ಕಾರವು ನಿರ್ಲಕ್ಷ ವಹಿಸಿದೆ ಎಂದು ಟೀಕಿಸಿದರು. ಮತ್ತು ಪ್ರೊಹಿಬಿಷನ್ ಇದು ವಿಲೇಜ್ ಇಂಡಸ್ಟ್ರೀ ಆಗಿದೆ ಎಂಬುದಾಗಿ ಸಹ ಟೀಕೆ ಮಾಡಿದರು. ಆದುದರಿಂದ ಪಾನ ನಿರೋಧವನ್ನು ತೆಗೆದುಹಾಕಿ, ಮದ್ಯಪಾನವನ್ನು ಪುನಃ ಜಾರಿಗೆ ತರಬೇಕೆಂದು ವಿರೋಧ ಪಕ್ಷದ ಸದಸ್ಯರು ಅಭಿಪ್ರಾಯಪಟ್ಟರು. ಅವರ ಆಕ್ಷೇಪಣೆ ಒಂದು ವೇಳೆ ಸರಿಯಾದುದು ಎಂದು ಅಭಿಪ್ರಾಯಪಟ್ಟರೂ ಪುನಃ ಜಾರಿಗೆ ತರಬೇಕೆಂಬ ವಿಷಯದ ಬಗ್ಗೆ ನನ್ನ ಸಂಪೂರ್ಣ ವಿರೋಧವಿದೆ. ಮಹಾತ್ಮಾ ಗಾಂಧೀಜಿಯವರು ಹಿಂದುಳಿದ ಜನಾಂಗದವರ ಉದ್ಧಾರಕ್ಕಾಗಿ ಸಂಪೂರ್ಣ ಪಾನ ನಿರೋಧ ಜಾರಿಗೆ ತರಬೇಕೆಂದು ಹೇಳಿದ್ದಾರೆ. ಪಾನ ನಿರೋಧ ತಂದದ್ದರಿಂದ ಹಿಂದುಳಿದ ಸಮಾಜವು ಕ್ರಮಕ್ರಮವಾಗಿ ಮುಂದುವರಿಯುತ್ತಿದೆ. ಇದರ ಅನುಭವ ನಮಗೆ ಪ್ರತ್ಯಕ್ಷವಾಗಿ ಕಾಣುತ್ತಿದೆ. ಹಿಂದಿನ ಚರಿತ್ರೆಯನ್ನೂ ಇತಿಹಾಸದ ಘಟಗಳನ್ನೂ ತಿರುವಿ ನೋಡಿದರೆ ಹಿಂದುಳಿದ ಅವಿದ್ಯಾವಂತ ಮೂಢ ಜನಾಂಗದವರಿಗೆ ಮಾದಕ ಪದಾರ್ಥಗಳನ್ನು ಸೇವಿಸಲು ಪ್ರೋತ್ಸಾಹ ಕೊಟ್ಟು, ತಮ್ಮ ಹಿತಸಾಧನೆಗಾಗಿ ರಾಜ್ಯಗಳನ್ನೂ ಕೋಟೆ ಕೊತ್ತಳಗಳನ್ನೂ ಮಠಗಳನ್ನೂ ಭಾರಿ ಜಮೀನುಗಳನ್ನೂ ಉಳಿಸಿಕೊಂಡು ಬಂದು ಬುದ್ಧಿವಂತಿಕೆಯಿಂದ ತಮ್ಮ ಹಿತಸಾಧಿಸಿಕೊಂಡು ಬಂದು, ವಿದ್ಯಾರ್ಜನೆಮಾಡಿ, ಆರ್ಥಿಕವಾಗಿ ಮುಂದುವರಿದಿರುವ ನೀವುಗಳು, ಪುನಃ ಹಿಂದುಳಿದ ಸಮಾಜದವರ ಹಿತಕ್ಕಾಗಿಯೇ ಎಂದು ಪಾನ ಜಾರಿಗೆ ತರುವುದು ಬೇಡ. ಬುದ್ಧಿವಂತರಾದ ನೀವುಗಳು ಅಂದರೆ ವಿರೋಧ ಪಕ್ಷದವರು ಕುಡುಕಾನ ಜಾರಿಗೆ ತರಬೇಕೆಂದು ಜನತೆಯಲ್ಲಿ ಓಟುಗಳನ್ನು ಗಳಿಸುವ ವಿಷಯದ ಮೇಲೆ ಕೇಳಿದರೆ ಮತ ಕೊಡುವದು ಖಂಡಿತ. ಇದಕ್ಕೆ ಕಾರಣವೇನೆಂದರೆ ಹಿಂದುಳಿದ ಸಮಾಜದ ಅಜ್ಞಾನ ಮೌಢ್ಯ ಮತ್ತು ಮಾದಕ ಪದಾರ್ಥಗಳ ಮೇಲಿನ ಅವರ ಆಶೆಯೇ ಕಾರಣವಾಗಿರುವುದರಿಂದ ಇಂಥ ಪ್ರಶ್ನೆಗಳನ್ನು ತಿಳಿದವರ ತೀರ್ಮಾನದಿಂದ ಬಗೆಹರಿಸಬೇಕಾದದ್ದು ಸತ್ಯ ಮತ್ತು ನ್ಯಾಯ. ಈ ಕಾರಣದಿಂದ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರಬೇಕೆಂಬುಹೇ ನನ್ನ ಸ್ಪಷ್ಟವಾದ ಅಭಿಪ್ರಾಯ.

ಸರ್ಕಾರದವರಾದರೂ ಬಡವರ ವಿಷಯಕ್ಕೆ ಇರುವ ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳಬೇಕು. ಸರ್ಕಾರದವರು ಭೂಮಿಯನ್ನು ಕೊಡುವ ವಿಷಯದಲ್ಲಿ ಬಡವರಿಗೆ ನೆರವು ದೊರೆಯಬೇಕು. ರೆವೆನ್ಯೂ ಇಲಾಖೆಯವರು ಬಡಜನರಿಗೆ ಜಮೀನ್ ಕೊಡುವಾಗ, ಅವರು ಮಾಡುವ ರಿಕಾರ್ಡುಗಳಿಂದ ಬಹಳ ತೊಂದರೆಯಾಗುತ್ತಾ ಇದೆ. ಜಮೀನು ದರಖಾಸ್ತಿಗೆ ಅರ್ಜಿ ಹಾಕಿ ಕೊಂಡರೆ ಅಮಲ್ದಾರರಿಂದ ದರಖಾಸ್ತಕ್ಲರ್ಕ್, ರೆವೆನ್ಯೂ ಇನ್‌ಸ್ಪೆಕ್ಟರ್ ಶ್ಯಾನುಭೋಗರಿಂದ ತನಿಖೆ ಇತ್ಯಾದಿಗಳು ಜರುಗಿ ಕೈಸೇರಲು ಬಡವನು ಈ ಎಲ್ಲಾ ಭಾಗಗಳಲ್ಲಿ ಓಡಾಡಿ ಇನ್ನೂ ಹಣ್ಣಾಗುತ್ತಾನೆ. ಲಂಚ ರುಷುವತ್ತುಗಳಂತೂ ಇದ್ದೇ ಇವೆ. ಹೀಗೆ ಆಗಬಾರದು. ಇಲಾಖೆಯ ಸರ್ವೆಯರ್ ಇಲಾಖೆಯ ರೆವೆನ್ಯೂ ಇನ್‌ಸ್ಪೆಕ್ಟರ್ ಇರುವಾಗ ಯಾವ ಗ್ರಾಮದಲ್ಲಿ ಸಾಗುವಳಿಗೆ ಕೊಡುವ ಜಮೀನ್ ಇದೆಯೋ ಸದರಿ ಜಮೀನನ್ನು ಮುಂಚಿತವಾಗಿಯೇ ವಿಂಗಡಿಸಿ, ಸಿದ್ಧಪಡಿಸಿ ಆಯಾ ಅಮಲ್ದಾರರವರು ಅಲ್ಲಿನ ಪಂಚಾಯಿತಿಯವರ ಅಭಿಪ್ರಾಯದ ಮೂಲಕ ಜಮೀನು ಇಲ್ಲದವನಿಗೆ ಓಡಾಡದಂತೆ ಆತನಿಗೆ ಕೊಟ್ಟರೆ ಆತನು ತೃಪ್ತನಾಗುತ್ತಾನೆ. ಈ ರೀತಿಯ ಸಹಾಯಗಳನ್ನು ಎಲ್ಲ ಇಲಾಖೆಯ ನೆರವನ್ನು ಮನೆಯ ಬಾಗಿಲಿಗನಲ್ಲೇ ಕೊಟ್ಟರೆ, ಅವನು ಕುಡುಕ ಆಗಲಾರನು. ಮುಖ್ಯವಾಗಿ ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ವಿದ್ಯಾಭಿವೃದ್ಧಿಯನ್ನು ಹೆಚ್ಚಿಸಿ ಜನತೆಯನ್ನು ಉತ್ತಮಪಡಿಸಿದರೆ ಪ್ರೊಹಿಬಿಷನ್ ಯಶಸ್ವಿಯಾಗುತ್ತದೆ, ನಮ್ಮ ದೇಶದ ಮಹಾನಾಯಕರು ಹೇಳುವ ಸಮತಾವಾದ ಸಮಾಜ ರಚನೆಗೆ ದಾರಿಯಾಗುತ್ತದೆ. ಹಿಂದುಳಿದ ವರ್ಗದ ಬಡವರಿಗೆ ಜಮೀನುಗಳನ್ನು ಕೊಡುವಾಗ ಜಾತಿಯ ಅಭಿಮಾನವುಳ್ಳ ಅಧಿಕಾರಿಗಳಿಂದಲೂ ಅಡಚಣೆಯಾಗುತ್ತಿದೆ. ವಿನಾ ಕಾರಣ ಅಡ್ಡಿ ಆತಂಕಗಳನ್ನು—query—ಹಾಕುತ್ತಾರೆ. ಉದಾಹರಣೆಗೆ ಬೋವಿ ಜನಾಂಗದವರು ಕೂಲಿ ಕೆಲಸ ಮಾಡಿಕೊಂಡು ಇರುವರು. ಅವರಿಗೆ ಜಮೀನು ಇರುವದಿಲ್ಲ. ಇವರು ನಮಗೆ ಜಮೀನು ಕೊಡಬೇಕೆಂದು ಅರ್ಜಿ ಗುಜರಾಯಿಸಿದರೆ bona fide agriculturist ಇವರು ಅಲ್ಲ ಎಂಬುದಾಗಿ ಜಮೀನು ಕೊಡುವುದು ಸಾಧ್ಯವಾಗುವುದಿಲ್ಲ ಎಂದು ಅಧಿಕಾರಿಗಳು endorsement ಕೊಡುತ್ತಿರುವುದು ಸರಿಯೋ? ಈ ರೀತಿಯಾಗಿ ಅವಿದ್ಯಾವಂತರಾದ ಬಡಜನರಿಗೆ ಆಗುತ್ತಿರುವ ಕಿರುಕುಳ ತಪ್ಪಬೇಕು.

(ಶ್ರೀ ಡಿ. ಟಿ. ಸೀತಾರಾಮರಾವ್.)

ಮುಂದುವರಿದ ಜನ, ಅಧಿಕಾರದಲ್ಲಿರುವ ಜನ, ಬಡಜನತೆಯ ನೆರವಿಗಾಗಿ ದುಡಿದರೆ ಎಲ್ಲ ಯೋಜನೆಗಳೂ ಯಶಸ್ವಿಯಾಗಿ ಸಮಾಜ ಉತ್ತಮವೆನಿಸುತ್ತದೆ. ಯಾವುದಕ್ಕೂ ಸರ್ಕಾರವನ್ನೇ ಟೀಕಿಸುವುದು ಅರ್ಥವಿಲ್ಲದವಾದ.

ಕಾರ್ಖಾನೆಯಲ್ಲಿ ಕಡಮೆ ವೇತನ ಪಡೆಯುವ ಕೂಲಿಕಾರರು ತಮ್ಮ ನಿವೃತ್ತಿಯ ವೇಳೆಯಲ್ಲಿ ವ್ಯವಸಾಯದ ಮೇಲೆ ನಿಲ್ಲಲು ಅನುಕೂಲವಾಗುವಂತೆ ಅವರಿಗೆ ಜಮೀನುಗಳನ್ನು ಕೊಡಬೇಕು. ಸರ್ಕಾರಿ ನೌಕರರ ಸಾಗುವಳಿ ಮಾಡುವವರು ಅಲ್ಲವೆಂದು ಜಮೀನು ಕೊಡುವುದು ನಿಲ್ಲಿಸಿದ್ದಾರೆ. ಇದು ತಪ್ಪಬೇಕು. ಕಾರ್ಮಿಕರು ಕಾರ್ಖಾನೆಯ ಕೆಲಸದ ನಂತರ part-timeನಲ್ಲಿ ಭೂಮಿ ಸಾಗು ಮಾಡುವರು.

ನನ್ನ ಕ್ಷೇತ್ರಕ್ಕೆ ಸೇರಿದ ಚೆನ್ನಗಿರಿ ತಾಲ್ಲೂಕಿನ ಉಬ್ರಾಣಿ ಹೋಬಳಿಯು ಗುಡ್ಡಗಾಡಿನ ಮಧ್ಯೆ ದ್ವೀಪದಂತಿದೆ. ಇಲ್ಲಿ ಗ್ರಾಮಾಂತರ ರಸ್ತೆಗಳು ಇಲ್ಲ. ವೈದ್ಯಕೀಯ ಸೌಕರ್ಯವಿಲ್ಲ. ಈ ಭಾಗದಲ್ಲಿ ಒಂದು ಹೆಲ್ತ್ ಯೂನಿಟ್ ಕೊಡಬೇಕು.

ಶಿವಮೊಗ್ಗ ಜಿಲ್ಲೆಯು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸರ್‌ಪ್ಲಸ್ ಏರಿಯಾ ಎಂದು ಒಪ್ಪಿಕೊಂಡರೂ ಅಲ್ಲಿಂದ ಹೊರಗಡೆಗೆ ಆಹಾರ ಧಾನ್ಯಗಳ ಸಾಗಾಣಿಕೆಯಿಂದಲೂ, ಲಕ್ಕವಳ್ಳಿ ತುಂಗಾ ಅಣೆಕಟ್ಟು ಭದ್ರಾವತಿಯಲ್ಲಿ ಹೊಸ ಪ್ಲ್ಯಾಂಟುಗಳ ಜೋಡಣೆ ಮತ್ತು ನಾಲಾ ಕೆಲಸಗಳ ಮೂಲಕ ಜನವಸತಿ ಹೆಚ್ಚಾಗಿದ್ದು ಆಹಾರ ಧಾನ್ಯಗಳ ಕೊರತೆಯಾಗಿದೆ. ಆದಕಾರಣ ಭದ್ರಾವತಿಯಲ್ಲಿ fair price shopಗಳನ್ನು ತೆರೆಯಬೇಕು ಎಂದು ಸೂಚಿಸುತ್ತೇನೆ.

ಪಂಚಾಯಿತಿಯವರು ಅಥವಾ ತಾಲ್ಲೂಕು ಅಧಿಕಾರಿಗಳು ಆಹಾರ ಧಾನ್ಯಗಳನ್ನು ಹಂಚಿದರೆ ಅನುಕೂಲವಾಗಬಹುದು. ಈಗ ಬಡವರಿಗೆ ಮನೆ ಸೌಕರ್ಯವಿಲ್ಲ. ಆದ್ದರಿಂದ ಅವರಿಗೆ ಸೌಲತ್ತು, ಸೌಲಭ್ಯ ಮೊದಲು ಒದಗಿಸಬೇಕು. ಹಾಗೆ ಸರ್ಕಾರ ಮಾಡಿದರೆ ಒಳ್ಳೆಯದು. ನಿಜವಾಗಿಯೂ ಸರ್ಕಾರದ ಮೇಲೆ ಆಕ್ಷೇಪವಿಲ್ಲ; ಬಡವನಿಗೆ ಅನುಕೂಲವಾಗುವ ಅವಕಾಶವಿಲ್ಲದಿರುವದರಿಂದ ನ್ಯೂನತೆ ಸರಿಪಡಿಸಬೇಕೆಂದು ಹೇಳುತ್ತಿದ್ದೇನೆಯೇ ವಿನಾ ಇನ್ನೇನೂ ಇಲ್ಲ.

ಮಲೆನಾಡು ಅಭಿವೃದ್ಧಿ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ. ಈಗ ಡಿವಿಜನಲ್ ಆಫೀಸು ಮೈಸೂರಿನಲ್ಲಿದೆ. ಅದು ಕರ್ಣಾಟಕಕ್ಕೆ ಸಂಬಂಧಪಟ್ಟ ಹಾಗೆ ಮಧ್ಯಭಾಗದಲ್ಲಿದ್ದರೆ ಉತ್ತಮ. ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟ ಅಡ್ವೈಸರಿ ಕಮಿಟಿ ಅಥವಾ ಬೋರ್ಡು ಏರ್ಪಡಿಸಿ ಅಲ್ಲಿರುವ ಸಾರಿಗೆಸಂಪತ್ತು, ಖನಿಜಗಳು ಉಪಯೋಗಿಸಿಕೊಳ್ಳಲು ದಂಡೇಲಿಯ ಬಳಿ ಖನಿಜಸಂಪತ್ತಿದೆಯೆಂದು ಹೇಳಿದ್ದಾರೆ. ಅದನ್ನು ಕ್ರೋಡೀಕರಿಸಿ ದೇಶದ ಏಳಿಗೆಯನ್ನು ಸಾಧಿಸಬೇಕು. ಮಲೆನಾಡು ಬಗ್ಗೆ ಎಷ್ಟು ಅಲಕ್ಷ್ಯ ಮಾಡಿದ್ದಾರೆಂಬುದನ್ನು ಈ ದಿವಸ ಹೇಳುತ್ತಿದ್ದೇನೆ. ಆರೋಗ್ಯ ಕೇಂದ್ರಗಳ ಅಂಕಿಅಂಶ ಕೊಟ್ಟಿದ್ದಾರೆ. ಅದನ್ನು ನೋಡಿದರೆ ಶಿವಮೊಗ್ಗ ಜಿಲ್ಲೆಯನ್ನು ಬಹಳ ನಿಕೃಷ್ಟವಾಗಿ ಕಂಡಿದ್ದಾರೆಂಬುದು ಗೊತ್ತಾಗುತ್ತದೆ. ನಾನು ಭದ್ರಾವತಿ ತಾಲ್ಲೂಕಿನಿಂದ ಬಂದಿರುವ ಪ್ರತಿನಿಧಿ. ಶಿವಮೊಗ್ಗ ತಾಲ್ಲೂಕಿನಲ್ಲಿ ಆರೋಗ್ಯ ಕೇಂದ್ರಗಳನ್ನು ತೆರೆಯುವ ವಿಚಾರದಲ್ಲಿ ಅಲಕ್ಷ್ಯ ಮಾಡಿದ್ದಾರೆಂದು ಗೊತ್ತಾಗುತ್ತದೆ.

ಮಲೆನಾಡಿನ ಕೈಗಾರಿಕೆಗಳಲ್ಲಿ ನೌಕರಿಗೆ ಸೇರಿಸುವಾಗ ಆಯಾ ಜಿಲ್ಲೆಯವರಿಗೆ ಪ್ರಾಮುಖ್ಯತೆ ಕೊಡಬೇಕೆಂದು ಅರಿಕೆಮಾಡುತ್ತೇನೆ, ಏಕೆಂದರೆ ಕಾಂಗಾರಿಗಳು ನಡೆಯುವ ಕಡೆ ನಿರುದ್ಯೋಗ ತಲೆಹಾಕಿರುವಾಗ ಅಲ್ಲಿನ ಜನರಿಗೇ ಪ್ರಾಶಸ್ತ್ಯ ಕೊಡುವುದರಿಂದ ಸ್ವಾಭಿಮಾನವಿರುವುದರಿಂದ ಅನುಕೂಲವಾಗುತ್ತದೆ. ಆದ್ದರಿಂದ ಆಯಾ ಭಾಗದ ಜನರಿಗೇ ಮಾನ್ಯತೆ ಕೊಡಬೇಕೇ ವಿನಾ ಹೊರಗಿನ ಜನರನ್ನು ತರಬಾರದು, ಅಲ್ಲಿರುವ ಸಣ್ಣಪುಟ್ಟ ಕೂಲಿ ಕೆಲಸಮಾಡುವವರಿಗೂ ಅವಕಾಶ ಕೊಡಬೇಕು. ಹೀಗೆ ಪ್ರತಿಯೊಂದು ವಿಷಯದಲ್ಲೂ ಮಲೆನಾಡಿನ ಅಭಿವೃದ್ಧಿಗೆ ಗಮನಕೊಡಬೇಕು. ಇಷ್ಟು ಹೇಳಿ ಈ ಭಾಷಣಕ್ಕಾಗಿ ವಂದನೆಯನ್ನರ್ಪಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಬಗ್ಗೆ ವಂದನೆಗಳನ್ನರ್ಪಿಸುವ ಈ ನಿರ್ಣಯವನ್ನು ಅನುಮೋದಿಸಿ ನನ್ನ ಕೆಲವು ಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ. ರಾಜ್ಯಪಾಲರ ಭಾಷಣ ಕನ್ನಡದಲ್ಲೇ ಇರಬಹುದೆಂದು ನಾನು ಭಾವಿಸಿದ್ದೆ.

ಅಧ್ಯಕ್ಷರು.—ಅದನ್ನು ವಿಚಾರಮಾಡಿ ಇಂಗ್ಲೀಷಿನಲ್ಲೇ ಇರಬೇಕೆಂದು ಇತ್ಯರ್ಥಮಾಡಲಾಗಿದೆ.

ಶ್ರೀ ಎ. ಜೆ. ದೊಡ್ಡಮೇಟಿ.—ರಾಜ್ಯಪಾಲರು ತಮ್ಮ ಭಾಷಣದಲ್ಲಿ ಧಾನ್ಯ ಸಂಗ್ರಹದ ಮಳಿಗೆಗಳನ್ನು ಹುಬ್ಬಳ್ಳಿಯಲ್ಲೂ ಬೇಗ ಏರ್ಪಾಡುಮಾಡಲಾಗುವುದೆಂದು ಹೇಳಿದ್ದಾರೆ. ಈ ಆಶ್ವಾಸನ ಸುಮಾರು ಎರಡು ತಿಂಗಳಲಾಗಾಯ್ತು ಬೇರೆ ಬೇರೆ ಇಲಾಖೆಗಳಿಂದ ಬರುತ್ತಿದೆ, ಆದರೆ ಇನ್ನೂ ಅಲ್ಲಿ ಮಳಿಗೆ ಏರ್ಪಟ್ಟಿಲ್ಲ, ಧಾನ್ಯಸಂಗ್ರಹ ಆಗಿಲ್ಲ. ಉತ್ತರ ಕರ್ಣಾಟಕದವರಿಗೆ ಮದ್ರಾಸಿನಿಂದ ಧಾನ್ಯ ಬರಬೇಕಾಗುತ್ತದೆ. ಹಾಗೆ ತರಲು ರೈಲ್ವೆ ಸೌಕರ್ಯವಿಲ್ಲ. ಬೆಳಗಾಂನಲ್ಲೂ ಧಾನ್ಯ ಸಂಗ್ರಹವಾಗಿಲ್ಲ. ಆದ್ದರಿಂದ ಉತ್ತರ ಕರ್ಣಾಟಕದಲ್ಲಿ ಧಾನ್ಯ ಸಂಗ್ರಹದ ಅಭಾವದಿಂದ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ತಕ್ಷಣ ಹುಬ್ಬಳ್ಳಿಯಲ್ಲಿ ಮಳಿಗೆ ತೆರೆಯಬೇಕು. ಇದಕ್ಕೆ ಹೆಚ್ಚು ಗಮನ ಕೊಡಬೇಕು ಎಂದು ಸರ್ಕಾರಕ್ಕೆ ಸೂಚಿಸುತ್ತೇನೆ.

ಇನ್ನು ದುಷ್ಕಾಲಕಾಮಗಾರಿಗಳಿವೆ, ಅವು ಬಿಜಾಪುರ, ಬೆಳಗಾಂ ಮತ್ತು ಧಾರವಾಡ ಜಿಲ್ಲೆಗಳಲ್ಲಿ ನಡೆಯುತ್ತಿವೆ ಆ ವಿಭಾಗದಲ್ಲಿಯೂ ರೆಡ್ ಟೇಪಿಸಂ ಬಹಳವಾಗಿದೆ. ಬರಗಾಲ ಕಾಮಗಾರಿಗಾಗಿ ನಮ್ಮ ತಾಲ್ಲೂಕಿನಲ್ಲಿ 50 ಸಾವಿರ ರೂಪಾಯಿಗಳನ್ನು ಮಂಜೂರುಮಾಡಿ ನಾಲ್ಕು ಕಾಮಗಾರಿಗಳನ್ನು ನಡೆಸಲು ಏರ್ಪಾಡು ಮಾಡುತ್ತಿದೆ ಎಂದು ಕಮಿಷನರು ಅನೌಪಚಾರಿಕ ಸಭೆಯಲ್ಲಿ ತಿಳಿಸಿದರು. ಆದರೆ ಅಫಿಷಿಯಲ್ ಸ್ಯಾಂಕ್ಷನ್ ಮೊನ್ನೆ 9ನೆಯ ತಾರೀಖುವರೆಗೂ ಕೇವಲ ಎರಡು ಕಾಮಗಾರಿಗಳಿಗೆ ಮಾತ್ರ ಆಗಿದೆ, ಇನ್ನೂ ಎರಡರ ಬಗ್ಗೆ ವಿಚಾರ ಮಾಡಬೇಕಾಗಿದೆ ಎಂದು ಹೇಳುತ್ತಾರೆ. ಕೆರೆ ಕಾಮಗಾರಿ ಮುಂತಾದುವನ್ನು ಈಗಿರುವ ಕಾರ್ಯಕ್ರಮದಂತೆ ಮಾಡಲೇಬೇಕು, ನೀರಿನ ಸೌಕರ್ಯಕ್ಕೆ ತೊಂದರೆಮಾಡಬಾರದು. ಮುಖ್ಯವಾಗಿ ಬರಗಾಲದ ಕೆಲಸ ಮಾಡುವಾಗ ರೆಡ್ ಟೇಪಿಸಂ ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಕೈ ಜೋಡಿಸಿ ಪ್ರಾರ್ಥನೆಮಾಡುತ್ತೇನೆ. ಇನ್ನು ಮಾರ್ಗ ಸೌಕರ್ಯದ ವಿಚಾರ ನೀರಾವರಿ ವಿಚಾರ ಹೇಳಿದ್ದಾರೆ. ಉತ್ತರ ಕರ್ಣಾಟಕದಲ್ಲಿ ಕೆಲವು ಮಾರ್ಗಗಳನ್ನು ರಚಿಸುವ ಯೋಜನೆ ಮಾಡುವುದಾಗಿ ತಿಳಿಸಿದ್ದಾರೆ. ಆದರೆ ಅದರ ವಿವರವಿಲ್ಲ. ಕೆಲವು ಕಡೆ ಈ ಸೌಕರ್ಯದ ಅಗತ್ಯವಿದೆ. ಬೆಳಗಾಂ, ಧಾರವಾಡ, ರಾಯಚೂರು ಕೂಡಿಸುವಂತೆ ಒಂದು ರಸ್ತೆ, ರಾಮದುರ್ಗ-ಗಜೇಂದ್ರ

ಗಡ್ ಮಾರ್ಗವಾಗಿ ಒಂದು ರಸ್ತೆ ಅಗತ್ಯವಾಗಿದೆ. ಇಲ್ಲಿ ಕೆಲವು ಭಾಗದ ಕೆಲಸವಾಗಿದೆ. ಅದನ್ನು ಪೂರ್ಣವಾಗಿ ಮಾಡಿಕೊಡಬೇಕು. ಬಿಜಾಪುರ ಜಿಲ್ಲೆ ಮತ್ತು ಧಾರವಾಡ ಜಿಲ್ಲೆ ಮಧ್ಯೆ ಘಟಪ್ರಭಾ ನದಿಗೆ ಸೇತುವೆ ಕಟ್ಟಬೇಕು. ಆದ್ದರಿಂದ ಬಿಜಾಪುರ ಜಿಲ್ಲೆ ಮತ್ತು ಬೆಂಗಳೂರು-ಈ ಮಧ್ಯೆಯಿರುವ ಮಾರ್ಗ ಸುಗಮವಾಗುತ್ತದೆ. ಮೊನ್ನೆ ನಾನು ಬೆಂಗಳೂರಿಗೆ ಬರುವಾಗ್ಗೆ ಪಾಲ—ಬದಾಮಿ ಮಾರ್ಗದಲ್ಲಿರುವ ಹಳ್ಳಿಗಳು ಪ್ರವಾಹದ ದೆಸೆಯಿಂದ 24 ತಾಸು ಪ್ರಯಾಣ ಮುಂದೂಡಬೇಕಾಯಿತು. ಗದಗ್ ಹತ್ತಿರ ಈ ತೊಂದರೆಯಾಯಿತು, ಈ ಅನುಭವ ಎಗ್ಜಿಕ್ಯುಟಿವ್ ಇಂಜನಿಯರು ಹೇಳಿದರು. ಹೀಗೆ ಅಲ್ಲಿ (ಗದಗ—ಕೊಚುಮಸಗಿ) ಭಯಾನಕ ಪರಿಸ್ಥಿತಿಯಿದೆ, ದಾರುಣ ಪರಿಸ್ಥಿತಿಯಿದೆ. ಆ ಕ್ಷೇತ್ರದಿಂದ ಪ್ರತಿನಿಧಿಗಳಾಗಿ ಬಂದಿರುವ ನಮಗೆ ನಾಚಿಕೆಯಾಗುತ್ತಿದೆ. ಆ ರೀತಿ ಇರುವ ಪರಿಸ್ಥಿತಿ ತಪ್ಪಿಸಲು ತೀವ್ರಗಮನಕೊಡಬೇಕು.

ಇನ್ನು ಕೆರೆಗಳ ವಿಚಾರದಲ್ಲಿ ಸ್ವಲ್ಪ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ. 500 ಕೆರೆಗಳನ್ನು ನಮ್ಮ ಭಾಗದಲ್ಲಿ ದುರಸ್ತುಮಾಡುವುದಕ್ಕೆ ಯೋಚನೆ ಮಾಡಿದ್ದಾರೆಂದು ತಿಳಿದು ಬಂತು. ಇದಕ್ಕಾಗಿ ನನ್ನ ಧನ್ಯವಾದಗಳು. ಈ ಕೆರೆಗಳು ಯಾವಯಾವುವೆಂದು ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು.

ಆಮೇಲೆ ಆರೋಗ್ಯಧಾಮಗಳ ವಿಚಾರ. ಇತ್ತಕಡೆ 18,000-20,000 ಜನಸಂಖ್ಯೆಗೊಂದು ಆರೋಗ್ಯ ಧಾಮವಿದೆ. ನಮ್ಮ ಕರ್ನಾಟಕದಲ್ಲಿ ಸಾರ್ವಜನಿಕ ಆರೋಗ್ಯಧಾಮಗಳ ಸಂಖ್ಯೆ ಬಹಳ ಕಡಮೆ. ಸರ್ಕಾರದವರು ದಯವಿಟ್ಟು ಒಂದು ತಾಲ್ಲೂಕಿಗೆ ಎರಡರಂತಾದರೂ, 50,000 ಜನ ಸಂಖ್ಯೆಗೆ ಒಂದರಂತೆಯಾದರೂ ಆಸ್ಪತ್ರೆಯನ್ನೇರ್ಪಡಿಸಿದರೆ ಬಹಳ ಸಹಾಯಮಾಡಿದಂತಾಗುತ್ತದೆಂದು ನಾನು ಹೇಳ ಬಯಸುತ್ತೇನೆ.

ಇನ್ನು ಕೊನೆಯದಾಗಿ ನನ್ನ ಮಾತು ಮುಗಿಸುವ ಮುನ್ನ ಶ್ರೀಮಾನ್ ಸುಂಠಣ್‌ಕರ್‌ರವರು ಹೇಳಿದ ವಿಷಯಕ್ಕೆ ಉತ್ತರವಾಗಿ ಒಂದು ಮಾತು ಹೇಳ ಬಯಸುತ್ತೇನೆ. ಅವರು ಬೆಳಗಾಂ ಮತ್ತು ಕಾರ್‌ವಾರ್ ವಿಚಾರ ಹೇಳಿದರು. ಬೆಳಗಾಂಗಿಂತಲೂ ಕಾರವಾರದ ವಿಚಾರ ಹೆಚ್ಚು ಅವರು ವಾದಿಸಿದರು. ಕಾರವಾರದ ಭಾಗದ ವಿಚಾರದಲ್ಲಿ ನನ್ನ ಸ್ನೇಹಿತರಾದ ಶ್ರೀಮಾನ್ ಕಾಮತ್‌ರವರೂ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅವರು ಹೇಳಿದ್ದನ್ನು ಕೇಳಿದಮೇಲಾದರೂ ಮಾನ್ಯ ಮಿತ್ರರು ಕಾರವಾರದ ವಿಚಾರ ಹೇಳುವುದನ್ನು ಬಿಟ್ಟರೆ ದೊಡ್ಡ ಉಪಕಾರಮಾಡಿದಂತಾಗುತ್ತದೆ. ಅಲ್ಲದೆ, ಅವರು ಒಂದು ಮಾತು ಮುಖ್ಯವಾಗಿ ಲಕ್ಷ್ಯದಲ್ಲಿಡಬೇಕಾಗಿದೆ. ರಾಜ್ಯಪುನರ್ವಿಂಗಡಣೆಯು ಕೇವಲ ಭಾಷಾವಾರು ಆಧಾರದ ಮೇಲೆ ಮಾಡಲ್ಪಟ್ಟಿದ್ದಲ್ಲ. ಹಾಗವರು ಮಾಡಿದ್ದರೆ ಮುಂದೆ ಬಹಳ ತೊಂದರೆಯಾಗುತ್ತಿತ್ತು. ಭಾಷೆಯೇ ಆಧಾರವಾದರೆ ಬೆಳಗಾಂನಲ್ಲಿರುವ ಜಿನ್ನಾ ಚೌಕವನ್ನು ಪಾಕಿಸ್ತಾನಕ್ಕೆ ಕಳುಹಿಸಿಕೊಡಬೇಕಾಗುತ್ತದೆ. ಆಡಳಿತ ಸೌಕರ್ಯವೂ ಒಂದು ಮುಖ್ಯ ಆಧಾರ ಈ ವಿಭಜನೆಗೆಲ್ಲಾ. ಅಲ್ಲದೆ ಅವರಲ್ಲಿ ಆಡಿದ ವಾದಗಳನ್ನೆಲ್ಲಾ ಅವರು ಎಸ್.ಆರ್.ಸಿ. ಕಮಿಟಿಯವರ ಮುಂದೆಯೂ, ಪಾರ್ಲಿಮೆಂಟ್ ಮುಂದೆಯೂ, ಕೊನೆಗೆ ಪ್ರಧಾನ ಮಂತ್ರಿ ನೆಹ್ರೂ ಅವರ ಮುಂದೆಯೂ ಹೇಳಿದ್ದಾರೆ. ಎಲ್ಲರ ಮುಂದೆಯೂ ಹೋಗಿ ತಮ್ಮ ಅಭಿಪ್ರಾಯವನ್ನು ಕೊಟ್ಟಮೇಲೆ ಅವರು ಕೊಟ್ಟ ನಿರ್ಣಯಕ್ಕೆ ಏಕಪಕ್ಷೀಯ ತೀರ್ಮಾನ ಮಾಡಿದ್ದಾರೆಂಬುದು ಸರಿಯಲ್ಲ. ಆದ್ದರಿಂದ ಬಗೆಹರಿದ ಪ್ರಶ್ನೆಯು ವಿಚಾರದಲ್ಲಿ ಮತ್ತೆ ಮಾತನಾಡುವುದು ಸರಿಯಲ್ಲ. ಸುಮ್ಮನೆ ಚಳವಳಿಮಾಡಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ಈ ಬಗ್ಗೆ ಸ್ಪಷ್ಟವಾಗಿ ವಿನಂತಿಮಾಡಿಕೊಳ್ಳುತ್ತೇನೆ. ಈ ರೀತಿಯಾದ ಮಾತುಗಳಿಂದ ಅನಾವಶ್ಯಕವಾಗಿ ಬೆಳಗಾಂ ಊರಿನೊಳಗೆ ಶಾಂತಿ ಕದಲುವ ಸಂಭವವಿದೆ. ಇಂಥ ಮಾತುಗಳಿಗೆ ಎಲ್ಲಿಯೂ ಪುರಸ್ಕಾರ ಬೇಡ. ಬೇಕಾದರೆ ಅವರು ಪುನಃ ಪಂಡಿತ್ ನೆಹರೂ ಅವರ ಮುಂದೆ ಹೋಗಲಿ; ಬೇಕಾದರೆ ಪಾರ್ಲಿಮೆಂಟ್ ಮುಂದೆ ಹೋಗಲಿ. ಇದು ಮುಕ್ತಾಯವಾದ ಪ್ರಶ್ನೆಯೆನ್ನುತ್ತಾರೆ.

ಅಷ್ಟೇ ಅಲ್ಲದೆ, ಬೆಳಗಾಮಿನ ವಿಚಾರದಲ್ಲಿ ಕೇವಲ ಒಂದು ಊರಿನ ವಿಚಾರ ಹೇಳುವಾಗ್ಗೆ ಇವರು ಒಂದು ಭಾಗದಷ್ಟು ಕನ್ನಡಿಗರಿದ್ದಾರೆ ಎರಡು ಭಾಗದಷ್ಟು ಮರಾಠಿಗರಿದ್ದಾರೆ ಎಂದು ಹೇಳುತ್ತಾರೆ. ಹೊರಗಡೆಯಿಂದ ಬಂದ ಮಹರಾಷ್ಟ್ರದವರೇ ಇಲ್ಲಿ ಹೆಚ್ಚು. ಅದೆಲ್ಲಾ ಏನೇ ಇರಲಿ, ಇನ್ನುಮೇಲೆ ನಾವು ಅಣ್ಣತಮ್ಮಂದಿರು. ಇನ್ನು ಇಂಥ ಮಾತುಗಳನ್ನಾಡುವುದು ಬೇಡವೆಂದು ನಾನು ವಿನಂತಿ ಮಾಡಿಕೊಳ್ಳುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

[Sri J. SARWESH (Gulbarga).—*Spoke in Hindi and the same is printed in the Appendix number to this volume.*]

4-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಅಧ್ಯಕ್ಷರೇ, ಈ ಎರಡು ದಿನಗಳಿಂದ ರಾಜ್ಯಪಾಲರ ಭಾಷಣದ ಮೇಲೆ ವಿರೋಧ ಪಕ್ಷದವರನೇಕರು ಭಾಷಣಮಾಡಿದ್ದಾರೆ. ವಿರೋಧ ಪಕ್ಷದವರು ರಾಜ್ಯಪಾಲರ ಭಾಷಣದಲ್ಲಿ ಯಾವ ಯಾವ ಅಂಶಗಳು ಬಿಟ್ಟುಹೋಗಿವೆಯೋ ಆ ಅಂಶಗಳ ಮೇಲೆ ಏನಾದರೂ ಸಲಹೆಗಳನ್ನು ಕೊಡಬಹುದು ಎಂದು ನಾನು ಭಾವಿಸಿದ್ದೆ. ಆದರೆ ಮಾತನಾಡಿದಂಥ ಸದಸ್ಯರ ಪೈಕಿ ಕೆಲವರು ಈ ಸಭೆಯಲ್ಲಿ ಇದನ್ನು ಕೇವಲ ಒಂದು ಪೊಲಿಟಿಕಲ್ ಪ್ಲಾಟ್‌ಫಾರಂನಲ್ಲಿ ಭಾಷಣ ಮಾಡುತ್ತಿದ್ದೇವೆಂದು ತಿಳಿದು ಆರೀತಿ ಪ್ರಯತ್ನಪಟ್ಟು ಕಾಂಗ್ರೆಸ್ಸನ್ನು ದೂಷಿಸುವ ಒಂದು ಧೋರಣೆಯನ್ನು ನೋಡಿದರೆ ವಿರೋಧ ಪಕ್ಷದವರು ನಿಜವಾಗಿಯೂ ತಮ್ಮ ಕರ್ತವ್ಯವನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದಾರೆ ಎನ್ನುವ ವಿಷಯದಲ್ಲಿ ನನಗೆ ಒಂದು ಶಂಕೆ ಕಾಣುತ್ತದೆ.

Sri M. RAMAPPA (Chitaldrug).—Can a Member speak about the duties of the opposition?

Mr. SPEAKER.—There is nothing wrong in that. The Hon'ble Member may do the same thing. The Congress member has a right to criticise the opposition and the opposition member can also criticise the Congress Legislature party, not the organisation.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಸ್ವಾಮಿ, ನನ್ನ ಮಾನ್ಯ ಸದಸ್ಯರಲ್ಲಿ ಕೆಲವರು ಷೆಡ್ಯೂಲ್ಡ್ ಕ್ಯಾಸ್ಟ್ ಅಥವಾ ಹರಿಜನರ ವಿಷಯದಲ್ಲಿ ಸರ್ಕಾರ ಇವರ ಪ್ರಗತಿಗಾಗಿ ಏನೂ ಕೆಲಸ ಮಾಡಲಿಲ್ಲವೆಂದು ಹೇಳಿದರು. ಅದನ್ನು ಕೇಳಿ ನನ್ನ ಮನಸ್ಸು ಬಹಳವಾಗಿ ನೋಯಿತು. ನಮ್ಮ ಸರ್ಕಾರದವರು ಅವರು

(ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್)

ಮೊದಲಿನಿಂದಲೂ ಬಹಳ ಕೆಳಮಟ್ಟದಲ್ಲಿಯೇ ಇದ್ದಾರೆಂದು ಭಾವಿಸಿ ಅವರನ್ನು ಹರಿಜನರೆಂದು ಕರೆದು ಅವರಿಗೆ ಈಗಾಗಲೇ ಸಮಾಜದಲ್ಲಿ ಸರ್ವ ಸಮಾನತೆಯನ್ನು ದೊರಕಿಸುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಅವರಿಗಾಗಿ ಅನೇಕ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ, ಮಂತ್ರಿಗಳ ಸ್ಥಾನವನ್ನೂ, ಅನೇಕ ಅಧಿಕಾರಿಗಳ ಸ್ಥಾನಗಳನ್ನೂ ಕಲ್ಪಿಸಿಕೊಡುತ್ತಿದ್ದಾರೆ. ಸಮಾಜದಲ್ಲಿ ಸರ್ವಸಾಮಾನ್ಯರಿಗೆ ಏನು ಒಂದು ಸ್ಥಾನವಿದೆಯೋ, ಸರ್ವ ಜನರಿಗೂ ಏನೊಂದು ಅವಕಾಶ ವಿದೆಯೋ ಆ ಅವಕಾಶಗಳು ಹರಿಜನರಿಗೆ, ಅದರಲ್ಲೂ ಹಿಂದುಳಿದ ಪಂಗಡದವರಿಗೆ ದೊರೆಯಬೇಕೆಂದು ಎಷ್ಟೋಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಹೀಗಿರುವಾಗ ನಮ್ಮ ಪ್ರಭುತ್ವಪಕ್ಷದವರು ಹರಿಜನರ ಏಳಿಗೆಗಾಗಿ ಏನೊಂದು ಕಾರ್ಯವನ್ನು ಕೈಗೊಳ್ಳುತ್ತಿಲ್ಲ ಎಂದು ವಿರೋಧಪಕ್ಷದವರಲ್ಲಿ ಕೆಲವರು ವಾದಿಸುತ್ತಿರುವುದನ್ನು ನೋಡಿದರೆ ನನಗಂತೂ ಬಹಳ ವ್ಯಸನವಾಗಿದೆ. ಅವರ ವಿಚಾರದಲ್ಲಿ ನಮ್ಮ ಸರ್ಕಾರದವರು ಕಾಂಗ್ರೆಸ್ ಪ್ರಭುತ್ವ ಬಂದಮೇಲಂತೂ ಎಷ್ಟು ಕೆಲಸ ಮಾಡುತ್ತಿದ್ದಾರೆ ಎಂದರೆ, ಅದನ್ನೇನಾದರೂ ತುಲನ ಮಾಡಿ ನೋಡುವುದಾದರೆ, ಹರಿಜನರ ಏಳಿಗೆ ಇನ್ನೂ ಉತ್ತಮ ಮಟ್ಟಕ್ಕೆ ಬರುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಯಾರೋ ಒಬ್ಬ ಮಹನೀಯರು ಕಾಂಗ್ರೆಸ್ ಸರಕಾರದವರು ನಮಗೇನೂ ಮಾಡಲಿಲ್ಲವೆಂದು ಹೇಳಿದರು. ಅದರಲ್ಲಿ ನಿಜಾಂಶವೇ ಇಲ್ಲ. I suppose its meaning will be like this.

**Sri A. R PANCHGAVI** (Belgaum).—On a point of order. Can a member change his language during his speech ?

**Mr. SPEAKER.**—I was about to point out. He should not.

**ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.**—ನನಗಾದರೂ ಹೀಗನ್ನಿಸುತ್ತದೆ : ಕಾಂಗ್ರೆಸ್ ಸರ್ಕಾರ ಬಂದಮೇಲೆ ಹರಿಜನರ ಮೇಲ್ಮೆಗಾಗಿ ಎಷ್ಟೋ ಕಾನೂನು ಕಟ್ಟಳೆಗಳನ್ನು ಮಾಡಿ ಅವರ ಸಮಾಜವನ್ನು ಮುಂದಕ್ಕೆ ತರಬೇಕೆಂದು ಪ್ರಯತ್ನಪಟ್ಟರೂ, ವಿರೋಧಪಕ್ಷದವರಲ್ಲಿ ಕೆಲವರು ಅವರ ಏಳಿಗೆಗಾಗಿ ಸರ್ಕಾರದವರು ಏನೇನೂ ಮಾಡಿಲ್ಲವೆಂದು ಹೇಳುವುದು, ಅದು ಒಂದು ಟೊಳ್ಳು ಮಾತಾಗಿದೆ. ಅದರಿಂದ ನನ್ನ ಮನಸ್ಸು ಬಹಳವಾಗಿ ನೋಯುತ್ತದೆ. ಹರಿಜನರಿಗೆ ಸಮಾಜದಲ್ಲಿ ಸ್ಥಾನಮಾನಗಳು ಸಿಕ್ಕದೆ ಹೋಗುತ್ತದಲ್ಲಾ ಎಂಬ ಶಂಕೆಯನ್ನು ಮತ್ತು ವಿರೋಧಪಕ್ಷದವರು ನಾವು ಬೇರೆ ಇರುತ್ತೇವೆ ಎಂಬ ಭಾವನೆಯನ್ನೂ ಮೊದಲು ಬಿಟ್ಟುಬಿಡಲಿ ಎಂದು ಅವರನ್ನು ವಿನಯದಿಂದ ಪ್ರಾರ್ಥಿಸಿ ಕೋಳ್ಳುತ್ತೇನೆ. ಮತ್ತೊಂದು ಮುಖ್ಯವಾದ ವಿಷಯವನ್ನು ನಾನು ಮಾನ್ಯ ಸದಸ್ಯರಿಗೆ ತಿಳಿಸಲಿಚ್ಛಿಸುತ್ತೇನೆ. ನಾನು ಈ ಎರಡು ದಿನಗಳಿಂದಲೂ ಅನೇಕ ಭಾಷೆಗಳಲ್ಲಿ ಭಾಷಣಗಳಾಗುತ್ತಿರುವುದನ್ನು ಕೇಳುತ್ತಿದ್ದೇನೆ. ಆದರೆ ನಮ್ಮ ಅಧ್ಯಕ್ಷಮಹಾಶಯರಿಗೆ ಅನೇಕ ಭಾಷೆಗಳು ಬರುವುದರಿಂದ ಮತ್ತು ಅವರು ಎಲ್ಲಾ ಭಾಷೆಗಳ ಪರಿಜ್ಞಾನವನ್ನು ಪೂರ್ಣವಾಗಿ ಸಂಪಾದಿಸಿರುವುದರಿಂದ ಈ ಸಭಾಕಾರ್ಯಕಲಾಪಗಳು ಬಹಳ ಚೆನ್ನಾಗಿ ಸಾಗುತ್ತಿವೆ. ಇದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಆದರೆ ನನಗೆ ಮಾತ್ರ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಪರಿಜ್ಞಾನ ವಿದೆ. ಈ ಸಭೆಯೊಳಗೆ ಸುಮಾರು ಶೇಕಡ. 99 ರಷ್ಟು ಸದಸ್ಯರು ಕನ್ನಡ ಮಾತನಾಡುವವರಿದ್ದಾರೆ. ಈ ಸಭೆಯ ಕಾರ್ಯಕಲಾಪಗಳನ್ನು ನ್ಯಾಷನಲ್ ಲ್ಯಾಂಗ್ವೇಜಿನಲ್ಲಂತೂ ನಡೆಸುವುದಕ್ಕಾಗುವುದಿಲ್ಲ. ಆದ್ದರಿಂದ ಇನ್ನು ಮುಂದಾದರೂ ಈ ಸಭೆಯ ಕಾರ್ಯಕಲಾಪಗಳನ್ನು ನಮ್ಮ ಪ್ರಾಂತೀಯ ಭಾಷೆಯಲ್ಲಾದರೂ ನಡೆಸಲು ತಕ್ಕ ಒಂದು ಅವಕಾಶವನ್ನು ಕಲ್ಪಿಸಲು ತಾವು ವ್ಯವಸ್ಥೆ ಮಾಡಬೇಕೆಂದು ಈ ಸಭೆಯಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಮಾನ್ಯ ಸದಸ್ಯರುಗಳಲ್ಲಿ ನಾನು ವಿನಂತಿಮಾಡಿಕೊಳ್ಳುವುದು ಏನಂದರೆ, ಇನ್ನುಮೇಲೆ ಈ ಭಾಷವಾರು ಪ್ರಾಂತ ಚಳವಳಿಯನ್ನು ನಿಲ್ಲಿಸಬೇಕು. ಈಗ ಉಂಟಾಗಿರುವ ಶಾಂತ ಪರಿಸ್ಥಿತಿಯನ್ನು ಮತ್ತೆ ಕದಡುವುದು ಬೇಡ. ರಾಜ್ಯ ಪುನರ್ಘಟನೆಯ ಸಮಿತಿಯವರು ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ನಿರ್ಧಾರಕ್ಕೆ ಬಂದ ನಿರ್ಣಯವನ್ನು ಪಾರ್ಲಿಮೆಂಟು ಸಹ ಒಪ್ಪಿಕೊಂಡಿದೆ. ದಯವಿಟ್ಟು ಮತ್ತೆ ಮತ್ತೆ ಈ ಪ್ರಶ್ನೆಯನ್ನು ಎತ್ತಿ ಶಾಂತವಾಗಿರುವ ಪರಿಸ್ಥಿತಿಯನ್ನು ಕಲಕುವುದು ಬೇಡ. ನಮ್ಮ ಕಾಂಗ್ರೆಸ್ ಸರಕಾರವಿದ್ದಾಗ ಅಲ್ಪ ಸಂಖ್ಯಾತರಿಗೆ ಎಲ್ಲ ಸಂರಕ್ಷಣೆ ಕೊಡಲಾಗುವುದೆಂದು ನಾನು ಭರವಸೆ ಕೊಡುತ್ತೇನೆ.

ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಕೊಡುವ ವಿಷಯವನ್ನು ಒಬ್ಬ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದರು 20—30 ವರ್ಷಗಳ ವರೆಗೆ ದೇಶಕ್ಕಾಗಿ ಕಷ್ಟಪಟ್ಟಿರುವ ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಕೊಡುವುದರಲ್ಲಿ ಯಾವ ಅನ್ಯಾಯವೂ ಆಗಿಲ್ಲ. ಸಮಾಜವಾದಿ ಸಮಾಜ ರಚನೆಯ ಧ್ಯೇಯವನ್ನು ನಮ್ಮ ಸರಕಾರವು ಇಟ್ಟು ಕೆಲಸ ಮಾಡುತ್ತಿರುವಾಗ ಪ್ರತಿಯೊಂದು ಕೆಲಸವನ್ನು ಟೀಕಿಸುತ್ತ ಹೋದರೆ ಏನೂ ಪ್ರಯೋಜನವಾಗುವದಿಲ್ಲ.

ರಾಜ್ಯಪಾಲರವರು ತಮ್ಮ ಭಾಷಣದಲ್ಲ ಆಹಾರ ಪರಿಸ್ಥಿತಿಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಈಗ ನಮ್ಮ ದೇಶದಲ್ಲಿ ಆಹಾರ ಪರಿಸ್ಥಿತಿಯು ಸಮಾಧಾನಕರವಾಗಿಲ್ಲ, ಹೆಚ್ಚು ಅಹಾರ ಉತ್ಪಾದನೆಯು ಆಗುವಂತೆ ಪ್ರಯತ್ನಮಾಡಬೇಕಾಗಿದೆ. ನೀರಾವರಿ ಮುಂತಾದ ಯೋಜನೆಗಳನ್ನು ತೀವ್ರವಾಗಿ ಕೈಕೊಳ್ಳಬೇಕಾಗಿದೆ. ಹೆಚ್ಚು ಆಹಾರ ಉತ್ಪಾದನೆಗೆ ತಕ್ಕ ಕ್ರಮಗಳನ್ನು ಕೈಕೊಳ್ಳುವ ಕಡೆಗೆ ಎಲ್ಲರೂ ಗಮನವನ್ನು ಕೊಡಬೇಕೆಂದು ಹೇಳುತ್ತೇನೆ.

ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಇನ್ನೂ ಹೆಚ್ಚು ಕೆಲಸಕಾರ್ಯಗಳು ವಿದ್ಯಾಭ್ಯಾಸದ ವಿಚಾರದಲ್ಲಿ ನಡೆಯಬೇಕಾಗಿದೆ. ವಿಶ್ವವಿದ್ಯಾನಿಲಯದ ಶಿಕ್ಷಣ ಮಟ್ಟದಲ್ಲಿ ಭಾಷೆ ಮಾಧ್ಯಮವು ಕನ್ನಡ ಇರಬೇಕೋ ಇಂಗ್ಲಿಷ್ ಇರಬೇಕೋ ಎಂಬ ಬಗ್ಗೆ ವಾದ ಎದ್ದಿದೆ. ಈಪ್ರಶ್ನೆಯನ್ನು ಬೇಗ ಇತ್ಯರ್ಥ ಮಾಡಬೇಕಾಗಿ ಹೇಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ

**Sri F. X. DENIS PINTO** (Kaup).—Mr. Speaker, Sir, I am happy to associate myself with the Motion of thanks to the Governor for his illuminating Address in which he has made a survey of the outstanding problems which we have to solve in the coming five years. I would ask our Government to give top priority to certain problems that face us. In this connection, I would like to

mention the food problem and the housing problem.

As regards the food problem, the Governor has made a mention about the food situation in certain Districts. In South Kanara we find that the prices of foodgrains are going up day by day. We find that rice is being exported to Kerala. I would request Government to see that rice does not go from our State to Kerala. Let Kerala be fed by the Centre. If export of foodgrains to Kerala is stopped, then to that extent our food situation would improve.

Another important step that we have to take is to concentrate on intensive cultivation and bring the fallow lands under cultivation. For intensive cultivation we should follow the Japanese method of cultivation. The officers of the Agricultural Department should go to the villages and show the ryots the method of intensive cultivation. We find officers of the Department going to demonstration farms in jeeps. They seldom go to the villages. Very few villagers go to the demonstration farms. The officers of the Department should go from house to house in the villages and tell the villagers how Government are helping them by giving them better seeds, manure, etc. It is said that in Japan the yield per acre is about 1800 lbs., whereas the yield in our country is about 500 lbs. per acre. So we have got to increase the yield per acre.

The second point that I want to mention is about the housing problem. The poor and the middle class people are living in much worse and more humiliating conditions than even cattle. I would ask Government to avail of the subsidy which is given by the Centre for housing the poor and the low income groups. It has been stated that Rs. 75 lakhs have been set apart by Government for slum clearance. Apart from this, there is also the subsidy given by the Centre for housing. Let us avail of this subsidy and try to have more houses for the poor and the low income group people.

The third point I want to urge is that recently the Mysore Government were pleased to raise the pay scales of teachers of Government Elementary schools in Mysore State, but there are many teachers under local bodies and in private institutions in South Kanara and Bombay Karnatak for whom the Government has not thought it fit to do anything to raise their pay scales. Their pay also should be raised and brought on a par with that of the teachers in Mysore Government schools.

During the last few days the Opposition has been criticising and pointing out the various defects of our Government. Whatever may be the defects of our Government, its past achievements have resulted in sending a very large number of persons belonging to the Congress Party to the legislature and we are having a Congress Government here. Of course, overnight we cannot improve the condition of the people, but, by and by, by taxation the Government has brought down the income of the richer class and Hon'ble Members may be surprised to know that today a man with an income of Rs. 1 lakh has got with him only Rs. 30,000. or Rs. 40,000. More than 60 per cent of the amount is taken away by the Government by way of taxation. We want the co-operation of all the members of this House, especially the co-operation of the Members of the Opposition, so that we can usher in the socialistic pattern of society. Their help and co-operation is required and there should be healthy and constructive suggestions from the Opposition so that we, the members, to whichever party we may belong, can try to bring about the progress of our State.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಭಾಪತಿಗಳೆ, ಈಗ ಮೈಸೂರು ಸಂಸ್ಥಾನದ ಶಾಸನ ಸಭೆಗಳ ಜಂಟಿ ಅಧಿವೇಸನದಲ್ಲಿ ಮೈಸೂರಿನ ರಾಜ್ಯಪಾಲರು ತಮ್ಮ ಭಾಷಣವನ್ನು ಮಾಡಿದ್ದಾರೆ. ಆ ಭಾಷಣದಮೇಲೆ ಸರ್ಕಾರಿಪಕ್ಷದವರು ಮತ್ತು ವಿರೋಧ ಪಕ್ಷದವರು ಮಾತನಾಡಿ ದೇಶ ಪ್ರಗತಿಯ ಹಾದಿಯನ್ನು ಹಿಡಿದಿದೆಯೆ ಅಥವಾ ಪ್ರಗತಿಯ ಹಾದಿಯನ್ನು ಬಿಟ್ಟು ನಡೆಯುತ್ತಿದೆಯೆ ಎಂಬುದನ್ನು ಈ ಸಭೆಯ ಮುಂದೆ ಸೂಚಿಸಿದ್ದಾರೆ. ನಾನು ನನಗೆ ಕೊಟ್ಟಿರುವ ವೇಳೆಯಲ್ಲಿ ಎರಡು ಮೂರು ವಿಚಾರಗಳ ಮೇಲೆ ಮಾತ್ರ ಮಾತನಾಡಬೇಕೆಂದಿದ್ದೇನೆ.

ಸ್ವಾಮಿ, ಸುಖೀ ರಾಜ್ಯಸ್ಥಾಪನೆ ಮಾಡುತ್ತೇವೆಂದು ಸರ್ಕಾರದವರು ಬಹು ದಿನಗಳಿಂದ ಹೇಳುತ್ತಿದ್ದರು. ಎಲ್ಲರಿಗೂ ಹೊದೆಯುವುದಕ್ಕೆ ಬಟ್ಟೆ, ತಿನ್ನುವುದಕ್ಕೆ ಅನ್ನ, ವಾಸಮಾಡುವುದಕ್ಕೆ ಮನೆ ಇಷ್ಟನ್ನು ಒದಗಿಸಿದರೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ.)

ಸುಖೀರಾಜ್ಯವಾಗುತ್ತದೆ, ಈ ರೀತಿ ಮಾಡಿದರೆ ನಿಜವಾಗಿಯೂ ಮಹಾತ್ಮಾ ಗಾಂಧಿಯವರ ಮನಸ್ಸಿಗೆ ಶಾಂತಿಯಾಗುತ್ತದೆ ಎಂದು ಯಾರು ಹೇಳುತ್ತಿದ್ದರೋ ಅವರ ಕೈಗೆ ಈ ದಿನ ಎರಡು ಕೋಟಿ ಜನಗಳ ಆಗುಹೋಗುಗಳು ಮತ್ತು ಅವರನ್ನು ರಕ್ಷಣೆಮಾಡುವ ಕಾರ್ಯಭಾರ ಸೇರಿದೆ. ಅವರು ಈ ದಿವಸ ಎದೆಮುಟ್ಟಿಕೊಂಡು ಸ್ವಾತಂತ್ರ್ಯ ಚಳವಳಿ ನಡೆಯುತ್ತಿದ್ದಾಗ ದೇಶಕ್ಕೆ ಏನೊಂದು ಆಶ್ವಾಸನೆ ಕೊಟ್ಟಿದ್ದರೋ ಅದನ್ನು ಉಳಿಸಿ ಅದರಂತೆ ನಡೆಯುತ್ತಿದ್ದಾರೆಯೇ ಎಂಬುದನ್ನು ಪರಿಶೀಲನೆಮಾಡಿ ನೋಡಬೇಕು. ಅದರಿಂದ ಬಹುದೂರ ಸರಿದಿದ್ದಾರೆಂದು ಬಹಳ ಮನಸ್ಸಿಗೆ ನೋವನ್ನುಂಟುಮಾಡಿಕೊಂಡು ವಿಷಾದದಿಂದ ಹೇಳಬೇಕಾಗಿದೆ. ಸ್ವಾಮಿ, ದೇಶದಲ್ಲಿ ಏನಾದರೂ ಸರಿಯಾದ ಯೋಜನೆಮಾಡಿ ಬಡವರನ್ನು ಉದ್ಧಾರಮಾಡುವುದಕ್ಕೆ ನಿರಕ್ಷರಕುಕ್ಷಿಗಳನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಏರ್ಪಾಡುಮಾಡಿ ರಾಮರಾಜ್ಯಸ್ಥಾಪನೆ ಮಾಡಬೇಕೆಂದೇನು ಹೇಳಿದ್ದರೋ ಆ ರಾಮರಾಜ್ಯ, ಆ ಸುಖೀ ರಾಜ್ಯಸ್ಥಾಪನೆಮಾಡುವ ಹಾದಿಯಲ್ಲಿ ಸರ್ಕಾರ ಹೋಗುತ್ತಿದೆಯೇ ಎಂದು ನೋಡಿದರೆ ನಾಚಿಕೆಯಿಂದ ತಲೆತಗ್ಗಿಸಬೇಕಾಗಿದೆ. ಒಂದೇ ಒಂದು ಉದಾಹರಣೆ ಕೊಡುವುದಾದರೆ ಮದರಾಸಿನಷ್ಟೆ ಇರುವ ಮೈಸೂರಿನಲ್ಲಿ ಹನ್ನೊಂದು ಜನ ಮಂತ್ರಿಗಳೂ, ಮೂರು ಜನ ಉಪಮಂತ್ರಿಗಳೂ ಇದ್ದಾರೆ. ಮದರಾಸಿನ ಆದಾಯ ಮತ್ತು ಜನಸಂಖ್ಯೆ ಎಷ್ಟಿದೆಯೋ ಮೈಸೂರಿನದೂ ಅಷ್ಟೇ ಇದೆ. ಏಕೆ ಈ ಶಿರೋಭಾರ? ಹನ್ನೊಂದು ಜನರಿರುವ ಮಂತ್ರಿಮಂಡಲವನ್ನು ಹನ್ನೆರಡಕ್ಕೂ ಮೂರು ಜನರಿರುವ ಉಪಮಂತ್ರಿಗಳ ಸಂಖ್ಯೆಯನ್ನು ಆರಕ್ಕೂ ಏರಿಸಿ ಒಟ್ಟು 18 ಜನರ ಮಂತ್ರಿಮಂಡಲ ಸ್ಥಾಪಿಸುವರೆಂಬ ವದಂತಿಯಿದೆ. ಈ ಶಿರೋಭಾರವನ್ನೇಕೆ ಕಡಮೆಮಾಡಬಾರದು? ಎಲ್ಲಾದರೂ ಸ್ಕೂಲು ಕಟ್ಟಡ ಕಟ್ಟಿಸಿ, ರಸ್ತೆ ಮಾಡಿಸಿ ಎಂದು ಹಳ್ಳಿಗಳವರು ಕೇಳಿದರೆ ನಿಮ್ಮ ಕಾಂಟ್ರಿಬ್ಯೂಷನ್ ಎಷ್ಟು ಎಂದು ಕೇಳುತ್ತಾರೆ. ಆರು ಜನ ಮಂತ್ರಿಗಳಿದ್ದರೆ ರಾಜ್ಯಭಾರ ಮಾಡುವುದಕ್ಕಾಗುತ್ತಿರಲಿಲ್ಲವೆ? ಮಹಾತ್ಮಾ ಗಾಂಧಿಯವರ ತತ್ವ ಪರಿಪಾಲನೆ ಮಾಡುತ್ತಿರುವವರು ಅವರಿಗೆ ಶಾಂತಿಯಾಗುವ ರೀತಿಯಲ್ಲಿ ಸ್ವಲ್ಪವಾದರೂ ಏಕೆ ನಡೆದುಕೊಳ್ಳಬಾರದು? ನಾನೂ ಕಾಂಗ್ರೆಸ್ಸಿನವರ ಜೊತೆಯಲ್ಲಿ 23 ವರ್ಷ ಕಾಲ ದುಡಿದಿದ್ದೇನೆ. ಅವರ ಜೊತೆಯಲ್ಲೇ ಜೈಲಿಗೆ ಹೋಗಿದ್ದೇನೆ. ಎಷ್ಟೋ ಮಂದಿ 1947ರಿಂದೀಚೆಗೆ ಕಾಂಗ್ರೆಸ್‌ಗೆ ಸೇರಿದ್ದಾರೆ. ದೇಶದಲ್ಲಿ ಬಹಳ ಕಷ್ಟ ಪರಿಸ್ಥಿತಿಯಿದೆ. ಮಿರ್ಜಾ ಸಾಹೇಬರಿದ್ದಾಗ ಐದು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳಬೇಡಿ ಎಂದು ಹೇಳಿದ್ದೇವೆ. ಹಾಗಿರುವಾಗ ಈ ದಿವಸ ಸಂಬಳ ಜಾಸ್ತಿ ತೆಗೆದುಕೊಳ್ಳಬಾರದೆಂದು ಹೇಳುತ್ತಿದ್ದ ಕಾಂಗ್ರೆಸ್ಸಿನವರು ಏಕೆ ಹೆಚ್ಚು ಸಂಬಳಪಡೆಯುತ್ತಿದ್ದಾರೆ? ಕಾಂಗ್ರೆಸ್ ಸರ್ಕಾರ ಏಕೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ? ಹಿಂದೆ ಜನರಿಗೆ ಹೆಂಡ ಕುಡಿಸಿ ಅದರಿಂದ ಬಂದ ಆದಾಯದಲ್ಲಿ ಹೆಚ್ಚು ಸಂಬಳ ತೆಗೆದುಕೊಳ್ಳುತ್ತಿದ್ದರು. ಈಗ ಪಾನನಿರೋಧವನ್ನು ಜಾರಿಗೆ ತಂದಿದ್ದಾರೆ. ಆದರೆ ಅದನ್ನು ಸಂಸ್ಥಾನಾದ್ಯಂತ ಪೂರ್ಣವಾಗಿ ಜಾರಿಗೆ ತಂದಿಲ್ಲ. ಮಹಾತ್ಮಾ ಗಾಂಧಿಯವರು ಹೇಳಿದಂತೆ ಮದ್ಯಪಾನ ನಿರೋಧ ಮಾಡಿದ್ದರೂ ಅದು ಯಶಸ್ವಿಯಾಗುವಂತೆ ಜಾರಿಗೆ ತಂದಿಲ್ಲ. ಪೂರ್ಣವಾಗಿ ಅದನ್ನು ಜಾರಿಗೆ ತರದಿದ್ದರೆ ಬಡವರು ಉದ್ಧಾರವಾಗುವುದಿಲ್ಲವೆಂದು ಶ್ರೀ ರಾಜಗೋಪಾಲಾಚಾರಿಯವರೂ ಸಹ ಹೇಳಿದ್ದರು. ಆದರೆ ಹಾಗೆ ಮಾಡದೆ ನಿಧಾನವಾಗಿ ಸ್ವಲ್ಪ ಸ್ವಲ್ಪವಾಗಿ ಜಾರಿಗೆ ತರುತ್ತೇವೆಂದು ಹೇಳುತ್ತಾರೆ. ತುಮಕೂರು ಜಿಲ್ಲೆಯಲ್ಲಿ ದಾವಣಹೇಟೆಯಲ್ಲಿ ಹೆಂಡ ಕುಡಿದು ನಂದಿಹಳ್ಳಿಗೆ ಬಂದರೆ ಹಿಡಿದುಕೊಂಡು ಹೋಗುತ್ತಾರೆ, ಕುಡಿದವರು 5 ರೂಪಾಯಿ ಕೊಟ್ಟರೆ, ಬಿಟ್ಟುಬಿಡುತ್ತಾರೆ. ಹೀಗಾದರೆ ಹೇಗೆ ಯಶಸ್ವಿಯಾದೀತು? ಈ ರೀತಿ ಅರ್ಧನಾರಿ ತತ್ವವನ್ನನುಸರಿಸಬಾರದು. ಧೈರ್ಯವಿಲ್ಲದಿದ್ದರೆ, ಎಲ್ಲ ಕೆಲಸಗಳಿಗೂ ಹಣ ಒದಗಿಸುವುದಕ್ಕೆ ಶಕ್ತಿಯಿಲ್ಲದಿದ್ದರೆ ಹೆಂಡವನ್ನು ಎಲ್ಲರೂ ಕುಡಿಯಲು ಅವಕಾಶ ಕೊಡಲಿ, ಅದರಿಂದ ಬರುವ ಹಣವನ್ನು ದೇಶಕ್ಕಾಗಿ ಉಪಯೋಗಿಸಲಿ, ಇಲ್ಲದಿದ್ದರೆ ಮಹಾತ್ಮಾ ಗಾಂಧೀಜಿ ಹೇಳಿದಹಾಗೆ ದೇಶಾದ್ಯಂತ ಕುಡಿತವನ್ನು ತಪ್ಪಿಸಲಿ. ಜಿಲ್ಲೆಯೊಂದಕ್ಕೆ ಕನಿಷ್ಟಪಕ್ಷ ಪಾನನಿರೋಧಕ್ಕೆಸಂಬಂಧಪಟ್ಟ ನೂರು ಕೇಸುಗಳನ್ನಾದರೂ ಹಾಕಬೇಕಂತೆ, ಇಲ್ಲದಿದ್ದರೆ ಸರ್ಕಾರ ಕೋಪಮಾಡಿಕೊಳ್ಳುತ್ತದೆ ಎಂದು ಹೇಳುತ್ತಾರೆ. ನಮ್ಮ ಊರಿನಲ್ಲಿ ಒಂದು ಮದ್ಯಪಾನದ ಸೀಸೆಯನ್ನು ತಿಪ್ಪೆಯಲ್ಲಿ ಪೋಲೀಸಿನವರ ಕೈಯಿಂದ ಹಾಕಿಸಿ ಅದರಮೇಲೆ ಯಾರನ್ನೋ ಅಪಾದಿತರನ್ನಾಗಿ ಮಾಡಿ ಅವರಮೇಲೆ ಛಾರ್ಜ್ ಷೀಟ್ ಹಾಕಿದ್ದಾರೆ. ಇಂಥ ನಿದರ್ಶನಗಳನ್ನು ಬೇಕಾದಷ್ಟು ಕೊಡಬಹುದು. ಇದು ಬಹಳ ನಾಚಿಕೆಗೇಡು. ಸರ್ಕಾರದವರು ನಿಜವಾಗಿಯೂ ಇಂಥ ಕೆಲಸ ಮಾಡಬಾರದು. ಇದನ್ನೆಲ್ಲಾ ನೋಡಿದರೆ ಸರ್ಕಾರ ದಕ್ಷತೆಯಿಂದ ಕೆಲಸಮಾಡುತ್ತಿದೆಯೆ, ಸರ್ಕಾರಿ ಆಜ್ಞೆಗಳನ್ನು ಅಧಿಕಾರಿಗಳು ಪರಿಣಾಮಕಾರಿಯಾಗಿ ಜಾರಿಮಾಡುತ್ತಿದ್ದಾರೆಯೆ ಎಂಬ ಅನುಮಾನ ಬರುತ್ತದೆ.

5 P. M.

ಮಾನ್ಯ ಮುಖ್ಯ ಮಂತ್ರಿಗಳು ಯಾವುದೋ ಒಂದು ಸಂದರ್ಭದಲ್ಲಿ ಭಾಷಣಮಾಡುತ್ತಾ ವಿಧಾನಸೌಧವನ್ನು ವಿಷಾದ ಸೌಧವೆಂದು ಹೇಳಿದರು. ಯಾವುದೋ ಆ ಸಂದರ್ಭದಲ್ಲಿ ಬಂದು ದೊಡ್ಡ ಭೂತ ಸೇರಿದೆ. ಆ ದೊಡ್ಡ ಭೂತ ಬಂದಮೇಲೆ ಆಡಳಿತ ಯಂತ್ರ, ಎಗ್ಜಿಕ್ಯೂಟಿವ್ ಮೆಷಿನರಿ ನಿಂತುಹೋಗಿದೆ. ಏಕೆಂದರೆ ಆ ಭೂತ ಯಾರನ್ನೂ ಬಿಟ್ಟಿಲ್ಲ, ಸೆಕ್ರಟರಿ, ಡೆಪ್ಯುಟಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿ ಮತ್ತು ಕೆಲವು ಮಂತ್ರಿಗಳಿಗೂ ಆ ಗಾಳಿ ಬೀಸಿದೆ. ಶ್ರೀ ಕಡಿದಾಳ್ ಮಂಜಪ್ಪನವರು ರೆವೆನ್ಯೂ ಮಂತ್ರಿಗಳಾಗಿದ್ದಾಗ ಸುಮಾರು 3½ ವರ್ಷಗಳ ಕೆಳಗೆ ಜಮೀನಿಲ್ಲದವರೊಬ್ಬರು ನಮ್ಮ ಊರಿನಲ್ಲಿ ಅರ್ಜಿ ಹಾಕಿದರು. ತಕ್ಷಣ ಮಹಜರು ಮಾಡಿ ವರದಿಯೊಡನೆ ಸರ್ಕಾರಕ್ಕೆ ಅದನ್ನು ಕಳಿಸಿದರು. ಆದರೆ ಅದು ತಾಲ್ಲೂಕು ಆಫೀಸಿನಲ್ಲಿ ಎಲ್ಲೋ ಪಿಜನ್ ಹೋಲ್‌ನಲ್ಲಿ ಬಿದ್ದಿದೆ; ಅದಕ್ಕೆ ನಂಬರು ಸಹ ಹಾಕಿಲ್ಲ. ಸರ್ಕಾರದ ದಕ್ಷತೆ ಹೇಗಿದೆಯೆಂಬುದನ್ನು ಇದರಿಂದ ತಿಳಿದುಕೊಳ್ಳಬಹುದು. ನಂಬಿದ ಜನರನ್ನು ಸರ್ಕಾರ ಸರಿಯಾಗಿ ರಕ್ಷಣೆಮಾಡುತ್ತಿಲ್ಲ. ನಮ್ಮ ಊರಿನಲ್ಲಿ ಪೋಲೀಸ್ ಇಲಾಖೆಗೆ ಸೇರಿದ ಒಂದು ಜಾಗವನ್ನು ಈ ದಿವಸ ಬೇರೆಯವರಿಗೆ ಕೊಟ್ಟಿದ್ದಾರೆ, ಸರ್ಕಾರದವರು ಆರ್ಡರುಮಾಡಿದ್ದಾರೆ. ಅದು ಪೋಲೀಸ್ ಇಲಾಖೆಗೆ ಸೇರಿದ್ದು, ದಾಖಲೆಯಿದೆ ಎಂದು ಜನರು ಹೇಳಿದ್ದಾರೆ. ಪೋಲೀಸ್ ಸ್ಟೇಷನ್ ಪಕ್ಕದಲ್ಲಿ ಈ ದಿವಸ ಮನೆಕಟ್ಟಿದ್ದಾರೆ, ಆ ಮನೆ ಕಟ್ಟಿರುವವರು ಸ್ಟೇಟ್ ಸೆಕ್ಯೂರಿಟಿ ಕೊಟ್ಟು ಹೌಸ್ ಬಿಲ್ಡಿಂಗ್ ಕೋ-ಆಪರೇಟಿವ್ ಸೊಸೈಟಿಯಲ್ಲಿ 25 ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದಾರೆ. ಹೀಗಿದೆ ಪರಿಸ್ಥಿತಿ. 25 ಸಾವಿರ ರೂಪಾಯಿ ಆಸ್ತಿ 14

ಸಾವಿರ ಜನರಿರುವ ಒಂದು ಊರಿನಲ್ಲಿ ಹೋಗುತ್ತಿದ್ದರೆ ನಿಜವಾಗಿಯೂ ಸರಕಾರವಿದೆಯೆಂಬ ಭಾವನೆ ಯಾರಿಗಾದರೂ ಬರುತ್ತದೆಯೆ ? ಇಷ್ಟು ದಕ್ಷತೆ ಇಲ್ಲದಿರುವ ಪಕ್ಷದವರು ಅಧಿಕಾರಕ್ಕಾಗಿ ಕಚ್ಚಾಟ ಹೆಚ್ಚು ಮಾಡಿಕೊಂಡು ಅದಕ್ಕೆ ದೇಶದ ಜನರನ್ನು ಪಣವಾಗಿಟ್ಟಿದ್ದಾರೆ. ನಿಜವಾಗಿಯೂ ಅವರಿಗೆ ದೇಶಪ್ರೇಮವಿರುವುದಾದರೆ, ದೇಶಕ್ಕೆ ಕಲ್ಯಾಣವಾಗಬೇಕು, ದೇಶದ ಕೀರ್ತಿ ಉಳಿಯಬೇಕು ಎಂಬ ಅಭಿಲಾಷೆ ಇರುವುದಾದರೆ ಈಗಿನ ಮಂತ್ರಿಮಂಡಲವು ಈದಿನ ಸಾಯಂಕಾಲ ಆರುಗಂಟೆಯೊಳಗಾಗಿ ರಾಜ್ಯಪಾಲರಿಗೆ ತನ್ನ ರಾಜೀನಾಮೆಯನ್ನು ಒಪ್ಪಿಸಬೇಕು ಎಂದು ಅಧ್ಯಕ್ಷರ ಮೂಲಕ ಮಂತ್ರಿಗಳಲ್ಲಿ ಪ್ರಾರ್ಥನೆಮಾಡುತ್ತೇನೆ. ಅವರಿಗೆ ಬದಲಾಗಿ ರಾಜ್ಯಭಾರ ಮಾಡುವ ಜನರಿದ್ದಾರೆ. ಹೆಂಡದ ಕತೆ ಹೇಳಬೇಕೆಂದಿದ್ದೆ, ಈಗ ವೇಳೆಯಾದ್ದರಿಂದ ಬಡ್ಜೆಟ್ಟಿನಮೇಲೆ ಸಾಮಾನ್ಯ ಚರ್ಚೆಯಾಗುವಾಗ ನನಗೆ ಎರಡು ನಿಮಿಷಗಳಾದರೂ ಅವಕಾಶಕೊಡಬೇಕೆಂದು ಗೌರವದಿಂದ ಪ್ರಾರ್ಥಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ಮೂರು ದಿವಸ ಈ ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಅನೇಕ ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವವರು ಉಳಿದಿದ್ದಾರೆ. ಅವರಿಗೆ ಅವಕಾಶ ಕೊಡದಿದ್ದರೆ ಸದಸ್ಯರ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬರುತ್ತದೆ. ಹಿಂದೆ ಈ ಸಭೆಯಲ್ಲಿ ನೂರು ಜನ ಸದಸ್ಯರಿದ್ದಾಗಲೂ ಮೂರು ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಹುದೆಂದು ಗೊತ್ತುಮಾಡಿದ್ದರು. ಆಗಲೂ ಆ ಅವಧಿಯನ್ನು ಹೆಚ್ಚಿಸಿರುವ ನಿದರ್ಶನವಿದೆ. ಈಗ ಮೂರು ದಿವಸಗಳಿಂದಲೂ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದರೂ ಮುಂದೆ ಎಕ್ಸ್‌ಟೆಂಡ್ ಮಾಡುವ ಪ್ರಿಸಿಡೆಂಟ್ ಇದೆಯೆಂದು ಅಧ್ಯಕ್ಷರಲ್ಲಿ ನಾನು ಅರಿಕೆಮಾಡಿಕೊಳ್ಳುತ್ತೇನೆ. ಏಕೆಂದರೆ ತಾವು ಸೆಕ್ಷನ್ 19ರ ಪ್ರಕಾರ ಎಲ್ಲಾ ಸದಸ್ಯರ ಹಕ್ಕುಬಾಧ್ಯತೆಗಳನ್ನೂ ಹಿಂದೆ ಕಾಪಾಡಿದ್ದೀರಿ. ಮುಂದೆಯೂ ಕೂಡ ಕಾಪಾಡುತ್ತೀರಿ, ಈಗಲೂ ಕಾಪಾಡುತ್ತಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಈಗ ಒಂದು ದಿವಸದ ಮಟ್ಟಿಗಾದರೂ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಂದುವರಿಸಲು ಮತ್ತು ಉಳಿದ ಸದಸ್ಯರೆಲ್ಲರಿಗೂ ಅವಕಾಶವನ್ನು ಕೊಡಲು ಈ ಸಭೆಯನ್ನು ಮುಂದುವರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸದಸ್ಯರ ಹಕ್ಕುಬಾಧ್ಯತೆಗಳಿಗೆ ಚ್ಯುತಿ ಬಾರದಂತೆ ನೋಡಿಕೊಳ್ಳುತ್ತೀರೆಂಬ ನಂಬಿಕೆ ನಮಗೆ ತಮ್ಮಲ್ಲಿದೆ ಎಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು.—ಸೆಕ್ಷನ್ 19ರ ಪ್ರಕಾರ ನಾನು ವೇಳೆಯನ್ನು ಕೊಡುತ್ತೇನೆಂದು ಹೇಳುತ್ತೀರಿ. ಅದು ತಪ್ಪು ಭಾವನೆ. ಸರ್ಕಾರೇ ಕಾರ್ಯಕಲಾಪಗಳಿಗಾಗಿ ಸರ್ಕಾರದವರು ವೇಳೆಯನ್ನು ಕೊಡುತ್ತಾರೆಯೇ ವಿನಾ ನಾನು ಕೊಡುವುದಿಲ್ಲ. ಅವರು ಎಷ್ಟು ವೇಳೆಯನ್ನು ಕೊಡುತ್ತಾರೋ ಅದರಲ್ಲಿಯೇ ಎಲ್ಲವನ್ನೂ ಹೊಂದಾವಣಿ ಮಾಡುತ್ತೇನೆಯೇ ವಿನಾ ಬೇರೆ ಏನೂ ಇಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಾನು ತಮ್ಮ ಮೂಲಕ ಸಭಾನಾಯಕರನ್ನು ಕೇಳಿ ಕೊಳ್ಳುತ್ತಿದ್ದೇನೆ ಈ ಸಭೆಯ ಹಕ್ಕುಬಾಧ್ಯತೆಗಳನ್ನು ಕಾಪಾಡುವವರು ತಾವು. ಎಲ್ಲ ಸದಸ್ಯರಿಗೂ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಸಮಾನಾವಕಾಶವನ್ನು ಕಲ್ಪಿಸಿಕೊಡಬೇಕು. ತಾವು ನಮ್ಮ ಪರವಾಗಿ ಇಲ್ಲಿರುವುದರಿಂದ ಸಭಾನಾಯಕರನ್ನ ಕನ್ಸಲ್ಟ್‌ಮಾಡಿ ಒಂದು ದಿವಸದ ಮಟ್ಟಿಗಾದರೂ ಈ ಚರ್ಚೆಯನ್ನು ಮುಂದುವರಿಸಬೇಕೆಂದು ಪ್ರಾರ್ಥಿಸುತ್ತೇನೆ. ಅದಕ್ಕೆ ಒಂದು ಪ್ರಿಸೀಡೆಂಟ್ ಇದೆ. ನಾನು ಹಿಂದೆ ವಿಧಾನಪರಿಷತ್ತಿನ ಸದಸ್ಯನಾಗಿದ್ದೆ. ಅಲ್ಲಿ ಹೋದ ವರ್ಷ ಇದೇರೀತಿ ಸಂದರ್ಭ ಒದಗಿದಾಗ ವಿಧಾನಪರಿಷತ್ತಿನಲ್ಲಿಯೂ ಕೂಡ ಒಂದು ದಿವಸದ ಮಟ್ಟಿಗೆ ಈ ಚರ್ಚೆಯಕಾಲವನ್ನು ಎಕ್ಸ್‌ಟೆಂಡ್ ಮಾಡಿದರು. ಆದರೆ ಆ ರೀತಿ ಎಕ್ಸ್‌ಟೆಂಡ್ ಮಾಡಿದ್ದರಿಂದ ಏನೂ ಅಪರಾಧವಾಗಿಲ್ಲ. ಇದರಂದಲೇ ಪಾರ್ಲಿಮೆಂಟ್‌ನಲ್ಲಿ ಎಲ್ಲಾ ಸದಸ್ಯರ ಹಕ್ಕುಬಾಧ್ಯತೆಗಳಿಗೂ ಚ್ಯುತಿ ಬಾರದಿರಲಿ ಮತ್ತು ಎಲ್ಲರಿಗೂ ಮಾತನಾಡಲು ಸಮಾನವಕಾಶ ವಿರಲಿ ಎಂದು ಆ ಸಭೆಯನ್ನು ಮೂರು ತಿಂಗಳುಗಳ ಕಾಲ ನಡೆಸುತ್ತಾರೆ. ಆದರೆ ಮೈಸೂರು ದೇಶದಲ್ಲಿನ ಅಸೆಂಬ್ಲಿಯ ಪ್ರಥಮ ಅಧಿವೇಶನ ಇತರ ಸಂಸ್ಥಾನಗಳು ಎರಡನೆ ಸಾರಿ ಅಸೆಂಬ್ಲಿ ಸೇರುವಾಗ ಸೇರುತ್ತದೆ.

ಅಧ್ಯಕ್ಷರು.—ಪಾರ್ಲಿಮೆಂಟ್ ವಿಚಾರ ಈಗ ಬೇಡ; ಏತಕ್ಕೆ ಇಷ್ಟೆಲ್ಲಾ ಮಾತನಾಡಿ 8-10 ನಿಮಿಷಗಳನ್ನು ಅನಾವಶ್ಯಕವಾಗಿ ಕಳೆಯುವುದು ? ಹೆಚ್ಚು ಕಾಲ ಕೊಡುವುದನ್ನು ಪರ್ಯಾಲೋಚಿಸ ಬೇಕೆಂದು ತಾನೆ ನೀವು ಕೇಳುತ್ತಿರುವುದು ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸಭಾನಾಯಕರನ್ನೇ ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಇತರ ಸಂಸ್ಥಾನಗಳಲ್ಲಿ ವಿಧಾನ ಸಭಾಧಿವೇಶನಗಳು ಎರಡನೆಸಾರಿ ಸೇರುವಾಗ, ನಾವು ಇಲ್ಲಿ ಇನ್ನೂ ಮೊದಲನೆಯಸಾರಿ ಸೇರಿದ್ದೇವೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಮಂತ್ರಿಗಳು).—ಸಭಾಧ್ಯಕ್ಷರೇ, ಮಾನ್ಯಸ್ನೇಹಿತರನೇಕರು ಇನ್ನೂ ಮಾತನಾಡ ಬೇಕೆಂದಿದ್ದಾರೆ. ಹೊಸದಾಗಿ ಬಂದಿರುವ ನನ್ನ ಮಾನ್ಯ ಸ್ನೇಹಿತರು ಬಹಳ ಉತ್ಸಾಹದಿಂದ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಮಾಡಬೇಕೆಂದಿದ್ದಾರೆ. ನಾನು ಅವರ ಉತ್ಸಾಹಕ್ಕೆ ಅಡ್ಡಿಬರಬಾರದು. ಆದರೆ ಇದು ಕನ್ವೆನ್ಷನ್ ಎಂದು ಇಟ್ಟುಕೊಳ್ಳಬಾರದು. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಎರಡು ದಿವಸಗಳು ಇರಬೇಕೆಂದು ಮೊದಲಿನಿಂದಲೂ ಇತ್ತು. 500 ಮಂದಿ ಸದಸ್ಯರು ಇರುವಾಗ ಪಾರ್ಲಿಮೆಂಟಿನಲ್ಲಯೇ ಎರಡು ದಿವಸಗಳು ಮಾತ್ರ ಇದೆ. ಹಳೆಯ ಮೈಸೂರಿನಲ್ಲಿಯೂ ಎರಡು ದಿವಸಗಳು ಇರಬೇಕೆಂದಿತ್ತು. ತಾವು ಹೋದಸಾರಿ ಕೊನೆಯ ಅಧಿವೇಶನವೆಂದು ಒಂದು ದಿವಸ ಕಾಲಾವಕಾಶವನ್ನು ಕೊಟ್ಟರಿ. ಈ ಸಾರಿ ಹೊಸ ಸದಸ್ಯರು ರಾಜ್ಯಪಾಲರ ಭಾಷಣವನ್ನು ಚೆನ್ನಾಗಿ ಉತ್ಸಾಹದಿಂದ ಓದಿಕೊಂಡು ಬಂದಿದ್ದಾರೆ, ಮಾತನಾಡ ಬೇಕೆಂದು ಹೆಚ್ಚು ಆಸಕ್ತಿಯಿಂದ ಇದ್ದಾರೆ, ಅದಕ್ಕೆ ನಾನು ಏತಕ್ಕೆ ಅಡ್ಡಿ ಬರಲಿ. ತಾವು ಅನುಮತಿ ಕೊಟ್ಟರೆ ಶನಿವಾರವೂ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಂದುವರಿಸಬಹುದು. ಸೋಮವಾರದ ದಿವಸ ಬಡ್ಜೆಟ್ಟನ್ನು ಮಂಡಿಸುವುದಕ್ಕೆ ಅವಕಾಶವನ್ನು ಕೊಡಬಹುದು.

ಅಧ್ಯಕ್ಷರು.—ಈಗ ಸರ್ಕಾರದವರು ಒಪ್ಪಿದ್ದಾರೆ. ಒಂದು ದಿವಸ ಜಾಸ್ತಿಕೊಟ್ಟಿದ್ದಾರೆ. ಮಾತನಾಡುವವರು ನಾಳೆ ಮುಂದುವರಿಸ ಬಹುದು.

ಶ್ರೀ ಟಿ. ಮರಿಯಪ್ಪ.—ಬಡ್ಜೆಟ್ಟಿನ ಮೇಲೆ ಯಾರು ಮಾತನಾಡಬೇಕೆಂದಿದ್ದಾರೋ ಅವರನ್ನು ಬಿಟ್ಟು ಬಾಕಿಯವರು ಮಾತನಾಡುತ್ತಾರೆ ಎಂದು ಹೇಳಿದರೆ ಅವರಿಗೆ ಅವಕಾಶ ಕೊಡಬಹುದು.

ಅಧ್ಯಕ್ಷರು.—ಈಗ ವಿರೋಧ ಪಕ್ಷದಲ್ಲಿರುವವರು 59 ಜನರು. ಅವರ ಪೈಕಿ ಇದುವರೆಗೂ ಕೇವಲ 20 ಜನರು ಮಾತ್ರ ಮಾತನಾಡಿದ್ದಾರೆ ಮತ್ತು ಕಾಂಗ್ರೆಸ್ ಪಾರ್ಟಿಯವರ ಪೈಕಿ 16 ಜನರು ಮಾತ್ರ ಮಾತನಾಡಿದ್ದಾರೆ. ಆದರೆ ಜಾಸ್ತಿ ಕಾಲ ಕೊಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಅಂತೂ ನಾಳೆ ದಿವಸ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಗಿಸಬೇಕು. ನಾಳೆ ಬೆಳಿಗ್ಗೆ ಎಂಟುವರೆ ಘಂಟೆಗೆ ಚರ್ಚೆಯನ್ನು ಮುಂದುವರಿಸಬಹುದು.

The House will now rise for the day and meet tomorrow at 8-30 A.M.

---

*The House adjourned at Ten Minutes past Five of the Clock to meet again at Thirty Minutes past Eight of the Clock on Saturday, the 15th June 1957.*

---